P£Áð I P ¸PÁðg
C¸®Ä zÁªAiÄ wÃ¦ð£ ªÄÄR¥Å I

£ªÄÆ£ ¸A
(¹«¯ï)
C¸®Ä zÁªAiÄ
wÃ¦ð£
ªÄÄR¥Å I
(Dgï ¦ !")

#$Äª**&** ¹«¯ï £Á'Ai iÁ**(**Ã*****gÄ ªÄ**+**Ä **-** **.** A **.** ¥ï¹ £Á'Ai iÁ®AiÄ
01&2 z£ÆgÄ
3 ¥¹**+**gÄ
5Ã ¸A**(**Ã¥ï ¥Á**7**Ã¯ï8 **2** **.** **.** ¯ï **.** ¯ï9**2**
#$Äª**&** ¹«¯ï £Á'Ai iÁ**(**Ã*****gÄ ªÄ**+**Ä **-** **.** A **.** ¥ï¹ £Á'Ai iÁ®AiÄ
01&2 z£ÆgÄ9

C¸®Ä zÁªÁ ¸A **:;<="">**

ªÁ**(**? **0**@Ä ?? Dgï9**#**£ÄªÄA**+**g**A**8 **2**£ï ¯Ã**C**ï gÁªÄ¥8
>; ª**E**ð**0**@Ä8 ªªÂ¸ÁAiÄ8
ªÁ¸ ªÄÃ**F**£ PÄgÄ**G**g**#H**8 P¸**J**Á **#**ÆÃ**GH**8
01&2 z£ÆgÄ **+**Á®ÆPÄ9
(ªÁ**(** ¥g ª**L**Ã®gÄ **5**Ã **.** ¸ï Dgï Dgï)
«gÄz
¥wªÁ**(0**@Ä?? P9**#$**ï9¸ÆÃªÄ*****ÃRgg**A** **2**£ï **#**£ÄªÄA**+** g**A** 8
N0 ª**E**ð**0**@Ä8 ªÁ¸ **P**gÃ**2**z£ÆgÄ8 P¸**J**Á **#**ÆÃ**GH**8
01&2 z£ÆgÄ **+**Á®ÆPÄ9

(¥wªÁ**(** ¥g ª**L**Ã®gÄ **5**Ã **Q** **.**£ï Dgï)

ದಾವೆ ಹೂಡಿದ ದಿನಾಂಕ	ಃ 26.3.2003		
ದಾವೆಯ ಸ್ವರೂಪ	ಃ ಹಕ್ಕಿನ ಘೋಷಣೆಗಾಗಿ ಮತ್ತು ಶಾಶ್ವತ ನಿರ್ಬಂದಕಾಜ್ಞೆ		
ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ	ಃ 23.1.2014		
ತೀರ್ಪು ಘೋಷಿಸಿದ ದಿನಾಂಕ	ಃ 30.07.2016		
ಒಟ್ಟು ಅವಧಿ	ವರ್ಷ/ಗಳು	ತಿಂಗಳು	ದಿನಗಳು
	13	04	04

C¸®Ä zÁªÁ ¸A 0 <=""

ªÁ(? 0@Ä ?? P9#$ï9¸ÆÃªÄ*ÃRggA 2£ï P929#£ÄªÄA+ gA8
:" ªEð0@Ä8 ªiª¸ÁAiÄR ªLÃ®gÄ8
ªÁ¸ gSï¯ÁASï8 P929#$ï g¸8 PgÃ2z£ÆgÄ zLÙ8
01&2z£ÆgÄ +Á®ÆPÄ9

(ªÁ(¥g ªLÃ®gÄ 5iÃ)

«gÄz

¥iwªÁ(0@Ä?? Dgï9#£ÄªÄA+gA8 2£ï ¯ÃCï gÁªÄ¥8
V> ªEð0@Ä8 ªiª¸ÁAiÄ8
ªÁ¸ ªÄÃF£ PÄgÄGg#H8 P¸JÁ #ÆÃGH8
01&2z£ÆgÄ +Á®ÆPÄ9

(¥iwªÁ(¥g ªLÃ®gÄ 5iÃ .¸ï Dgï Dgï)

ದಾವೆ ಹೂಡಿದ ದಿನಾಂಕ	:: 27.02.2009		
ದಾವೆಯ ಸ್ವರೂಪ	:: ಘೋಷಣೆ ಮತ್ತು ಶಾಶ್ವತ ನಿರ್ಬಂದಕಾಜ್ಞೆ		
ತೀರ್ಪು ಘೋಷಿಸಿದ ದಿನಾಂಕ	:: 30.07.2016		
ಒಟ್ಟು ಅವಧಿ	ವರ್ಷ/ಗಳು	ತಿಂಗಳು	ದಿನಗಳು
	05	04	03

(¸A(Ã¥ï ¥Á7Ã¯ï)
#$ÄªÀ& ¹«¯ï £ÁAiiÁ(Ã*gÄ
01&2z£ÆgÄ9

C zÁ ¸A :;?="> ªÄ+Ä C zÁ ¸A 0 ?="" gF ¸ÁªiÁ£' wÃ¥Àð

ಅಸಲು ದಾವಾ ಸಂ.78:2003ನ್ನು ವಾದಿಯಾದ ಆರ್.ಹನುಮಂತರೆಡ್ಡಿಯವರು ಪ್ರತಿವಾದಿಯಾದ ಕೆ.ಹೆಚ್.ಸೋಮಶೇಖರರೆಡ್ಡಿರವರ ವಿರುದ್ಧ ಗೌರಿಬಿದನೂರು ತಾಲ್ಲೂಕು, ಕಸಬಾ ಹೋಬಳಿ, ಹಿರೇಬಿದನೂರು ಗ್ರಾಮದ ಸ.ನಂ.61:4ರಲ್ಲಿ 36ಗುಂಟೆ ಜಮೀನಿಗೆ

ಸಂಬಂಧಿಸಿ ಹಕ್ಕಿನ ಘೋಷಣೆಗಾಗಿ ಮತ್ತು ಶಾಶ್ವತ ನಿರ್ಬಂದಕಾಜ್ಞೆಯನ್ನು ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಅದೇ ರೀತಿ ಅ ದಾ ಸಂ.259:2009ನ್ನು ವಾದಿಯಾದ ಕೆ.ಹೆಚ್.ಸೋಮಶೇಖರರೆಡ್ಡಿಯವರು ಪ್ರತಿವಾದಿಯೂದ ಆರ್.ಹನುವಂತರೆಡ್ಡಿಯವರ ವಿರುದ್ಧ ಸದರೀ ಗೌರಿಬಿದನೂರು ತಾಲ್ಲೂಕು ಕಸಬಾ ಹೋಬಳಿ ಹಿರೇಬಿದನೂರು ಗ್ರಾಮದ ಸ ನಂ 61:4 ಮತ್ತು 63:5ರಲ್ಲಿ 1 ಎಕರೆ 19 ಗುಂಟೆ ಜಮೀನಿಗೆ ಸಂಬಂಧಿಸಿ ಹಕ್ಕಿನ ಘೋಷಣೆ ಮತ್ತು ಶಾಶ್ವತ ನಿರ್ಬಂದಕಾಜ್ಞೆ ಆದೇಶವನ್ನು ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ.

2. ಈ ಎರಡೂ ದಾವೆಗಳ ಪಕ್ಷಗಾರರು ಮತ್ತು ಸ್ವತ್ತುಗಳು ಒಂದೇ ಆಗಿದ್ದರಿಂದ ಮತ್ತು ಎರಡೂ ಪ್ರಕರಣಗಳಲ್ಲಿ ವಾದಿ ಮತ್ತು ಪ್ರತಿವಾದಿಯವರು ಸಲ್ಲಿಸಿದ ತಮ್ಮ ವಾದ ಮತ್ತು ಪ್ರತಿವಾದ ಪತ್ರದ ಅಂಶಗಳು ಒಂದೇ ಆಗಿದ್ದರಿಂದ, ದಿ:22.10.2013ರ ಆದೇಶದ ಪ್ರಕಾರ ಸದರೀ ಎರಡೂ ಪ್ರಕರಣಗಳನ್ನೂ ಒಟ್ಟಿಗೆ ವಿಚಾರಣೆಗೊಳಪಡಿಸಿ, ಎರಡರಲ್ಲಿಯೂ ಸಾಮಾನ್ಯ ತೀರ್ಪನ್ನು ನೀಡಬೇಕೆಂದು ಆದೇಶ ಮಾಡಲಾಗಿರುತ್ತದೆ. ಅದರಂತೆ ಎರಡೂ ಪ್ರಕರಣಗಳನ್ನೂ ಒಟ್ಟುಕೂಡಿಸಿ ಅ ದಾ ಸಂ 78:2003ರಲ್ಲಿ ಸಾಕ್ಷಿ ವಿಚಾರಣೆ ಮಾಡಲಾಗಿರುತ್ತದೆ. ಸದರೀ ವಿಚಾರಣೆಯು ಅ ದಾ ಸಂ 59:2009ಕ್ಕೂ ಅನ್ವಯವಾಗಿರುತ್ತದೆ. ಅದರಂತೆ ಅ ದಾ ಸಂ 78:2003ರಲ್ಲಿ ಮಾಡಿದ ತೀರ್ಪು ಅ ದಾ ಸಂ.59:2009ಕ್ಕೂ ಅನ್ವಯಿಸುತ್ತದೆ.

3. ಅ ದಾ ಸಂ 78:2003ರಲ್ಲಿನ ವಾದ ಪತ್ರ ಮತ್ತು ಅ ದಾ ಸಂ 59:2009ರಲ್ಲಿನ ಪ್ರತಿವಾದ ಪತ್ರದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿರುತ್ತದೆಃ

ವಾದಿಯು ಈ ದಾವೆಯ ವಾದಪತ್ರದಲ್ಲಿ ತಿಳಿಸಿದಂತೆ, ಗೌರಿಬಿದನೂರು ತಾಲ್ಲೂಕು ಕಸಬಾ ಹೋಬಳಿ, ಹಿರೇಬಿದನೂರು ಗ್ರಾಮದ ಸ ನಂ 61:4 ವಿಸ್ತೀರ್ಣ 36 ಗುಂಟೆ ಜಮೀನು ತನ್ನ ಪಿತ್ರಾರ್ಜಿತ ಸ್ವತ್ತಾಗಿದ್ದು, 40 ವರ್ಷಗಳಿಗಿಂತಲೂ ಹಿಂದಿನಿಂದ ತಾನು ಮತ್ತು ತನ್ನ ತಂದೆಯವರು ಸ್ವತ್ತಿನ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂತಲೂ, ತಮ್ಮ ತಂದೆಯ

ಮರಣಾನಂತರ ತಾನು ನಿರೂಪಾದಿಕ ಮಾಲೀಕತ್ವವನ್ನು ಪಡೆದು, ಸ್ವಾಧೀನಾನುಭವದಲ್ಲಿದ್ದು, ಸಂಬಂಧಿಸಿದ ಇಲಾಖೆಗೆ ಖಾತೆ ಕಂದಾಯಗಳನ್ನು ಕಟ್ಟುತ್ತಿರುತ್ತೇನೆ ಎಂತಲೂ, ಹೀಗಿರುವಾಗ, ಯಾವುದೇ ಹಕ್ಕು ಅಧಿಕಾರ ಹಿತಾಸಕ್ತಿ ಇಲ್ಲದ ಪ್ರತಿವಾದಿಯು ತನ್ನ ಸಹಪಾಠಿಗಳೊಂದಿಗೆ ಸ್ವತ್ತಿನಲ್ಲಿ ಅತಿಕ್ರಮಿಸಲು ಪ್ರಯತ್ನಿಸಿ ತನ್ನ ಸ್ವಾಧೀನಾನುಭವಕ್ಕೆ ಧಕ್ಕೆ ಪಡಿಸಲು ಪ್ರಯತ್ನಿಸಿರುತ್ತಾನೆ ಎಂತಲೂ, ಸದರೀ ಸ್ವತ್ತಿನಲ್ಲಿ ವಾದಿಯು ಮಾವಿನ ಗಿಡಗಳನ್ನು ಬೆಳೆಸಿರುತ್ತಾರೆ ಎಂದು ತಿಳಿಸಿರುತ್ತಾರೆ. ಮುಂದುವರಿದು ದಿಃ25.3.2003ರಂದು ಬೆಳಿಗ್ಗೆ 9 ಗಂಟೆಗೆ ಬಂದು ತಮ್ಮ ಸ್ವಾಧೀನಕ್ಕೆ ಅಡ್ಡಿ ಪಡಿಸಲು ಪ್ರಯತ್ನಿಸಿದಾಗ, ತಮ್ಮ ಕುಟುಂಬದವರು ಅದನ್ನು ತಡೆದಿರುತ್ತಾರೆ ಎಂತಲೂ, ಪ್ರತಿವಾದಿಯು ಬಲಾಢ್ಯನಾದ ಕಾರಣ, ಅವರನ್ನು ಪ್ರತಿ ಬಾರಿ ತಡೆಯಲಾಗುವುದಿಲ್ಲ ಎಂತಲೂ, ಆ ಕಾರಣ ಈ ದಾವೆಯನ್ನು ಸಲ್ಲಿಸಲಾಗಿರುತ್ತದೆ ಎಂತಲೂ, ಇಂದಿಗೂ ವಾದಿಯೇ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂತಲೂ, ಆ ಕಾರಣ ವಾದಿಯರು ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂತಲೂ, ಆದ್ದರಿಂದ ತಾವು ಸಲ್ಲಿಸಿದ ಅ ದಾ ಸಂ 78ಃ2003ರಲ್ಲಿ ತಾವು ಕೋರಿದಂತೆ ಆದೇಶ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

4. ಮುಂದುವರಿದು ಸದರೀ ವಾದಿಯವರು ಅ ದಾ ಸಂ 59ಃ2009ರಲ್ಲಿ ವಾದಿಯ ವಾದಕ್ಕೆ ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸುತ್ತಾ ಸದರೀ ಪ್ರತಿವಾದ ಪತ್ರದಲ್ಲಿ ಅ ದಾ ಸಂ 78ಃ2003ರ ವಾದ ಪತ್ರದ ಅಂಶಗಳನ್ನೇ ಪುನರುಚ್ಛರಿಸುತ್ತಾ, ಆ ಕಾರಣದಿಂದ ಅ ದಾ ಸಂ 59ಃ2009ನ್ನು ಖರ್ಚು ಸಹಿತ ವಜಾ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

5. ದಾವೆಯ ಸಮನ್ಸ್ ತಲುಪಿದ ನಂತರ ಪ್ರತಿವಾದಿಯವರು ನ್ಯಾಯಾಲಯಕ್ಕೆ ತಮ್ಮ ವಕೀಲರ ಮೂಲಕ ಹಾಜರಾಗಿ ವಾದಿಯ ವಾದಕ್ಕೆ ತಮ್ಮ ಪ್ರತಿವಾದವನ್ನು ಸಲ್ಲಿಸಿರುತ್ತಾರೆ.

6. ಪ್ರತಿವಾದಿಯಾದ ಕೆ.ಹೆಚ್.ಸೋಮಶೇಖರರೆಡ್ಡಿಯವರು ಅ ದಾ ಸಂ 78ಃ2003ರಲ್ಲಿನ ಪ್ರತಿವಾದ ಪತ್ರ ಮತ್ತು ಅ ದಾ ಸಂ 59ಃ2009ರಲ್ಲಿನ ವಾದ ಪತ್ರದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿರುತ್ತದೆಃ

7. ತಮ್ಮ ಪ್ರತಿವಾದ ಪತ್ರದಲ್ಲಿ ಪ್ರತಿವಾದಿಯವರು ವಾದಿಯ ವಾದ ಪತ್ರದ ಎಲ್ಲಾ ಅಂಶಗಳನ್ನು ಸಾರಾಸಗಟವಾಗಿ ಅಲ್ಲಗಳೆದಿರುತ್ತಾರೆ. ಮುಂದುವರಿದು, ಸ ನಂ 61ಃ4 ಅಥವಾ 63ಃ5 ಮೂಲತಃ ಚಿನ್ನಪ್ಪ ಬಿನ್ ದೊಡ್ಡ ಹನುಮಂತರಾಯಪ್ಪರವರಿಗೆ ಸೇರಿದ್ದಾಗಿದ್ದು, ಸದರೀ ಅಂಶವು ಕಂದಾಯ ದಾಖಲೆಗಳಲ್ಲಿ ಸ್ಪಷ್ಟವಾಗಿ ನಮೂದಾಗಿರುತ್ತದೆ ಎಂತಲೂ, ಚಿನ್ನಪ್ಪ ಬಿನ್ ಚೀಗಟಗೆರೆ ಗಂಗಪ್ಪ ದಾವಾ ಸ್ವತ್ತು ಮತ್ತು ಸ ನಂ 63ಃ5ರಲ್ಲಿ ಸ್ವಾಧೀನಾನುಭವವನ್ನು ಹೊಂದಿದ್ದಾರೆ ಎಂತಲೂ, ಸ ನಂ 63ಃ5ರಲ್ಲಿ ಸ ನಂ 61ಃ4 ಕೂಡಾ ಸೇರಿಕೊಂಡು ಸದರೀ ಸ್ವತ್ತನ್ನು ಚಿನ್ನಪ್ಪ ಬಿನ್ ಗಂಗಪ್ಪನವರು ದಿಃ25.8.1966ರ ನೊಂದಾಯಿತ ಕ್ರಯ ಪತ್ರದ ಮೂಲಕ ತಮಗೆ ಮಾರಾಟ ಮಾಡಿರುತ್ತಾರೆ ಎಂತಲೂ, ಸದರೀ ಕ್ರಯ ಪತ್ರದಲ್ಲಿ ಹಿರೇಬಿದನೂರು ಗ್ರಾಮದ ಜಮೀನಿನ ಜೊತೆ ಪಕ್ಕದ ಜಮೀನಾದ ಕುರುಬರಹಳ್ಳಿಗೆ ಸೇರಿದ ಜಮೀನು ಸಹಾ ಸೇರಿಕೊಂಡಿದ್ದು, ಸದರೀ ಜಮೀನಿನ ಚಕ್ಕು ಬಂದಿ ಪೂರ್ವಕ್ಕೆ- ನಂಜಾರೆಡ್ಡಿಯವರ ಜಮೀನು, ಪಶ್ಚಿಮಕ್ಕೆ- ಸರ್ಕಾರಿ ರಸ್ತೆ, ದಕ್ಷಿಣಕ್ಕೆ- ಕುರುಬರಹಳ್ಳಿ ಗಡಿ ಮತ್ತು ಕುರುಬರಹಳ್ಳಿ ಗ್ರಾಮಕ್ಕೆ ಸೇರಿದ ಪ್ರತಿವಾದಿಯರ ಪಿತ್ರಾರ್ಜಿತ ಸ್ವತ್ತುಗಳು, ಉತ್ತರಕ್ಕೆ- ಕುರುಬರ ಆಂಜಿನಪ್ಪ ಮತ್ತು ಈಗ ಕೆ ವಿ ಹನುಮಂತರೆಡ್ಡಿಯವರ ಮತ್ತು ಪ್ರತಿವಾದಿಯವರ ಜಮೀನು ಈ ಮಧ್ಯೆ ಇರುವ ಸ್ವತ್ತಿನಲ್ಲಿ ತಾನು ಕ್ರಯಪತ್ರವಾದ ದಿನದಿಂದ ಸ್ವಾಧೀನಾನುಭವದಲ್ಲಿ ಇರುತ್ತೇನೆ ಎಂತಲೂ ತಿಳಿಸಿರುತ್ತಾರೆ.

8. ಮುಂದುವರಿದು, ಮೇಲೆ ತಿಳಿಸಿದ ಚಕ್ಕು ಬಂದಿಯ ವಿಸ್ತೀರ್ಣವು ಸ ನಂ 63ಃ5ರಲ್ಲಿ 20 ಗುಂಟೆ ಮತ್ತು 61ಃ4ರಲ್ಲಿ ಇರುವ 36 ಗುಂಟೆ ಜಮೀನು ಸೇರಿಕೊಂಡು ಒಟ್ಟಿಗೆ 1 ಎಕರೆ 16 ಗುಂಟೆ ಜಮೀನು ಇರುತ್ತದೆ ಎಂತಲೂ, ಸದರೀ ಸ್ವತ್ತನ್ನು ಪ್ರತಿವಾದಿಯು ದಿಃ25.8.1966ರಂದೇ ಖರೀದಿ ಮಾಡಿ ನಿರೂಪಾದಿಕ ಮಾಲೀಕತ್ವವನ್ನು ಪಡೆದು, ಯಾವುದೇ

ತಂಟೆ ತಕರಾರುಗಳಿಲ್ಲದೇ ಬೆಳೆಯನ್ನು ಬೆಳೆಯುತ್ತಾ, ಶಾಂತಿಯುತ ಸ್ವಾಧೀನವನ್ನು ಹೊಂದಿರುತ್ತೇನೆ ಎಂತಲೂ, 1991ನೇ ಇಸವಿಯಲ್ಲಿ ಪ್ರತಿವಾದಿಯು ಮಾವಿನ ಮರಗಳನ್ನು ಬೆಳೆದಿದ್ದು, ಸದರೀ ಮರಗಳು ಈಗ ಬೆಳೆದು ನಿಂತು ಫಲಗಳನ್ನು ನೀಡುವ ಮರಗಳಾಗಿರುತ್ತವೆ ಎಂತಲೂ ತಿಳಿಸಿರುತ್ತಾರೆ.

9. ಮುಂದುವರಿದು, ಸದರೀ ಮೇಲೆ ತಿಳಿಸಿದ ಚಕ್ಕು ಬಂದಿಯ ಪೂರಾ ಸ್ವತ್ತನ್ನು 1949ನೇ ಇಸವಿಯಲ್ಲಿ ಲಕ್ಷ್ಮಣರೆಡ್ಡಿ ಬಿನ್ ಚಿನ್ನಪ್ಪನವರು, ಮೂಪುರುಗರಿ ಗಂಗಪ್ಪ ಬಿನ್ ಚೀಗಟಗೆರೆ ಆದೆಪ್ಪನವರಿಗೆ ಅಡಮಾನ ಮಾಡಿಕೊಟ್ಟಿರುತ್ತಾರೆ ಎಂತಲೂ, ಸದರೀ ಅಡಮಾನ ಪತ್ರದಲ್ಲೂ ಸಹಾ ಮೇಲೆ ತಿಳಿಸಿದ ಚಕ್ಕು ಬಂದಿ ಮತ್ತು ವಿಸ್ತೀರ್ಣವನ್ನು ನಮೂದು ಮಾಡಿರುತ್ತಾರೆ ಎಂತಲೂ, ಆದರೆ ಸದರೀ ಅಡಮಾನ ಪತ್ರದಲ್ಲಿ ಕೇವಲ ಸ ನಂ 63ಃ5ನ್ನು ಮಾತ್ರ ನಮೂದು ಮಾಡಿ ಸ ನಂ 61ಃ4ನ್ನು ನಮೂದು ಮಾಡಿರುವುದಿಲ್ಲ ಎಂತಲೂ, ಆದರೆ ಚಕ್ಕು ಬಂದಿಯ ವಿಸ್ತೀರ್ಣ ಮಾತ್ರ ಎರಡೂ ಸರ್ವೆ ನಂಬರುಗಳಿಗೆ ಸೇರಿಸಿ ತಿಳಿಸಿರುತ್ತಾರೆ. ನಂತರ ಸದರೀ ಸ್ವತ್ತಿನ ಸ್ವಾಧೀನವನ್ನು ಪುನಃ ಚಿನ್ನಪ್ಪ ಬಿನ್ ಗಂಗಪ್ಪನವರು ಪಡೆದಿದ್ದು, ತದನಂತರದಲ್ಲಿ 1966ರ ಕ್ರಯ ಪತ್ರದ ಮೂಲಕ ತಾನು ಖರೀದಿ ಮಾಡಿ ಇಂದಿನವರೆಗೂ ಸದರೀ ಚಕ್ಕುಬಂದಿಯಲ್ಲಿ ತೋರಿಸಿದ 1 ಎಕರೆ 16 ಗುಂಟೆ ಪೂರಾ ಜಮೀನಿನಲ್ಲಿ ತಾನೇ ಸ್ವಾಧೀನಾನುಭವದಲ್ಲಿ ಇರುತ್ತೇನೆ ಎಂತಲೂ, ಹೀಗಿದ್ದರೂ ವಾದಿಯು ಕಂದಾಯ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಬಂದು ಈ ಒಂದು ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆ ಎಂತಲೂ, ವಾದಿಗೂ ಮತ್ತು ದಾವಾ ಸ್ವತ್ತಿಗೂ ಯಾವುದೇ ರೀತಿಯ ಹಕ್ಕು ಅಧಿಕಾರ ಇರುವುದಿಲ್ಲ ಎಂತಲೂ ನುಡಿದಿರುತ್ತಾರೆ.

10. ಮುಂದುವರಿದು ದಿಃ16.12.1986ರಂದು ಚಿಕ್ಕಪ್ಪಯ್ಯ ಎಂಬುವವರು ಹಿರೇಬಿದನೂರು ಗ್ರಾಮದ ಸ ನಂ 61ಃ3ನ್ನು ಕೆ.ನಂಜಾರೆಡ್ಡಿ ಎಂಬುವವರಿಂದ ನೊಂದಾಯಿತ ಕ್ರಯ ಪತ್ರದ ಮೂಲಕ ಖರೀದಿ ಮಾಡಿದ್ದು, ಸದರೀ ಕ್ರಯಪತ್ರದಲ್ಲಿ ಸ್ವತ್ತಿನ ಪಶ್ಚಿಮದ ಕಡೆ ಈ ದಾವೆಯ ಪ್ರತಿವಾದಿ ಅಂದರೆ ತನ್ನ ಜಮೀನು ಇರುತ್ತದೆ ಎಂದು ನಮೂದು

ಮಾಡಿರುತ್ತಾರೆ ಎಂತಲೂ, ಈ ಅಂಶವನ್ನು ನೋಡಿದಾಗ, ಸದರೀ ಚಿಕ್ಕಪ್ಪಯ್ಯನವರು ಪ್ರತಿವಾದಿ ಸ್ವತ್ತಿನ ಬಾಜುದಾರರಾಗಿರುವುದು ಕಂಡು ಬರುತ್ತದೆ ಎಂತಲೂ, ಸದರೀ 16.12.1986ರ ಕ್ರಯಪತ್ರಕ್ಕೆ ತಾನಾಗಲೀ ಅಥವಾ ವಾದಿಯಾಗಲೀ ಪಕ್ಷಗಾರರಾಗಿರುವುದಿಲ್ಲ ಎಂತಲೂ, ಆದ್ದರಿಂದ ಸದರೀ ಚಕ್ಕುಬಂದಿಯಲ್ಲಿ ತೋರಿಸಿದ ಪೂರಾ 1 ಎಕರೆ 16 ಗುಂಟೆ ಜಮೀನಿನಲ್ಲಿ ತಾನೇ ಸ್ವಾಧೀನಾನುಭವದಲ್ಲಿ ಇರುತ್ತೇನೆ ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ ಎಂತಲೂ, ಸದರೀ ತನ್ನ ಸ್ವಾಧೀನಾನುಭವದ ಅನ್ವಯ 1992ನೇ ಇಸವಿಯಲ್ಲಿ ದಾವಾ ಸ್ವತ್ತಿನ ದಕ್ಷಿಣ ಭಾಗದಲ್ಲಿ ಒಂದು ಬೋರ್‌ವೆಲ್‌ನ್ನು ಹಾಕಲಾಗಿರುತ್ತದೆ ಎಂದು ಸದರೀ ಬೋರ್‌ವೆಲ್ ವಿಫಲವಾದ ಕಾರಣ, ಸ ನಂ 63ರಲ್ಲಿ ಮತ್ತೊನಂದು ಬೋರ್‌ವೆಲ್ ಹಾಕಲಾಗಿರುತ್ತದೆ ಎಂತಲೂ, ಸದರೀ ಬೋರ್‌ವೆಲ್ ಸಫಲವಾಗಿದ್ದು, ಸದರೀ ಬೋರ್‌ವೆಲ್‌ನಿಂದ ದಾವಾ ಸ್ವತ್ತಿನಲ್ಲಿರುವ ಮಾವಿನ ಗಿಡಗಳಿಗೆ ಮತ್ತು ಬೆಳೆಗೆ ನೀರನ್ನು ದಾವಾ ಸ್ವತ್ತಿನ ಮೂಲಕವೇ ತೆಗೆದುಕೊಳ್ಳಲಾಗಿರುತ್ತದೆ ಎಂತಲೂ ಮತ್ತು ಸ ನಂ 96ರಲ್ಲಿ ಮತ್ತೊಂದು ಬೋರ್‌ವೆಲ್ ಹಾಕಿದ್ದು ಸದರೀ ಬೋರ್‌ವೆಲ್‌ನ ಪೈಪ್‌ನ್ನೂ ಸಹಾ ದಾವಾ ಸ್ವತ್ತಿನ ಉತ್ತರ ಪೂರ್ವವಾಗಿ ಹಾಕಿ ಮಾವಿನ ಗಿಡಗಳಿಗೆ ಮತ್ತು ಬೆಳೆಗಳಿಗೆ ನೀರನ್ನು ಹಾಯಿಸಲಾಗುತ್ತದೆ ಎಂತಲೂ ತಿಳಿಸಿರುತ್ತಾರೆ. ಹೀಗಿದ್ದರೂ, ಯಾವುದೇ ಕಾರಣಗಳಿಲ್ಲದೇ ವಾದಿಯು ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆ ಎಂತಲೂ, ಆ ಕಾರಣ ವಾದಿಯು ಸಲ್ಲಿಸಿದ ಅ ದಾ ಸಂ 78ಃ2003ನ್ನು ಖರ್ಚು ಸಹಿತ ವಜಾ ಮಾಡಿ ತಾನು ಸಲ್ಲಿಸಿದ ಅ ದಾ ಸಂ 59ಃ2009ನ್ನು ತಾನು ಕೋರಿದಂತೆ ಡಿಕ್ರಿ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

11. ದಿ22.10.2013ರಂದು ಮಾಡಿದ ಆದೇಶದ ಪ್ರಕಾರ ಎರಡೂ ದಾವೆಗಳನ್ನು ಒಟ್ಟುಗೂಡಿಸಿ ಅ ದಾವಾ ಸಂ 78ಃ2003ರಲ್ಲಿಯೇ ಸಾಕ್ಷಿದಾರರ ವಿಚಾರಣೆಯನ್ನು ಮಾಡಲು ಅನುಮತಿ ನೀಡಲಾಗಿರುತ್ತದೆ. ಸದರೀ ಸಾಕ್ಷಿ ವಿಚಾರಣೆ ಅ ದಾವಾ ಸಂ 59ಃ2009ಕ್ಕೆ ಅನ್ವಯವಾಗುತ್ತದೆ.

12. ವಾದ ಪತ್ರ ಮತ್ತು ಪ್ರತಿವಾದ ಪತ್ರಗಳಲ್ಲಿ ಬರೆದ ಅಂಶಗಳ ಆಧಾರದ ಮೇಲೆ ಈ ಕೆಳಗಿನಂತೆ ವಿವಾದಾಂಶಗಳನ್ನು ರಚಿಸಿರುತ್ತಾರೆ. C zÁ ¸A?:;?="">g

«ªÁzÁA*0@Ä??

1. Whether the plaintiff proves that he is the absolute owner in possession and enjoyment of the suit schedule properties ?
2. Wherther the plaintiff proves the alleged interference of the defendant over the suit schedule property ?
3. Whether the defendant proves that he is in possession and enjoyment of the suit schedule property by virtue of the sale deed dtd.25.08.1966?
4. Whether the plaintiff is entitled for the relief as sought for ?
5. What order or decree ?

Addl.issue No.1

1. Whether the defendant proves that he perfected his title by way of adverse possession ?

«ªÁzÁA*0@Ä W .¸ï ¸A90 ?=""

1. Whether the plaintiff proves that, the plaintiff is in possession and enjoyment of 1 acre 19 guntas of land in Sy.No.61/4 and 63/5, which he had acquired by way of Registered sale deed dated 25.8.1966 ?
2. Whether the plaintiff further proves that, the defendant on 15.2.2009 caused interference into the plaintiff's possession by erecting stone pilklars on the Northern side of Sy.No.63/5 ?

3. Whether the defendant proves the contents of para 7 of his written statement ?
4. Whether the plaintiff is entitled for the relief declaration of his right in respect of suit schedule property ?
5. Whether the plaintiff is entitled for the relief of perpetual injunction ?
6. What order or decree ?

13. ವಾದಿಯು ತನ್ನ ದಾವೆಯನ್ನು ರುಜುವಾತು ಪಡಿಸಲು ತನ್ನನ್ನು ಪಿಡಬ್ಲ್ಯೂ 1 ಎಂದು ವಿಚಾರಣೆಗೊಳಪಡಿಸಿಕೊಂಡು ಮತ್ತು ತನ್ನ ಪರವಾಗಿ ಸಾಕ್ಷಿದಾರರಾಗಿ ಶ್ರೀರಾಮರೆಡ್ಡಿ ಎಂಬುವವನ್ನು ಪಿಡಬ್ಲ್ಯೂ 2 ಮತ್ತು ಗಂಗರೆಡ್ಡಿಯವರನ್ನು ಪಿ ಡಬ್ಲ್ಯೂ 3 ಎಂದು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ತಮ್ಮ ಪರವಾಗಿ 13 ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿ ಪಿ 1 ರಿಂದ 13 ಎಂದು ಗುರುತಿಸಲಾಗಿರುತ್ತದೆ. ಪ್ರತಿವಾದಿಯವರು ತನ್ನನ್ನು ಡಿಡಬ್ಲ್ಯೂ 1 ಎಂದು ವಿಚಾರಣೆ ಒಳಪಡಿಸಿಕೊಂಡು, ತನ್ನ ಪರವಾಗಿ ಸಾಕ್ಷಿದಾರರಾದ ಅಪ್ಪಿರೆಡ್ಡಿರವರನ್ನು ಡಿಡಬ್ಲ್ಯೂ 2 ಎಂದು, ಅಂಜಿನಪ್ಪನನ್ನು ಡಿಡಬ್ಲ್ಯೂ 3 ಎಂದು ಮತ್ತು ಗಂಗರೆಡ್ಡಿಯವರನ್ನು ಡಿಡಬ್ಲ್ಯೂ 4 ಎಂದು ವಿಚಾರಣೆಗೆ ಒಳಪಡಿಸಿ, ತಮ್ಮ ಪರವಾಗಿ ಒಟ್ಟಿಗೆ 52 ದಾಖಲೆಗಳನ್ನು ನಿ ಡಿ 1 ಮತ್ತು ನಿ ಡಿ 52 ಎಂದು ಗುರುತಿಸಿಕೊಂಡಿರುತ್ತಾರೆ.

14. ವಾದಿ ಮತ್ತು ಪ್ರತಿವಾದಿಗಳ ಪರ ವಕೀಲರ ವಾದ ವಿವಾದವನ್ನು ಆಲಿಸಲಾಯಿತು ಮತ್ತು ದಾವೆಗೆ ಸಂಬಂಧಿಸಿದ ಸಂಪೂರ್ಣ ಕಡತವನ್ನು ಪರಿಶೀಲನೆ ಮಾಡಲಾಗಿ ಮೇಲ್ಕಂಡ ಅ ದಾ ಸಂ 78៖2003ರವಿವಾದಾಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿದೆ.

ವಿವಾದಾಂಶ 1៖ ನಕಾರಾತ್ಮಕವಾಗಿ

ವಿವಾದಾಂಶ 2៖ ನಕಾರಾತ್ಮಕವಾಗಿ

ವಿವಾದಾಂಶ 3៖ ನಕಾರಾತ್ಮಕವಾಗಿ

ವಿವಾದಾಂಶ 4:: ನಕಾರಾತ್ಮಕವಾಗಿ

ಹೆಚ್ಚುವರಿ ವಿವಾದಾಂಶ 1:: ನಕಾರಾತ್ಮಕವಾಗಿ

ವಿವಾದಾಂಶ 5:: ಆದೇಶದಂತೆ, ಕೆಳಕಂಡ ಕಾರಣಗಳಿಗಾಗಿ,

C zÁ ¸A 0 ?="" gವಿವಾದಾಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿದೆ.

ವಿವಾದಾಂಶ 1:: ಸಕಾರಾತ್ಮಕವಾಗಿ

ವಿವಾದಾಂಶ 2:: ಸಕಾರಾತ್ಮಕವಾಗಿ

ವಿವಾದಾಂಶ 3:: ಸಕಾರಾತ್ಮಕವಾಗಿ

ವಿವಾದಾಂಶ 4:: ಸಕಾರಾತ್ಮಕವಾಗಿ

ವಿವಾದಾಂಶ 5:: ಸಕಾರಾತ್ಮಕವಾಗಿ

ವಿವಾದಾಂಶ 6:: ಆದೇಶದಂತೆ, ಕೆಳಕಂಡ ಕಾರಣಗಳಿಗಾಗಿ,

PÁ g U 0 @Ä

!09 C zÁ ¸A :;?="">g «ªÁzÁA* !8 > ªÄ+Ä C zÁ ¸A 0 ?="" g «ªÁzÁA* ! ªÄ+Ä >: ಈ ಎಲ್ಲಾ ವಿವಾದಾಂಶಗಳು ಒಂದಕ್ಕೊಂದು ಪೂರಕವಾಗಿದ್ದು ಸಾಕ್ಷ್ಯಾಧಾರಗಳನ್ನು ಮತ್ತು ಕಾನೂನಿನ ಅಂಶಗಳನ್ನು ಪರಿಣಾಮಕಾರಿಯಾಗಿ ಚರ್ಚಿಸಲು ಮತ್ತು ಮರು ವಿವರಣೆಯನ್ನು ತಪ್ಪಿಸಲು ಈ ಎಲ್ಲಾ ವಿವಾದಾಂಶಗಳನ್ನು ಏಕಕಾಲಕ್ಕೆ ಚರ್ಚಿಸಿ ನಿರ್ಣಯಕ್ಕೆ ತೆಗೆದುಕೊಳ್ಳಲಾಗಿದೆ.

16. ಅ ದಾ ಸಂ 78:2003ಕ್ಕೆ ಸಂಬಂಧಿಸಿ 1 ಮತ್ತು 3ನೇ ವಿವಾದಾಂಶದ ಪ್ರಕಾರ ದಾವಾ ಸ್ವತ್ತಿನ ನಿರೂಪಾದಿಕ ಮಾಲೀಕನಾಗಿ ತಾನೇ ಸ್ವಾಧೀನಾನುಭವದಲ್ಲಿ ಇರುತ್ತೇನೆ ಎಂಬ ಅಂಶವನ್ನು ರುಜುವಾತುಪಡಿಸುವ ಭಾರ ವಾದಿಯ ಮೇಲಿದ್ದರೆ, ಅ ದಾ ಸಂ 59:2009ಕ್ಕೆ ಸಂಬಂಧಿಸಿ 1 ಮತ್ತು 3ನೇ ವಿವಾದಾಂಶದ ಪ್ರಕಾರ ತಾನು ದಿ:25.8.1966ರಂದು ಖರೀದಿಸಿದ ಸ ನಂ 61:4 ಮತ್ತು 63:5ರ ಒಟ್ಟು ವಿಸ್ತೀರ್ಣ 1 ಎಕರೆ 19 ಗುಂಟೆಗೆ ಸಂಬಂಧಿಸಿ ತಾನೇ

ದಾವಾ ಸ್ವತ್ತಿನ ನಿರೂಪಾದಿಕ ಮಾಲೀಕನಾಗಿ ಸ್ವಾಧೀನಾನುಭವದಲ್ಲಿ ಇರುತ್ತೇನೆ ಎಂಬ ಅಂಶವನ್ನು ರುಜುವಾತು ಪಡಿಸುವ ಭಾರ ಪ್ರತಿವಾದಿಯ ಮೇಲಿರುತ್ತದೆ.

17. ಈ ವಿವಾದಾಂಶಗಳನ್ನು ರುಜುವಾತು ಪಡಿಸಲು ವಾದಿಯು ತನ್ನನ್ನು ಪಿಡಬ್ಲೂ 1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿದ್ದು ತಮ್ಮ ಮುಖ್ಯ ವಿಚಾರಣೆಯಲ್ಲಿ ವಾದ ಪತ್ರದ ಅಂಶಗಳನ್ನು ಪುನಃ ತಿಳಿಸಿದ್ದು, ತನ್ನ ಪರವಾಗಿ ಒಟ್ಟಿಗೆ 13 ದಾಖಲೆಗಳನ್ನು ನಿ ಪಿ 1 ರಿಂದ ನಿ ಪಿ 13 ರಂತೆ ಗುರ್ತಿಸಿಕೊಂಡಿರುತ್ತಾರೆ. ನಿ ಪಿ 1 ಮತ್ತು 2 ಸ ನಂ 63ಃ5 ಮತ್ತು 63ಃ4ಕ್ಕೆ ಸಂಬಂಧಿಸಿದ 2008-09ನೇ ಸಾಲಿನ ಪಹಣಿ ಪತ್ರಿಕೆಗಳಾಗಿದ್ದು, ಸದರೀ ದಾಖಲೆಗಳನ್ನು ಪರಿಶೀಲಿಸಲಾಗಿ ಸ ನಂ 63ಃ5 ರಲ್ಲಿ 0.22ಗುಂಟೆ ಮತ್ತು 63ಃ4ರಲ್ಲಿ 15 ಗುಂಟೆ ಜಮೀನು ಎಂ ಆರ್ ಸಂ 8ಃ1997-98ರ ಪ್ರಕಾರ ವಿಭಾಗದ ಮೂಲಕ ಈ ದಾವೆಯ ಪ್ರತಿವಾದಿಯ ಹೆಸರಿಗೆ ಬಂದಿರುವುದು ಕಂಡು ಬರುತ್ತದೆ. ಸದರೀ ಪಹಣಿ ಪತ್ರಿಕೆಗಳ ಕಲಂ ಸಂ 5ನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಸದರೀ ಸ್ವತ್ತುಗಳಲ್ಲಿ ಮಾವು ಮತ್ತು ತೇಗದ ಗಿಡಗಳು ಇರುತ್ತವೆ ಎಂಬುದು ಸ್ಪಷ್ಟವಾಗಿ ನಮೂದು ಮಾಡಿರುವುದನ್ನು ಕಾಣಬಹುದಾಗಿದೆ. ಅಂದರೆ ಪ್ರತಿವಾದಿಯು ತನ್ನ ಪ್ರತಿವಾದದಂತೆ ತನ್ನ ಜಮೀನಿನಲ್ಲಿ ತಾನು ಮಾವು ಮತ್ತು ತೇಗದ ಗಿಡಗಳನ್ನು ಬೆಳೆದಿರುತ್ತಾರೆ ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ.

18. ನಿ ಪಿ 3 ರಸೀದಿ ಪಟ್ಟಾ ಆಗಿದ್ದು ಸದರೀ ದಾಖಲೆಯ ಪ್ರಕಾರ 1992-93ನೇ ಇಸವಿಯಲ್ಲಿ ಸ ನಂ 54ಃ3ರಲ್ಲಿ 0.22 ಗುಂಟೆ ಮತ್ತು 61ಃ2ರಲ್ಲಿ 0.13 ಗುಂಟೆ ಮತ್ತು 61ಃ4ರಲ್ಲಿ 0.36 ಗುಂಟೆ ಒಟ್ಟು 1 ಎಕರೆ 31 ಗುಂಟೆಗೆ ಸಂಬಂಧಿಸಿ ಈ ದಾವೆಯ ವಾದಿಯು ಕಂದಾಯವನ್ನು ಪಾವತಿಸಿದ ಬಗ್ಗೆ ಕಂಡು ಬರುತ್ತದೆ. ನಿ ಪಿ 4 ಕಂದಾಯ ರಸೀದಿಯಾಗಿದ್ದು, ಸದರಿ ದಾಖಲೆಯ ಪ್ರಕಾರ ದಿಃ25.11.2012ರಂದು ಈ ದಾವೆಯ ವಾದಿಯು ದಾವಾ ಸ್ವತ್ತು ಮತ್ತು ಇತರೆ ಸ್ವತ್ತಿಗೆ ಸಂಬಂಧಿಸಿ ಕಂದಾಯ ಪಾವತಿಸಿರುವುದು ಕಂಡು ಬರುತ್ತದೆ. ನಿ ಪಿ 5 ರಿಂದ 8 1980-81ರಿಂದ 1997-98ರ ವರೆಗಿನ ನಾಲ್ಕು ಪಹಣಿ ಪತ್ರಿಕೆಗಳಾಗಿದ್ದು, ಆ ಪೈಕಿ ನಿ ಪಿ 5ರ ಪ್ರಕಾರ ಸ ನಂ 61ಃ4 ವಾದಿಯ ವಾದದ ಪ್ರಕಾರ ಮೂಲತಃ ಚಿನ್ನಪ್ಪ ಬಿನ್ ದೊಡ್ಡ

ಹನುಮಂತರಾಯಪ್ಪನವರಿಗೆ ಅವರ ಪಿತ್ರಾರ್ಜಿತವಾಗಿ ಬಂದಿರುವುದು ಕಂಡು ಬರುತ್ತದೆ. ನಂತರ ನಿ ಪಿ 6 ರಿಂದ 8ರ ಪ್ರಕಾರ ದಾವಾ ಸ್ವತ್ತು ಪ್ರಸ್ತುತ ವಾದಿಯಾದ ಹನುಮಂತರೆಡ್ಡಿಯವರ ಹೆಸರಿಗೆ ಐಹೆಚ್‌ಆರ್ ಸಂ.16ಃ1983-84ರ ಪ್ರಕಾರ ವರ್ಗಾವಣೆ ಆಗಿದ್ದು, ಸದರೀ ವಾದಿಯ ಹೆಸರು ಈ ದಾವೆಯನ್ನು ಸಲ್ಲಿಸುವ ಹಿಂದಿನ ವರ್ಷ ಅಂದರೆ 2001-02ರವರೆಗೂ ಮುಂದುವರಿದಿರುವುದು ಕಂಡು ಬರುತ್ತದೆ.

19. ಮುಂದುವರಿದು ವಾದಿಯ ಪರ ವಕೀಲರು ತಮ್ಮ ವಾದ ಮಂಡನೆಯ ಸಮಯದಲ್ಲಿ ದಾವಾ ಸ್ವತ್ತು ಈ ದಾವೆಯ ಪ್ರತಿವಾದಿಗೆ ಯಾವುದೇ ರೀತಿ ಸಂಬಂಧ ಇರುವುದಿಲ್ಲ ಮತ್ತು ದಾವಾ ಸ್ವತ್ತನ್ನು ವಾದಿಯು ಪಿತ್ರಾರ್ಜಿತವಾಗಿ ಪಡೆದಿರುತ್ತೇನೆ ಎಂದು ತಿಳಿಸಿರುತ್ತಾರೆ. ಆದರೆ, ಇಲ್ಲಿ ನಾವು ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ನಿ ಪಿ 5 ರಿಂದ 8ರ ದಾಖಲಾತಿಗಳನ್ನು ನೋಡಿದಾಗ, ದಾವಾ ಸ್ವತ್ತು ಮೂಲತಃ ಚಿನ್ನಪ್ಪ ಬಿನ್ ದೊಡ್ಡ ಹನುಮಂತರಾಯಪ್ಪನವರಿಗೆ ಸೇರಿದ್ದಾಗಿದ್ದು ನಿ ಪಿ 6ರ ಪ್ರಕಾರ ನೇರವಾಗಿ ಚಿನ್ನಪ್ಪರವರಿಂದ ಈ ದಾವೆಯ ವಾದಿಯ ಹೆಸರಿಗೆ ಪವತಿ ವಾರಸಿನ ಮುಖಾಂತರ ವರ್ಗಾವಣೆ ಆಗಿರುತ್ತದೆ ಎಂಬುದು ಕಂಡು ಬರುತ್ತದೆ. ಈ ಅಂಶವನ್ನು ವಿವರಣೆಗೆ ತೆಗೆದುಕೊಂಡಾಗ, ಮೊದಲಿಗೆ ನಾವು ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ಈ ದಾವೆಯ ವಾದಿಯೂದ ಹನುಮಂತರೆಡ್ಡಿಯವರ ತಂದೆಯ ಹೆಸರು ರಾಮಪ್ಪ. ಆದರೆ, ನಿ ಪಿ 5 ಮತ್ತು 6ರಲ್ಲಿರುವ ಚಿನ್ನಪ್ಪ ಬಿನ್ ದೊಡ್ಡ ಹನುಮಂತರಾಯಪ್ಪನವರಿಗೆ ಯಾವ ರೀತಿಯ ಸಂಬಂಧ ಇರುತ್ತದೆ ಎಂಬ ಬಗ್ಗೆ ಯಾವುದೇ ರೀತಿಯ ದಾಖಲೆಗಳು ಇರುವುದಿಲ್ಲ. ಕಾರಣ, ಸದರೀ ಚಿನ್ನಪ್ಪನವರಿಂದ ವಾದಿಯ ಹೆಸರಿಗೆ ಐಹೆಚ್‌ಆರ್ ಸಂ 16ಃ1983-84ರಂತೆ ಪವತಿ ವಾರಸಿನ ಮೂಲಕ ಖಾತೆ ಬದಲಾವಣೆ ಆಗಿದೆ ಎಂದ ಮಾತ್ರಕ್ಕೆ, ಸದರೀ ಚಿನ್ನಪ್ಪ ಮತ್ತು ಪ್ರಸ್ತುತ ವಾದಿಯ ನಡುವೆ ಸಂಬಂಧ ಇದೆ ಎಂದು ಊಹೆ ಮಾಡಿಕೊಳ್ಳಲಾಗುವುದಿಲ್ಲ.

20. ಅಲ್ಲದೇ, ಇಲ್ಲಿ ನಾವು ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ವಾದಿಯು ದಾವಾ ಸ್ವತ್ತು ತನಗೆ ಐಹೆಚ್‌ಆರ್ ಸಂ 16ಃ1983-84ರ ಮುಖಾಂತರ ಬಂದಿರುತ್ತದೆ ಎಂದು

ಹೇಳುತ್ತಾರೆ ಹೊರತು, ಕನಿಷ್ಟ ಪಕ್ಷ ಸದರೀ ಮ್ಯುಟೇಶನ್ ಆದೇಶದ ಪ್ರತಿಯನ್ನೂ ಸಹಾ ಹಾಜರುಪಡಿಸಿರುವುದಿಲ್ಲ. ಹೀಗಿರುವಾಗ, ವಾದಿಯ ಹೆಸರಿಗೆ ಯಾವ ರೀತಿಯಲ್ಲಿ ಕಂದಾಯ ದಾಖಲೆಗಳು ನೇರವಾಗಿ ಚಿನ್ನಪ್ಪ ಬಿನ್ ದೊಡ್ಡ ಹನುಮಂತರಾಯಪ್ಪನವರಿಂದ ವರ್ಗಾವಣೆ ಆಗಿರುತ್ತದೆ ಎಂಬ ಬಗ್ಗೆ ಸಂಶಯ ಉಂಟಾಗುತ್ತದೆ. ಕಾರಣ, ದಾವಾ ಸ್ವತ್ತು ತನ್ನ ಪಿತ್ರಾರ್ಜಿತ ಸ್ವತ್ತಾಗಿರುತ್ತದೆ ಎಂದು ವಾದಿಯು ಹೇಳಿದಾಗ, ಅದನ್ನು ಸರಿಯಾದ ಸಾಕ್ಷ್ಯಾಧಾರಗಳ ಮುಖಾಂತರ ರುಜುವಾತು ಪಡಿಸುವ ಭಾರ ವಾದಿಯ ಮೇಲೆ ಇರುತ್ತದೆ. ಈ ರೀತಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸದೇ ಕೇವಲ ತನಗೆ ದಾವಾ ಸ್ವತ್ತು ಪಿತ್ರಾರ್ಜಿತವಾಗಿ ಬಂದಿರುತ್ತದೆ ಆ ಬಗ್ಗೆ ತಾನು ಪಹಣಿಯನ್ನು ಹಾಜರುಪಡಿಸಿರುತ್ತೇನೆ, ಆ ಮೂಲಕ ತಾನು ದಾವಾ ಸ್ವತ್ತಿನ ನಿರೂಪಾದಿಕ ಮಾಲೀಕತ್ವವನ್ನು ಹೊಂದಿರುತ್ತೇನೆ ಎಂಬ ವಾದಿಯ ವಾದವನ್ನು ಸಂಪೂರ್ಣವಾಗಿ ನಂಬಲರ್ಹವಾಗಿರುವುದಿಲ್ಲ.

21. ಮುಂದುವರಿದು, ವಾದಿಯ ಪರ ವಕೀಲರು, ದಾವಾ ಸ್ವತ್ತಿನಲ್ಲಿ ಸುಮಾರು 40 ವರ್ಷಗಳಿಂದ ವಾದಿಯ ತಂದೆ ಸ್ವಾಧೀನಾನುಭವದಲ್ಲಿದ್ದು, ಅವರ ಮರಣಾ ನಂತರ ವಾದಿಯು ದಾವಾ ಸ್ವತ್ತಿನ ಸ್ವಾಧೀನಾನುಭವವನ್ನು ಪಡೆದುಕೊಂಡಿರುತ್ತಾರೆ ಎಂದು ವಾದ ಮಂಡನೆಯನ್ನು ಮಂಡಿಸಿರುತ್ತಾರೆ. ಆದರೆ, ಇಲ್ಲಿ ನಾವು ಅತೀ ಅವಶ್ಯಕವಾಗಿ ಗಮನಿಸಲೇಬೇಕಾದ ಪ್ರಮುಖ ಅಂಶವೆಂದರೆ, ನಿ ಪಿ 6ರ ದಾಖಲೆಯ ಪ್ರಕಾರ, ದಾವಾ ಸ್ವತ್ತು ಚಿನ್ನಪ್ಪ ಬಿನ್ ದೊಡ್ಡ ಹನುಮಂತರಾಯಪ್ಪನವರಿಂದ ನೇರವಾಗಿ ವಾದಿಯ ಹೆಸರಿಗೆ ಪವತಿ ವಾರಸಿನ ಮುಖಾಂತರ ವರ್ಗಾವಣೆ ಆಗಿರುತ್ತದೆ ಎಂಬುದು ತಿಳಿಯಪಡಿಸಲಾಗಿರುತ್ತದೆ. ಒಂದು ವೇಳೆ ವಾದಿಯ ತಂದೆಯಾದ ರಾಮಪ್ಪನವರು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ 40 ವರ್ಷಗಳಿಗಿಂತಲೂ ಹಿಂದಿನಿಂದ ಇದ್ದುದ್ದೇ ಆಗಿದ್ದರೆ, ಯಾವ ಕಾರಣದಿಂದ ಅವರು ತಮ್ಮ ಹೆಸರಿಗೆ ಕಂದಾಯ ದಾಖಲೆಗಳನ್ನು ವರ್ಗಾವಣೆ ಮಾಡಿಕೊಳ್ಳಲಿಲ್ಲ ಎಂಬ ಸಹಜವಾದ ಪ್ರಶ್ನೆ ಉದ್ಭವವಾಗುತ್ತದೆ. ಕನಿಷ್ಟಪಕ್ಷ ಸದರೀ ವಾದಿಯ ತಂದೆ 40 ವರ್ಷಗಳ ಸ್ವಾಧೀನಾನುಭವವನ್ನು ಹೊಂದಿದ್ದೇ ಆಗಿದ್ದಲ್ಲಿ, ಸದರೀ ಸ್ವತ್ತಿಗೆ ಸಂಬಂಧಿಸಿದ ಪಹಣಿಗಳ ಸ್ವಾಧೀನದಾರರ ಕಾಲಂನಲ್ಲಾದರೂ

ಅವರ ಹೆಸರನ್ನು ನಮೂದು ಮಾಡಬಹುದಾಗಿತ್ತು. ಈ ಯಾವುದೇ ದಾಖಲೆಗಳಲ್ಲಿ ವಾದಿಯ ತಂದೆ ರಾಮಪ್ಪನವರು ಸ್ವಾಧೀನದಲ್ಲಿದ್ದರು ಎಂಬ ಬಗ್ಗೆ ನಮೂದು ಇರುವುದಿಲ್ಲ.

22. ಇಲ್ಲಿ ನಾವು ಗಮನಿಸಲೇಬೇಕಾದ ಮತ್ತೊಂದು ಅಂಶವೆಂದರೆ, ವಾದಿಯ ತಂದೆ ಸದರೀ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇದ್ದುದ್ದೇ ಆಗಿದ್ದರೆ, ಆ ಬಗ್ಗೆ ಯಾವುದಾದರೂ ಇತರೆ ದಾಖಲೆಗಳನ್ನಾದರೂ ನ್ಯಾಯಾಲಯಕ್ಕೆ ಹಾಜರುಪಡಿಸಬಹುದಾಗಿತ್ತು ಅಥವಾ ದಾವಾ ಸ್ವತ್ತಿಗೆ ಸಂಬಂಧಿಸಿ ಸಂಬಂಧಪಟ್ಟ ಇಲಾಖೆಗೆ ಕಂದಾಯವನ್ನಾದರೂ ಕಟ್ಟಬಹುದಾಗಿತ್ತು. ಆದರೆ, ಈ ಬಗ್ಗೆ ಯಾವುದೇ ಒಂದು ಸಣ್ಣ ದಾಖಲೆಯನ್ನೂ ಸಹಾ ವಾದಿಯು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಹೀಗಿರುವಾಗ, ಯಾವುದೇ ಸಾಕ್ಷ್ಯಾಧಾರಗಳಿಲ್ಲದೇ, ವಾದಿಯ ತಂದೆ 40 ವರ್ಷಗಳಿಗಿಂತಲೂ ದಾವಾ ಸ್ವತ್ತಿನ ಸ್ವಾಧೀನಾನುಭವವನ್ನು ಹೊಂದಿದ್ದರು ಎಂಬ ವಾದಿಯ ವಾದವನ್ನು ನಂಬುವುದು ಸಮಂಜಸವಾಗಿರುವುದಿಲ್ಲ.

23. ಮುಂದುವರಿದು, ವಾದಿಯು ದಾವಾ ಸ್ವತ್ತಿನಲ್ಲಿ ತಾನೇ ಮಾವಿನ ಮರಗಳನ್ನು ಬೆಳೆದಿರುತ್ತೇನೆ ಎಂದು ನುಡಿದಿರುತ್ತಾರೆ. ಆದರೆ ಇಲ್ಲಿ ನಾವು ಗಮನಿಸಲೇಬೇಕಾದ ಪ್ರಮುಖ ಅಂಶವೆಂದರೆ, ವಾದಿಯು ತಾನೇ ಹಾಜರುಪಡಿಸಿದ ದಾವಾ ಸ್ವತ್ತಿಗೆ ಸಂಬಂಧಪಟ್ಟ ಯಾವುದೇ ಪಹಣಿ ಪತ್ರಿಕೆಗಳನ್ನಾಗಲೀ ಅಥವಾ ಇತರೆ ದಾಖಲೆಗಳಲ್ಲಿ ಸ ನಂ 61:4ರಲ್ಲಿ ಮಾವಿನ ಮತ್ತು ಇತರೆ ಹಲಸು ಹಣ್ಣಿನ ಮರಗಳು ಇರುವ ಬಗ್ಗೆ ಎಲ್ಲಿಯೂ ನಮೂದು ಮಾಡಿರುವುದಿಲ್ಲ. ಆದರೆ, ವಾದಿಯೇ ಹಾಜರುಪಡಿಸಿದ ಸ ನಂ 63:4 ಮತ್ತು 63:5ಕ್ಕೆ ಸಂಬಂಧಿಸಿದ ನಿ ಪಿ 1 ಮತ್ತು 2ರಂತೆ ಪಹಣಿಗಳನ್ನು ನೋಡಿದಾಗ, ಸದರೀ ಸ್ವತ್ತುಗಳು ಈ ದಾವೆಯ ಪ್ರತಿವಾದಿಯ ಹೆಸರಿನಲ್ಲಿದ್ದು, ಪಹಣಿಗಳ ಕಾಲಂ ನಂ 7ನ್ನು ನೋಡಿದಾಗ, ಸದರೀ ಸ್ವತ್ತುಗಳಲ್ಲಿ ಮಾವು ಮತ್ತು ತೇಗದ ಗಿಡಗಳು ಇರುತ್ತವೆ ಎಂಬ ಬಗ್ಗೆ ಸ್ಪಷ್ಟವಾಗಿ ನಮೂದು ಮಾಡಿರುವುದು ಕಂಡು ಬರುತ್ತದೆ. ಈ ಅಂಶವನ್ನು ನೋಡಿದಾಗ, ಪ್ರತಿವಾದಿಯು ತಾನು ತಿಳಿಸುವಂತೆ, ಸ ನಂ 63:5ರಲ್ಲಿ ಮಾವಿನ ಮತ್ತು ತೇಗದ ಮರಗಳು ಇದ್ದು ಅವುಗಳನ್ನು ಪ್ರತಿವಾದಿಯ ವಾದದಂತೆ ಅವರೇ ಬೆಳೆಸಿರಬಹುದು ಎಂದು ಊಹೆ ಮಾಡಿಕೊಳ್ಳಬಹುದಾಗಿದೆ.

24. ನಿ ಪಿ 10 ಕಂದಾಯ ರಸೀದಿಯಾಗಿದ್ದು, ಸದರೀ ಕಂದಾಯವನ್ನು ಈ ದಾವೆಯ ಪ್ರತಿವಾದಿಯು ಸ ನಂ 63:1 ರಿಂದ ಸ ನಂ 63:5ರವರೆಗಿನ ಜಮೀನಿಗೆ ಕಂದಾಯ ಪಾವತಿಸಿದ ಬಗ್ಗೆ ದಾಖಲೆಯಾಗಿರುತ್ತದೆ. ಇಲ್ಲಿ ನಾವು ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ಒಂದು ವೇಳೆ ಸದರೀ ಕಂದಾಯವನ್ನು ನಿ ಪಿ 10ರಂತೆ ಪ್ರತಿವಾದಿಯವರೇ ತುಂಬಿದ್ದರೆ, ಸದರೀ ಕಂದಾಯ ತುಂಬಿದ ಬಗ್ಗೆ ರಸೀದಿ ಪ್ರತಿವಾದಿಯ ಬಳಿ ಇರುತ್ತದೆ. ಆದರೆ, ಸದರೀ ರಸೀದಿ ವಾದಿಯ ಸುಪರ್ದಿಗೆ ಹೇಗೆ ಬಂತು ಎಂಬ ಸಂಶಯ ಉಂಟಾಗುತ್ತದೆ. ನಿ ಪಿ 11 ದಿ:10.5.2002ನೇ ಇಸವಿಯ ನೊಂದಾಯಿತ ಕ್ರಯಪತ್ರದ ದೃಡೀಕೃತ ನಕಲಾಗಿದ್ದು, ಸದರೀ ಕ್ರಯಪತ್ರವು ಹಿರೇಬಿದನೂರು ಗ್ರಾಮದ ಸ ನಂ 62:4ರಲ್ಲಿ 1 ಎಕರೆ 27 ಗುಂಟೆಗೆ ಸಂಬಂಧಿಸಿ ಕೃಷ್ಣಾರೆಡ್ಡಿಯವರಿಗೆ ವೆಂಕಟಪ್ಪನವರ ಮಗ ಆಂಜಿನಪ್ಪ ಮತ್ತು ಆತನ ಮಕ್ಕಳು ಬರೆದುಕೊಟ್ಟಿರುವುದು ಕಂಡು ಬರುತ್ತದೆ. ಸದರೀ ಕ್ರಯ ಪತ್ರದ ಚಕ್ಕು ಬಂದಿಯನ್ನು ನೋಡಿದಾಗ, ಪೂರ್ವಕ್ಕೆ ಗಂಗಾರೆಡ್ಡಿಯವರ ಜಮೀನು, ಪಶ್ಚಿಮಕ್ಕೆ-ಈ ದಾವೆಯ ಪ್ರತಿವಾದಿಯ ಜಮೀನು ಮತ್ತು ಉತ್ತರಕ್ಕೆ- ಅದೇ ಜಮೀನಿನ ಈ ದಾವೆಯ ವಾದಿಯವರಿಗೆ ಸೇರಿದ ಜಮೀನು ಮತ್ತು ದಕ್ಷಿಣಕ್ಕೆ – ಕೆ.ಸಿ.ಗಂಗಾರೆಡ್ಡಿಯವರ ಜಮೀನು ಎಂದು ನಮೂದು ಮಾಡಿರುತ್ತಾರೆ. ಸದರೀ ಅಂಶದ ವಿಚಾರವಾಗಿ ವಾದಿಯ ಪರ ವಕೀಲರು ನಿ ಪಿ 11ರ ಕ್ರಯಪತ್ರದಲ್ಲಿ ಸ ನಂ 62:4ಕ್ಕೆ ಸಂಬಂಧಿಸಿ ಉಳಿಕೆ ಜಮೀನು ಈ ದಾವೆಯ ವಾದಿಯವರಿಗೆ ಸೇರಿರುತ್ತದೆಮತ್ತು ಸದರೀ ಸ್ವತ್ತಿನ ಪಶ್ಚಿಮಕ್ಕೆ ಈ ದಾವೆಯ ಪ್ರತಿವಾದಿಯ ಜಮೀನಿರುತ್ತದೆ ಎಂದು ತಿಳಿಸಿರುತ್ತಾರೆ.

25. ಇಲ್ಲಿ ನಾವು ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ವಾದಿಯು ಈ ದಾವೆಯನ್ನು ಸ ನಂ 61:4ಕ್ಕೆ ಸಂಬಂಧಿಸಿ ಸಲ್ಲಿಸಿರುತ್ತಾರೆ. ಆದರೆ, ನಿ ಪಿ 11ನ್ನು ಸ ನಂ 62:4ರ ಜಮೀನಿಗೆ ಸಂಬಂಧಿಸಿದ ಕ್ರಯಪತ್ರವಾಗಿದ್ದು ಅದರ ಉತ್ತರ ಭಾಗದಲ್ಲಿ ಸದರೀ ಸ ನಂ 62:4ಕ್ಕೆ ಸಂಬಂಧಿಸಿದ ಉಳಿಕೆ ಜಮೀನು ಈ ದಾವೆಯ ವಾದಿಯವರಿಗೆ ಸೇರಿದ್ದು ಎಂದು ನಮೂದು ಮಾಡಿರುವುದು ಕಂಡು ಬರುತ್ತದೆ. ಹೀಗಿರುವಾಗ, ಸದರೀ ಪಶ್ಚಿಮದಲ್ಲಿರುವ

ವಾದಿಯ ಸ್ವತ್ತು ಸ ನಂ 62:4ಕ್ಕೆ ಸಂಬಂಧಿಸಿದ್ದಾಗಿದ್ದು ಈ ಒಂದು ದಾವಾ ಸ್ವತ್ತಿಗೆ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ. ಆದ್ದರಿಂದ ನಿ ಪಿ 11ರ ದಾಖಲೆಯು ಈ ಒಂದು ಪ್ರಕರಣದ ವಿಷಯ ವಸ್ತುವಿಗೆ ಯಾವುದೇ ರೀತಿಯಿಂದಲೂ ಸಂಬಂಧಿಸಿರುವುದಿಲ್ಲ. ಆದ್ದರಿಂದ ಸದರೀ ಕ್ರಯ ಪತರದ ಬಗ್ಗೆ ಹೆಚ್ಚಿನ ವಿವರಣೆ ಅವಶ್ಯಕತೆ ಇರುವುದಿಲ್ಲ.

26. ನಿ ಪಿ 12 ಸ ನಂ 62:5ರಲ್ಲಿ 10 ಗುಂಟೆಯ ಜಮೀನಿಗೆ ಸಂಬಂಧಿಸಿದ 13 ವರ್ಷದ ಋಣಭಾರ ಪತ್ರವಾಗಿರುತ್ತದೆ. ಆದರೆ, ಸದರೀ ದಾಖಲೆಯಲ್ಲಿ ಸದರೀ ಸ್ವತ್ತಿಗೆ ಸಂಬಂಧಿಸಿದ ಯಾವುದೇ ಋಣಭಾರ ಇರುವುದು ಕಂಡು ಬಂದಿರುವುದಿಲ್ಲ. ನಿ ಪಿ 13 - ದಿ:9.4.1964ನೇ ಇಸವಿಯಲ್ಲಿ ತಾತಣ್ಣನವರ ದೊಡ್ಡಗಂಗಪ್ಪನವರ ಮಗ ಚಿನ್ನಪ್ಪನವರಿಗೆ ದೊಡ್ಡ ಹನುಮಂತರಾಯಪ್ಪನವರ ಚಿನ್ನಪ್ಪನ ಮಕ್ಕಳಾದ ರಾಮಪ್ಪ ಮತ್ತು ಲಕ್ಷ್ಮಪ್ಪನವರು ಸ ನಂ 63:5 ರಲ್ಲಿ ಭಾಗಾಯ್ತು 7 ಗುಂಟೆ ಮತ್ತು ಖುಷ್ಕಿ 13 ಗುಂಟೆ ಆಕಾರ 12ವುಳ್ಳ ಜಮೀನಿಗೆ ಚಕ್ಕು ಬಂದಿ ಪೂರ್ವಕ್ಕೆ- ನಮ್ಮ ಜಮೀನು, ಅಂದರೆ ಈ ಕ್ರಯಪತ್ರವನ್ನು ಬರೆದುಕೊಟ್ಟ ಚಿನ್ನಪ್ಪನ ಮಕ್ಕಳಿಗೆ ಸೇರಿದ ಜಮೀನು, ಪಶ್ಚಿಮಕ್ಕೆ ಓಣಿ, ಉತ್ತರಕ್ಕೆ- ಅಕ್ಕಸಾಲಿಗರ ಚಿನ್ನಯ್ಯಗಾರಿರವರ ಜಮೀನು, ದಕ್ಷಿಣಕ್ಕೆ ಕುರುಬರಹಳ್ಳಿ ಗಡಿ. ಈ ಮಧ್ಯೆ ಇರುವ ಜಮೀನನ್ನು ಮತ್ತು ಇತರೆ ಜಮೀನನ್ನು ನೊಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುವುದು ಕಂಡು ಬರುತ್ತದೆ.

27. ಮುಂದುವರಿದು, ನಾವು ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ಸದರೀ ಕ್ರಯಪತ್ರವನ್ನು ಈ ದಾವೆಯ ವಾದಿಯ ತಾತನವರೆಂದು ಹೇಳುವ ಚಿನ್ನಪ್ಪ ಮತ್ತು ಆತನ ಮಕ್ಕಳಾದ ರಾಮಪ್ಪ ಮತ್ತು ಲಕ್ಷ್ಮಪ್ಪನವರು ಸೇರಿಕೊಂಡು ಚೀಗಟಗೆರೆ ಗ್ರಾಮದ ತಾತಣ್ಣನವರ ದೊಡ್ಡಗಂಗಪ್ಪನವರ ಮಗ ಚಿನ್ನಪ್ಪನವರಿಗೆ ಬರೆದುಕೊಟ್ಟಿರುವುದು ಕಂಡು ಬರುತ್ತದೆ. ಹೀಗಿರುವಾಗ, ಸದರೀ ಕ್ರಯ ಪತ್ರದ ಮೂಲ ಪ್ರತಿಯು ಖರೀದಿದಾರರ ಬಳಿ ಇರುತ್ತದೆಯೇ ಹೊರತು, ಮಾರಾಟಗಾರರ ಬಳಿ ಇರುವುದಿಲ್ಲ. ಆದರೆ, ಈ ಒಂದು ದಾವೆಯಲ್ಲಿ ಸದರೀ ನಿ ಪಿ 13ರ ಮುಖಾಂತರ ಸ್ವತ್ತುಗಳನ್ನು ವಾದಿಯ ತಾತನವರು ಎಂದು

ಹೇಳುವ ಚಿನ್ನಪ್ಪನವರು ಮತ್ತು ಆತನ ಮಕ್ಕಳು ದೊಡ್ಡಗಂಗಪ್ಪನ ಮಗ ಚಿನ್ನಪ್ಪನವರಿಗೆ ಮಾರಾಟ ಮಾಡಿದಾಗ, ಸದರೀ ಕ್ರಯ ಪತ್ರವು ದೊಡ್ಡ ಗಂಗಪ್ಪನ ಮಗ ಚಿನ್ನಪ್ಪನ ಬಳಿ ಇರಬೇಕೇ ಹೊರತು, ವಾದಿ ಅಥವಾ ಅವರ ಪೂರ್ವಜರ ಬಳಿ ಇರಲು ಸಾಧ್ಯವಿಲ್ಲ. ಹೀಗಿರುವಾ, ವಾದಿಯು ಮಾರಾಟಗಾರರ ವಾರಸುದಾರರಾಗಿದ್ದಾಗ ಸದರೀ ಕ್ರಯ ಪತ್ರದ ಮೂಲ ಪ್ರತಿಯನ್ನು ಹೇಗೆ ತಮ್ಮ ಬಳಿ ಇಟ್ಟುಕೊಂಡು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತಾರೆ ಎಂಬ ಬಗ್ಗೆ ಸಂಶಯ ಉಂಟಾಗುತ್ತದೆ. ಈ ಅಂಶವನ್ನು ಗಮನಿಸಿದಾಗ, ಸದರೀ ಕ್ರಯ ಪತ್ರದ ಕುರಿತು ಹಲವಾರು ಸತ್ಯಾಂಶಗಳನ್ನು ವಾದಿಯು ಮರೆ ಮಾಡಿರಬಹುದು ಎಂದು ಊಹೆ ಮಾಡಿಕೊಳ್ಳಬಹುದಾಗಿದೆ.

28. ಮುಂದುವರಿದು, ವಾದಿಯ ಪರ ವಕೀಲರು ತಮ್ಮ ವಾದ ಮಂಡನೆಯ ಸಮಯದಲ್ಲಿ ನಿ ಪಿ 13ರ ದಾಖಲೆಯನ್ನು ಪರಿಶೀಲಿಸಿದಾಗ, ಸ ನಂ 63ಃ5ರ ಸ್ವತ್ತಿನ ಪೂರ್ವದಲ್ಲಿ ನಮ್ಮ ಜಮೀನು ಎಂದು ಬರೆದಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಅಂದರೆ, ಸದರೀ ಸ ನಂ 63ಃ5ರ ಪೂರ್ವದಲ್ಲಿರುವುದು ವಾದಿಯ ತಾತನವರಾದ ಚಿನ್ನಪ್ಪನವರಿಗೆ ಸೇರಿದ ಸ ನಂ 61ಃ4 ಆಗಿರುತ್ತದೆ ಎಂಬುದು ವಾದಿಯ ವಾದವಾಗಿರುತ್ತದೆ. ಅಲ್ಲದೇ ಮುಂದುವರಿದು, ಹೇಳುವಂತೆ ಒಂದು ವೇಳೆ ಪ್ರತಿವಾದಿಯ ವಾದದಂತೆ ಸದರೀ ಸ ನಂ 61ಃ4, ಸ ನಂ 63ಃ5ರಲ್ಲಿ ಸೇರಿಕೊಂಡಿದ್ದೇ ಆಗಿದ್ದಲ್ಲಿ, ಸದರೀ ನಿ ಪಿ 13ರ ಕ್ರಯ ಪತ್ರದಲ್ಲಿ ನಮ್ಮ ಜಮೀನು ಎಂದು ತೋರಿಸುವ ಬದಲು ಪ್ರತಿವಾದಿಯವರಿಗೆ ಸೇರಿದ ಜಮೀನು ಎಂದು ತೋರಿಸಬಹುದಿತ್ತು ಎಂದು ವಾದ ಮಂಡಿಸಿರುತ್ತಾರೆ. ಆದರೆ, ಇಲ್ಲಿ ನಾವು ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ಮೊದಲನೆಯದಾಗಿ ಸದರೀ ಕ್ರಯ ಪತ್ರದಲ್ಲಿ ಸ ನಂ 63ಃ5ರ ಜಮೀನಿನ ಪೂರ್ವಕ್ಕೆ ನಮ್ಮ ಜಮೀನು ಎಂದು ತೋರಿಸಿರುತ್ತಾರೆ ಹೊರತು, ಆದರೆ ಪ್ರತ್ಯೇಕವಾಗಿ ಯಾವ ಸರ್ವೆ ನಂಬರ್ ಎಂದು ಎಲ್ಲಿಯೂ ನಮೂದು ಮಾಡಿರುವುದಿಲ್ಲ, ಅಲ್ಲದೇ ಈಗಾಗಲೇ ಮೇಲೆ ವಿವರಿಸಿದಂತೆ ನಿ ಪಿ 13ರ ದಾಖಲೆಯಲ್ಲಿ ಸ ನಂ 63ಃ5 ಮತ್ತು ಇತರೆ ಜಮೀನು ಎಂದು ನಮೂದು ಮಾಡಿರುವುದು ಕಂಡು ಬರುತ್ತದೆ.

ಅಂದರೆ ಈ ಅಂಶವನ್ನು ಗಮನಿಸಿದಾಗ, ಸ ನಂ 63ಃ5ರ ಜೊತೆಯಲ್ಲಿ ಬೇರೆ ಮತ್ತೊಂದು ಸ್ವತ್ತನ್ನು ಸೇರಿಸಿಕೊಂಡು ಮಾರಾಟ ಮಾಡಿರುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ. ಆದರೆ, ಸದರೀ ಸ್ವತ್ತಿನ ಸಂಖ್ಯೆ ಯಾವುದು ಎಂದು ನಮೂದು ಮಾಡಿರುವುದಿಲ್ಲ. ಈ ಅಂಶವನ್ನು ಗಮನಿಸಿದಾಗ, ಪ್ರತಿವಾದಿಯ ಪ್ರತಿವಾದದಂತೆ ಸ ನಂ 63ಃ5ರ ಜೊತೆಯಲ್ಲಿ ಸ ನಂ 61ಃ4ನ್ನೂ ಸೇರಿಸಿ, ಎರಡೂ ಜಮೀನುಗಳಿಗೆ ಸೇರಿ ಚಕ್ಕು ಬಂದಿಯನ್ನು ನಿ ಪಿ 13 ತತ್ಸಮಾನ ದಾಖಲೆಯಾದ ನಿಡಿ 18ರಲ್ಲಿ ನಮೂದು ಮಾಡಿರುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ.

29. ಮುಂದುವರಿದು, ಇಲ್ಲಿ ನಾವು ಅತೀ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ, ದಿಃ10.10.1949ರಂದು ವಾದಿಯ ತಾತನವರಾದ ಚಿನ್ನಪ್ಪನವರ ದತ್ತು ಮಗನಾದ ಲಕ್ಕ್ಮಪ್ಪನವರು ಅಂದರೆ ವಾದಿಯ ಚಿಕ್ಕಪ್ಪ ಸ ನಂ 63ಃ5ಕ್ಕೆ ಸಂಬಂಧಿಸಿ ಆದೆಪ್ಪನವರ ಮಗ ಗಂಗಪ್ಪನವರಿಗೆ 20 ಗುಂಟೆ ಜಮೀನನ್ನು ನಿ ಡಿ 3ರಂತೆ ನೊಂದಾಯಿತ ಅಡಮಾನ ಪತ್ರವನ್ನು ಮಾಡಿಕೊಟ್ಟಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಅಂದರೆ, ಸದರೀ ಅಡಮಾನ ಪತ್ರವು ನಿ ಪಿ 13ರ ಕ್ರಯ ಪತ್ರ ರಚಿತವಾಗುವುದಕ್ಕಿಂತ ಮುಂಚಿತವಾದ ನೊಂದಾಯಿತ ಅಡಮಾನ ಪತ್ರವಾಗಿರುತ್ತದೆ. ಸದರೀ ಅಡಮಾನ ಪತ್ರದಲ್ಲಿ ಸ ನಂ 63ಃ5ಕ್ಕೆ ಸಂಬಂಧಿಸಿ ಪೂರ್ವಕ್ಕೆ- ಅಕ್ಕಸಾಲಿಗರ ಜಯ್ಯಪ್ಪ ಮತ್ತು ಎಲೆನಂಜಯ್ಯನವರ ಜಮೀನು ಎಂದು ತೋರಿಸಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಅಂದರೆ, ಸದರೀ ನಿ ಡಿ 1ರ ದಾಖಲೆಯ ಪ್ರಕಾರ ಸ ನಂ 63ಃ5ರ ಪೂರ್ವದಲ್ಲಿ ಮೂಲತಃ ಅಕ್ಕಸಾಲಿಗರ ಜಯಪ್ಪ ಮತ್ತು ಎಲೆನಂಜಯ್ಯನವರ ಜಮೀನು ಎಂದು ಸ್ಪಷ್ಟವಾಗಿ ನಮೂದು ಮಾಡಿರುತ್ತಾರೆ.

30. ಹೀಗಿರುವಾಗ, ನಿ ಪಿ 13ನ್ನು ಬರೆಯುವಾಗ ಸ ನಂ 63ಃ5ರ ಜಮೀನಿನ ಪೂರ್ವದಲ್ಲಿ ನಮ್ಮ ಜಮೀನು ಎಂದು ಬರೆದಿದ್ದು, ಸದರೀ ಜಮೀನು ವಾದಿಯ ತಾತನವರಾದ ಚಿನ್ನಪ್ಪನವರಿಗೆ ಹೇಗೆ ಬಂತು ಎಂಬ ಬಗ್ಗೆ ಯಾವುದೇ ಸಣ್ಣ ದಾಖಲೆಯೂ ಸಹಾ ನ್ಯಾಯಾಲಯದ ಕಡತದಲ್ಲಿ ಕಂಡು ಬರುವುದಿಲ್ಲ ಮತ್ತು ಸದರೀ ನಮ್ಮ ಜಮೀನು ಎಂದರೆ ಯಾವ ಸರ್ವೆ ನಂಬರಿನ ಸ್ವತ್ತಾಗಿರುತ್ತದೆ ಎಂಬ ಬಗ್ಗೆಯೂ ವಿವರಣೆ ಇರುವುದಿಲ್ಲ.

ಅಲ್ಲದೇ ಇಲ್ಲಿ ನಾವು ಗಮನಿಸಬೇಕಾದ ಮತ್ತೊಂದು ಪ್ರಮುಖ ಅಂಶವೆಂದರೆ, ನಿ ಪಿ 13ರ ಮುಖಾಂತರ ದೊಡ್ಡಗಂಗಪ್ಪನ ಮಗ ಚಿನ್ನಪ್ಪನವರು ಸ ನಂ 63:5ನ್ನು ಖರೀದಿ ಮಾಡಿದ ಮೇಲೆ ದಿ:25.8.1966ನೇ ಇಸವಿಯಲ್ಲಿ ನಿ ಡಿ 40ರ ಕ್ರಯ ಪತ್ರದ ಮೂಲಕ ಸದರೀ ಸ್ವತ್ತನ್ನೇ ಪ್ರಸ್ತುತ ಪ್ರತಿವಾದಿಯವರಗೆ ಮಾರಾಟ ಮಾಡಿರುವುದು ಕಂಡು ಬರುತ್ತದೆ. ಸದರೀ ಕ್ರಯ ಪತ್ರದಲ್ಲಿ ಸ ನಂ 63:5ರ ಒಟ್ಟು ವಿಸ್ತೀರ್ಣ 20 ಗುಂಟೆಯ ಜಮೀನಿಗೆ ಚಕ್ಕು ಬಂದಿ ಪೂರ್ವಕ್ಕೆ-ಕೆ.ಎನ್.ನಂಜಾರೆಡ್ಡಿಯವರ ಜಮೀನು, ಪಶ್ಚಿಮಕ್ಕೆ- ಓಣಿ, ಉತ್ತರಕ್ಕೆ- ಕೆ.ಎನ್.ನಂಜಾರೆಡ್ಡಿಯವರ ಜಮೀನು ಮತ್ತು ನಿಮ್ಮ ಜಮೀನು, ದಕ್ಷಿಣಕ್ಕೆ- ಕುರುಬರ ಹಳ್ಳಿ ಗಡಿ ಎಂದು ನಮೂದು ಮಾಡಿರುತ್ತಾರೆ.

31. ಈ ಅಂಶವನ್ನು ನೋಡಿದಾಗ, 1949ನೇ ಇಸವಿಯ ನಿ ಡಿ 3ರ ಅಡಮಾನ ಪತ್ರದಲ್ಲಾಗಲ್ಲಿ ಅಥವಾ ನಿ ಡಿ 40ರ ಕ್ರಯ ಪತ್ರದಲ್ಲಾಗಲೀ ವಾದಿಯವರ ತಾತ ಚಿನ್ನಪ್ಪನವರಿಗೆ ಸೇರಿದ ಜಮೀನು ಎಂದು ಎಲ್ಲಿಯೂ ನಮೂದು ಮಾಡಿರುವುದಿಲ್ಲ ಮತ್ತು ಅತೀ ಮುಖ್ಯವಾದ ಅಂಶವೆಂದರೆ, ಸದರೀ ನಿ ಡಿ 3ರ ಅಡಮಾನ ಪತ್ರದಲ್ಲಿ ಸ ನಂ 63:5ರ ಜಮೀನಿನ ಪೂರ್ವದಲ್ಲಿ ಅಕ್ಕಸಾಲಿಗ ಜಯಪ್ಪನವರ ಮತ್ತು ಎಲೆನಂಜಯ್ಯನವರ ಜಮೀನು ಎಂದು ನಮೂದು ಮಾಡಿರುವುದು ಕಂಡು ಬರುತ್ತದೆ. ಈ ಅಂಶವನ್ನು ನೋಡಿದಾಗ, ನಿ ಡಿ 3ರ ಅಡಮಾನ ಪತ್ರದ ಚಕ್ಕು ಬಂದಿಗೂ ಮತ್ತು ನಿ ಡಿ 40ರ ಕ್ರಯ ಪತ್ರದ ಚಕ್ಕುಬಂದಿಗೂ ಹೊಂದಾಣಿಕೆ ಕಂಡು ಬಂದಿರುತ್ತದೆ.

32. ಒಟ್ಟಿಗೆ ಇಲ್ಲಿ ನಾವು ಗಮನಿಸಬೇಕಾದ ಅತೀ ಪ್ರಮುಖ ಅಂಶವೆಂದರೆ, 1949ನೇ ಇಸವಿಯಲ್ಲಿಯೇ ವಾದಿಯ ತಾತನವರಾದ ಚಿನ್ನಪ್ಪನವರ ದತ್ತು ಮಗ ಲಕ್ಷ್ಮಣ ರೆಡ್ಡಿಯವರು ನಿ ಡಿ 40ರ ಕ್ರಯಪತ್ರದಲ್ಲಿ ತೋರಿಸಿದ ಚಕ್ಕುಬಂದಿಗೆ ಹೊಂದಾಣಿಕೆ ಆಗುವಂತಹ ಸ್ವತ್ತನ್ನು ನೊಂದಾಯಿತ ಅಡಮಾನ ಪತ್ರದ ಮೂಲಕ ಬರೆದುಕೊಟ್ಟಿರುವುದು ಕಂಡು ಬರುತ್ತದೆ. ಅಲ್ಲದೇ ಸದರೀ 1949ರ ಅಡಮಾನ ಪತ್ರದಲ್ಲಿಯೂ ಸಹಾ ಸ ನಂ 63:5ಕ್ಕೆ ಸಂಬಂಧಿಸಿದ ಜಮೀನಿನ ಪೂರ್ವದಲ್ಲಾಗಲೀ ಅಥವಾ ಇತರೆ ಯಾವುದೇ ಭಾಗದಲ್ಲಿ

ಚಿನ್ನಪ್ಪನವರಿಗೆ ಸೇರಿದ ಜಮೀನು ಇರುವ ಬಗ್ಗೆ ಎಲ್ಲಿಯೂ ನಮೂದು ಇರುವುದಿಲ್ಲ. ಹೀಗಿರುವಾಗ, ಯಾವುದೇ ಸರಿಯಾದ ದಾಖಲೆಗಳಿಲ್ಲದೇ ಕೇವಲ ನಿ ಪಿ 13ರಲ್ಲಿ ಸ ನಂ 63ಃ5ಕ್ಕೆ ಸಂಬಂಧಿಸಿದ ಜಮೀನಿನ ಪೂರ್ವದಲ್ಲಿ ನಮ್ಮ ಜಮೀನು ಎಂದು ತೋರಿಸಿದ ಮಾತ್ರಕ್ಕೆ ಅದೇ ಸ್ವತ್ತು ಸ ನಂ 64ಃ1 ಆಗಿರುತ್ತದೆ ಎಂದು ಮತ್ತು ಅದು ವಾದಿಯವರ ಪೂರ್ವಜರಿಗೆ ಸೇರಿದ ಸ್ವತ್ತಾಗಿರುತ್ತದೆ ಎಂದು ಊಹೆ ಮಾಡಿಕೊಳ್ಳಲಾಗುವುದಿಲ್ಲ.

33. ಮುಂದುವರಿದು, ನಿ ಡಿ 1ರ ದಾಖಲೆಯು ಸ ನಂ 63ಃ5 ಮತ್ತು ಸ ನಂ 61ಃ3 ಮತ್ತು 62ಃ4 ಮತ್ತು ಇತರೆ ಸ್ವತ್ತುಗಳಿಗೆ ಸಂಬಂಧಿಸಿದ ಕಚ್ಚಾ ನಕಾಶೆಯಾಗಿದ್ದು, ಸದರೀ ದಾಖಲೆಯನ್ನು ವಾದಿಯು ತನ್ನ ಪಾಟೀ ಸವಾಲಿನಲ್ಲಿ ಒಪ್ಪಿಕೊಂಡ ಮೇರೆಗೆ ನಿ ಡಿ 1 ಎಂದು ಗುರ್ತಿಸಲಾಗಿರುತ್ತದೆ. ಸದರೀ ದಾಖಲೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಸ ನಂ 63ಃ5ರ ಪೂರ್ವದಲ್ಲಿ 61ಃ3ರ ಜಮೀನು ಇದ್ದು, ಆ ಮಧ್ಯದಲ್ಲಿ ಈಗ ದಾವಾ ಸ್ವತ್ತು ಸ ನಂ 61ಃ4 ಇರುವ ಅಂಶವನ್ನು ಒಪ್ಪಿಕೊಂಡಂತಾಗುತ್ತದೆ. ಸದರೀ ದಾಖಲೆಗೆ ಸಂಬಂಧಿಸಿ ಪ್ರತಿವಾದಿಯ ಪರ ವಕೀಲರು ತಮ್ಮ ವಾದ ಮಂಡನೆಯ ಸಮಯದಲ್ಲಿ ಸ ನಂ 63ಃ5ರಲ್ಲಿ 61ಃ4 ಸರ್ವೆ ನಂಬರ್ ಸೇರಿಕೊಂಡಿದ್ದು, ಎರಡೂ ಸ್ವತ್ತುಗಳನ್ನು ಸೇರಿಸಿ ಮುಳ್ಳಿನ ಬೇಲಿಯನ್ನು ಹಾಕಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಸದರೀ ವಿಚಾರವಾಗಿ ವಾದಿಯು ತನ್ನ ಪಾಟೀ ಸವಾಲಿನ 13ನೇ ಪುಟದ ಕೊನೆಯ ಸಾಲಿನಲ್ಲಿ ಮತ್ತು 14ನೇ ಪುಟದ ಪ್ರಾರಂಭದಲ್ಲಿ ಸ ನಂ 61, 61ಃ4 ಮತ್ತು 62ರ ಜಮೀನುಗಳಿಗೆ ಮುಳ್ಳು ತಂತಿಯನ್ನು ಹಾಕಿದ್ದಾರೆ ಎಂಬ ಸೂಚನೆಯನ್ನು ಸರಿ ಎಂದು ಒಪ್ಪಿಕೊಂಡು ಸಾಕ್ಷಿಯು ಮುಂದುವರಿದು ಸದರೀ ಮುಳ್ಳು ತಂತಿಯನ್ನು ಒತ್ತಾಯ ಪೂರ್ವಕವಾಗಿ 2009ನೇ ಇಸವಿಯಲ್ಲಿ ಹಾಕಿರುತ್ತಾರೆ ಎಂಬ ಅಂಶವನ್ನು ಸಾಕ್ಷಿಯು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ.

34. ಈ ಅಂಶವನ್ನು ನೋಡಿದಾಗ, ವ್ಯಾಜ್ಯ ಸ್ವತ್ತಾದ ಸ ನಂ 61ಃ4ಕ್ಕೆ ಪ್ರತಿವಾದಿಯವರೇ ಮುಳ್ಳುತಂತಿಯನ್ನು ಹಾಕಿರುತ್ತಾರೆ ಎಂದಾದಾಗ, ಅವರೇ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದು ಊಹಿಸಿಕೊಳ್ಳಬಹುದಾಗಿದೆ. ಒಂದು ವೇಳೆ ಸದರೀ

ಪ್ರತಿವಾದಿಯವರು ಒತ್ತಾಯ ಪೂರ್ವಕವಾಗಿ ಸದರೀ ಮುಳ್ಳು ತಂತಿಯನ್ನು ಹಾಕಿದ್ದರೆ, ಆ ಬಗ್ಗೆ ವಾದಿಯು ಪ್ರತಿವಾದಿಯ ಮೇಲೆ ಏನಾದರೂ ಕ್ರಮವನ್ನು ಕೈಗೊಳ್ಳಬಹುದಾಗಿತ್ತು. ಆದರೆ, ಆ ರೀತಿಯ ಯಾವುದೇ ಕ್ರಮಗಳನ್ನು ಕೈಗೊಂಡ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳು ನ್ಯಾಯಾಲಯದ ಕಡತದಲ್ಲಿ ಕಾಣಸಿಗುವುದಿಲ್ಲ. ಅದೇ ರೀತಿ ಸದರೀ 14ನೇ ಪುಟದಲ್ಲಿ ಪ್ರತಿವಾದಿಯು ಸದರೀ ಬೇಲಿಯನ್ನು ಹಾಕಬೇಕಾದರೆ, ಕೂಲಿಯವರನ್ನು ತಾನು ಬೆದರಿಸಿರುತ್ತೇನೆ ಎಂಬ ಅಂಶವನ್ನು ಮತ್ತು ಆ ಕುರಿತು ಪ್ರತಿವಾದಿಯವರು ತನ್ನ ಮೇಲೆ ಒಂದು ಪೋಲೀಸ್ ದೂರನ್ನು ನೀಡಿದ್ದರು ಎಂಬ ಅಂಶವನ್ನು ಒಪ್ಪಿಕೊಂಡಿರುತ್ತಾರೆ. ಸದರೀ ಅಂಶವು ನಿ ಡಿ 26ರ ದಾಖಲೆಗೆ ಸಹಕಾರಿಯಾಗಿರುತ್ತದೆ. ಕಾರಣ, ಪ್ರತಿವಾದಿಯು ತನ್ನ ಸ್ವತ್ತಿಗೆ ಅಡ್ಡಿಪಡಿಸುವ ಸಮಯದಲ್ಲಿ ತಾನು ವಾದಿಯ ವಿರುದ್ಧ ಒಂದು ಪಿರ್ಯಾದನ್ನು ನಿ ಡಿ 26 ರಂತೆ ನೀಡಿರುತ್ತೇನೆ ಎಂಬ ಪ್ರತಿವಾದಿಯ ವಾದಕ್ಕೆ ಹೊಂದಾಣಿಕೆ ಕಂಡು ಬರುತ್ತದೆ.

35. ಮುಂದುವರಿದು, ತನ್ನ ಪಾಟೀ ಸವಾಲಿನ 14ನೇ ಪುಟದ ಮದ್ಯದಲ್ಲಿ ತಾನೂ ಸಹಾ ಪ್ರತಿವಾದಿಯ ವಿರುದ್ದ ಒಂದು ಪಿರ್ಯಾದನ್ನು ನೀಡಿರುತ್ತೇನೆ ಎಂದು ನುಡಿದಿದ್ದು, ಆದರೆ ಆ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಈ ಅಂಶವನ್ನು ನೋಡಿದಾಗ, ಸ ನಂ 63:5 ಮತ್ತು 61:3ರ ಜಮೀನಿನ ಮದ್ಯದಲ್ಲಿ ಪ್ರಸ್ತುತ ವ್ಯಾಜ್ಯ ಕಾರಣವಾದ ಸ್ವತ್ತು ಸ ನಂ 61:4 ಇದ್ದು ಅದು ಪ್ರತಿವಾದಿಯ ಸ್ವಾಧೀನಾನುಭವದಲ್ಲಿ ಇರುತ್ತದೆ ಎಂದು ಸ್ಪಷ್ಟವಾಗುತ್ತದೆ.

36. ಮುಂದುವರಿದು, ನಿ ಡಿ 2 ಸ ನಂ 61:4 ಮತ್ತು ಇತರೆ ಸ್ವತ್ತುಗಳಿಗೆ ಸಂಬಂಧಿಸಿದ ಆರ್‌ಆರ್ ಪ್ರತಿಯಾಗಿದ್ದು ಸದರೀ ದಾಖಲೆಯನ್ನು ಸಹಾ ಪಿಡಬ್ಲ್ಯೂ 1ರವರು ತಮ್ಮ ಪಾಟೀ ಸವಾಲಿನ 15ನೇ ಪುಟದಲ್ಲಿ ಒಪ್ಪಿಕೊಂಡ ಕಾರಣ ನಿ ಡಿ 2 ಎಂದು ಗುರುತಿಸಲಾಗಿರುತ್ತದೆ. ಸದರೀ ದಾಖಲೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಜೆಂಜರು ಸಂ 289ರಲ್ಲಿ ಸ ನಂ 61:4ಕ್ಕೆ ಸಂಬಂಧಿಸಿ ಚಿನ್ನಪ್ಪ ಬಿನ್ ದೊಡ್ಡ ಹನುಮಂತರಾಯಪ್ಪನವರ ಹೆಸರು ಕಂಡು ಬಂದಿದ್ದು, ಕಲಂ ನಂ 2ರಲ್ಲಿ ಸದರಿ ಚಿನ್ನಪ್ಪನವರಿಗೆ ಪ್ರಿಲಿಮಿನರಿ 1ನೇ ಹಿಸ್ಸೆ

ಉಡಾಫೆ ಇಂದ ಒಂದು ಹಿಸ್ಸೆ ಜಾಸ್ತಿ ಇರುತ್ತದೆ ಎಂದು ನಮೂದು ಮಾಡಿರುವುದು ಕಂಡು ಬರುತ್ತದೆ. ಸದರೀ ಅಂಶದ ಕುರಿತು ಪ್ರತಿವಾದಿಯ ಪರ ವಕೀಲರು ಸ ನಂ 61:4ಕ್ಕೆ ಸಂಬಂಧಿಸಿ ಚಿನ್ನಪ್ಪನವರಿಗೆ ಉಡಾಫೆ ಇಂದ ಬಂದಿರುವುದರಿಂದ ಅದಕ್ಕೆ ಸಂಬಂಧಿಸಿ ಯಾವುದೇ ಹಕ್ಕು ಅಧಿಕಾರ ಇರಲಿಲ್ಲ, ಆದ್ದರಿಂದಲೇ ನಿ ಡಿ 33ರ ಪ್ರಕಾರ ಲಕ್ಷ್ಮಣರೆಡ್ಡಿಯವರು ಸ್ವತ್ತನ್ನು ಅಡಮಾನ ಮಾಡುವ ಸಮಯದಲ್ಲಿ ಅದನ್ನು ಸೇರಿಸಿ ಅಡಮಾನ ಮಾಡಿರುತ್ತಾರೆ, ಅಲ್ಲದೇ ಸದರೀ ಚಕ್ಕು ಬಂದಿಯ ಸ್ವತ್ತನ್ನೇ ನಿ ಡಿ 40ರ ಪ್ರಕಾರ ತಾನು ಖರೀದಿ ಮಾಡಿರುತ್ತೇನೆ ಎಂದು ವಾದ ಮಂಡಿಸಿರುತ್ತಾರೆ.

37. ಅದಕ್ಕೆ ಪ್ರತಿಯಾಗಿ ವಾದಿಯ ಪರ ವಕೀಲರು ಸದರೀ ಸ ನಂ 61:4ಕ್ಕೆ ಸಂಬಂಧಿಸಿ 36 ಗುಂಟೆ ಜಮೀನು ಪ್ರಸ್ತುತ ವಾದಿಯವರಿಗೆ ಪವತಿ ವಾರಸಿನ ಮೂಲಕ ಬಂದಿರುತ್ತದೆ ಎಂತಲೂ ಆ ಬಗ್ಗೆ ಸದರೀ ನಿ ಡಿ 2ರ ದಾಖಲೆಯಲ್ಲಿ ನಮೂದು ಇರುತ್ತದೆ ಎಂತಲೂ ತಿಳಿಸಿರುತ್ತಾರೆ. ಆದರೆ, ಇಲ್ಲಿ ನಾವು ಗಮನಿಸಬೇಕಾದ ಅತೀ ಪ್ರಮುಖ ಅಂಶವೆಂದರೆ, ಸದರೀ ಸ ನಂ 61:4ರ ಜಮೀನು ಚಿನ್ನಪ್ಪ ಬಿನ್ ದೊಡ್ಡ ಹನುಮಂತರಾಯರವರಿಗೆ ಉಡಾಫೆಯಿಂದ ಒಂದು ಹಿಸ್ಸೆ ಜಾಸ್ತಿ ಬಂದಿದೆ ಎಂದು ನಮೂದು ಮಾಡಿದ್ದು, ಸದರೀ ದಾಖಲೆಗೆ ಅನುಗುಣವಾಗಿ ನಿ ಡಿ 14ರ ದಾಖಲೆಯನ್ನು ನೋಡಿದಾಗ, ಸದರೀ ದಾಖಲೆಯು ಸ ನಂ 61:4ಕ್ಕೆ ಸಂಬಂಧಿಸಿದ 1933ನೇ ಇಸವಿಯ ಟಿಪ್ಪಣಿ ಪ್ರತಿಯಾಗಿದ್ದು, ಸದರೀ ದಾಖಲೆಯ ಪ್ರಕಾರ ಸ ನಂದ 61 ಪ್ರಿಲಿಮಿನರಿ ಹಿಸ್ಸೆಯಂತೆ 3 ಹಿಸ್ಸೆಗಳಿದ್ದು, ಅನುಭವದಂತೆ 4 ಹಿಸ್ಸೆಗಳು ಇರುತ್ತದೆ ಎಂದು ಸ್ಪಷ್ಟವಾಗಿ ನಮೂದು ಮಾಡಿರುತ್ತಾರೆ.

38. ಅದೇ ರೀತಿ ಸದರೀ ದಾಖಲೆಯಲ್ಲಿ ಬರೆದ ಷರಾಗಳನ್ನು ನೋಡಿದಾಗ, 2ನೇ ಷರಾದ ಪ್ರಕಾರ, ಪ್ರಿಲಿಮಿನರಿ ರೀಸರ್ವೆಯಂತೆ 1ನೇ ಹಿಸ್ಸೆದಾರನ ಹಿಸ್ಸೆ ಉಡಾಫೆ ಆಗಿದ್ದರಿಂದ 4 ಹಿಸ್ಸೆಗಳಾಗಿರುತ್ತದೆ ಎಂದು ಸ್ಪಷ್ಟವಾಗಿ ನಮೂದು ಮಾಡಿರುತ್ತಾರೆ. ಅಂದರೆ, ಸದರೀ ದಾಖಲೆಯ ಪ್ರಕಾರ 1ನೇ ಹಿಸ್ಸೆದಾರನಾಗಿ ಚಿನ್ನಪ್ಪ ಬಿನ್ ದೊಡ್ಡಹನುಮಂತರಾಯಪ್ಪ ಅಂದರೆ

ಈ ದಾವೆಯ ವಾದಿಯ ತಾತನವರಾಗಿರುತ್ತಾರೆ. ಅದೇ ರೀತಿ ಪ್ರಿಲಿಮಿನರಿ ರೀಸರ್ವೆಯಂತೆ 3 ಹಿಸ್ಸೆಗಳಾಗಿ ಕಂಡು ಬಂದಿದ್ದು, ಅನುಭವದಂತೆ 4 ಹಿಸ್ಸೆಗಳಾಗಿದ್ದು, ಆ ಪೈಕಿ 4ನೇ ಹಿಸ್ಸೆ ಸದರೀ ಚಿನ್ನಪ್ಪ ಬಿನ್ ದೊಡ್ಡಹನುಮಂತರಾಯಪ್ಪ ಅಂದರೆ ಈ ದಾವೆಯ ವಾದಿಯ ತಾತನವರ ಹೆಸರಿಗೆ ಆಗಿರುವುದು ಕಂಡು ಬರುತ್ತದೆ. ಈ ಅಂಶವನ್ನು ನೋಡಿದಾಗ, ಸದರೀ 4ನೇ ಹಿಸ್ಸೆಯು ಕೇವಲ ಅನುಭವದಂತೆ ಚಿನ್ನಪ್ಪ ಬಿನ್ ದೊಡ್ಡಹನುಮಂತರಾಯಪ್ಪನವರ ಹೆಸರಿಗೆ ದಾಖಲಾಗಿರುತ್ತವೆ ಅದಕ್ಕೆ ಯಾವುದೇ ರೀತಿಯ ಪ್ರತ್ಯೇಕವಾದ ಸಂಖ್ಯೆ ಅಥವಾ ದಾಖಲೆ ನೀಡಿರುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಸದರೀ ದಾಖಲೆಯ ಆಧಾರದ ಮೇಲೆಯೇ ನಿ ಡಿ 2ರಲ್ಲಿ ಸ ನಂ 61:4ಕ್ಕೆ ಸಂಬಂದಿಸಿ ಚಿನ್ನಪ್ಪ ಬಿನ್ ದೊಡ್ಡಹನುಮಂತರಾಯಪ್ಪನವರ ಹೆಸರಿಗೆ ಒಂದು ಹಿಸ್ಸೆ ಉಡಾಫೆಯಿಂದ ಹೆಚ್ಚಾಗಿ ಬಂದಿರುತ್ತದೆ ಎಂದು ನಮೂದು ಮಾಡಿರುತ್ತಾರೆ ಎಂಬುದು ಕಂಡು ಬರುತ್ತದೆ.

39. ಈ ಅಂಶವನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಸದರೀ ಸ ನಂ 61:4 ಕೇವಲ ಅನುಭವದ ಆಧಾರದ ಮೇಲೆ ಇರುತ್ತದೆ ಎಂಬುದನ್ನು 1933ನೇ ಇಸವಿಯ ದಾಖಲೆಯಾದ ನಿ ಡಿ 14ರ ದಾಖಲೆ ಸ್ಪಷ್ಟವಾಗಿ ತೋರಿಸುತ್ತದೆ. ಅಂದರೆ, 1933ನೇ ಇಸವಿಯಲ್ಲಿಯೇ ಸದರಿ ಸ ನಂ 61:4 ವಾದಿಯ ತಾತ ಚಿನ್ನಪ್ಪನವರಿಗೆ ಉಡಾಫೆಯಿಂದ ಮಾತ್ರ ಅನುಭವದ ಆಧಾರದ ಮೇರೆಗೆ ಒಂದು ಹಿಸ್ಸೆ ಜಾಸ್ತಿ ಬಂದಿರುತ್ತದೆ ಅದಕ್ಕೆ ಸಂಬಂಧಿಸಿ ಯಾವುದೇ ಪ್ರತ್ಯೇಕವಾದ ಸಂಖ್ಯೆ ಅಥವಾ ದಾಖಲೆ ಇರುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಸದರೀ ಅಂಶದ ಕುರಿತು ಪಿಡಬ್ಲ್ಯೂ 1 ರವರನ್ನು ಪಾಟೀ ಸವಾಲಿಗೆ ಗುರಿಪಡಿಸಿದಾಗ, ತಮ್ಮ ಪಾಟೀ ಸವಾಲಿನ 6ನೇ ಪುಟದ ಕೊನೆಯ ಸಾಲಿನಲ್ಲಿ ದಿ:24.6.1933ರಲ್ಲಿ ಮಾಡಿದ ಸರ್ವೆಯಂತೆ ನಿ ಡಿ 14ಕ್ಕೆ ಅನ್ವಯಿಸಿ 1ನೇ ಹಿಸ್ಸೆದಾರನ ಹಿಸ್ಸೆ ಉಡಾಫೆಯಾಗಿರುತ್ತದೆ ಎಂದು ಬರೆದಿರುತ್ತಾರೆ ಎಂಬ ಸೂಚನೆಗೆ ಸಾಕ್ಷಿಯು ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ.

40. ಅದೇ ರೀತಿ 1ನೇ ಹಿಸ್ಸೆದಾರರು 2ನೇ ಹಿಸ್ಸೆಗೆ ಬಂದಿರಬಹುದು ಎಂದರೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಒಂದು ವೇಳೆ ಸದರೀ ನಿ ಡಿ 14ರ ದಾಖಲೆಯು

ತಪ್ಪಾಗಿದ್ದರೆ, ಸಾಕ್ಷಿಯು ಅದು ತಪ್ಪಾಗಿರುತ್ತದೆ ಎಂದು ಹೇಳಬಹುದಾಗಿತ್ತು, ಅದರ ಬದಲು ಗೊತ್ತಿಲ್ಲ ಎಂದು ನುಡಿಯುತ್ತಿರುವುದು ಸಾಕ್ಷಿಯ ಸಾಕ್ಷ್ಯದ ಮೇಲೆ ಸಂಶಯ ಉಂಟಾಗುತ್ತದೆ. ಅಲ್ಲದೇ ಸದರೀ ನಿ ಡಿ 14ರ ದಾಖಲೆಯನ್ನು ವಾದಿಯು ಒಪ್ಪಿಕೊಂಡಿರುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ.

41. ಮುಂದುವರಿದು ಪ್ರತಿವಾದಿಯವರು ಪಿಡಬ್ಲ್ಯೂ 1ರವರ ಪಾಟೀ ಸವಾಲಿನ 8ನೇ ಪುಟದಲ್ಲಿ ಸ ನಂ 61ರಲ್ಲಿ 3 ಪೋಡುಗಳಾಗಿರುತ್ತವೆ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ಉತ್ತರಿಸಿದ್ದು, ಆದರೆ ಅದರಲ್ಲಿ ಎಷ್ಟು ಪೋಡುಗಳಾಗಿರುತ್ತವೆ ಎಂದು ತನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಈ ಅಂಶವನ್ನು ನೋಡಿದಾಗ, ಒಂದು ವೇಳೆ ಸ ನಂ 61:4 ವಾದಿಯವರಿಗೆ ಸೇರಿದ್ದೇ ಆಗಿದ್ದಲ್ಲಿ, ಸದರೀ ಸ್ವತ್ತಿನ ಬಗ್ಗೆ ವಾದಿಯವರಿಗೆ ತಿಳುವಳಿಕೆ ಇರುತ್ತಿತ್ತು, ಆದರೆ ಸ ನಂ 61ರಲ್ಲಿ ಎಷ್ಟು ಪೋಡುಗಳಾಗಿವೆ ಎಂದು ಗೊತ್ತಿಲ್ಲ ಎಂದಾದಾಗ, ಸದರೀ ಸ ನಂ 61:4 ವಾದಿಗೆ ಸೇರಿದ್ದಾಗಿರುತ್ತದೆ ಎಂದು ಊಹೆ ಮಾಡಿಕೊಳ್ಳಲಾಗುವುದಿಲ್ಲ.

42. ಈ ಅಂಶವನ್ನು ಗಮನಿಸಿದಾಗ, 1933ನೇ ಇಸವಿಯಲ್ಲಿಯೇ ಸದರೀ ಸ ನಂ 61:4 ನಿಡಿ 14ರ ಪ್ರಕಾರ 1ನೇ ಹಿಸ್ಸೆದಾರನಾದ ಚಿನ್ನಪ್ಪ ಬಿನ್ ದೊಡ್ಡಹನುಮಂತರಾಯಪ್ಪನವರಿಗೆ ಊಡಾಫೆಯಿಂದ ಅನುಭವದ ಆಧಾರದ ಮೇರೆಗೆ ಬಂದಿರುತ್ತದೆ ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ. ಆದ್ದರಿಂದ ಸದರೀ ಸ್ವತ್ತಿನಲ್ಲಿ ಚಿನ್ನಪ್ಪನಿಗೆ ಕಾನೂನುಬದ್ಧವಾದ ಹಕ್ಕು ಇರುವ ಬಗ್ಗೆ ಅನುಮಾನ ಉಂಟಾಗುತ್ತದೆ. ಹೀಗಿರುವಾಗ, ಸದರೀ ಸ್ವತ್ತಿನ ಕುರಿತು ಪವತಿ ವಾರಸಿನ ಮುಖಾಂತರ ಪ್ರಸ್ತುತ ವಾದಿಯ ಹೆಸರಿಗೆ ಹೇಗೆ ಖಾತೆ ಬದಲಾವಣೆ ಆಗಲು ಸಾಧ್ಯ ಎಂಬ ಅಂಶವೂ ಸಹಾ ಎದ್ದು ಕಾಣುತ್ತದೆ.

43. ಅಲ್ಲದೇ ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ವಾದಿಯ ಸ್ವವಾದದಂತೆ ಚಿನ್ನಪ್ಪನ ಮರಣಾನಂತರ ಆತನ ಮಗ ಅಂದರೆ ವಾದಿಯ ತಂದೆ ರಾಮಪ್ಪ ನವರು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ 40 ವರ್ಷಗಳ ಕಾಲ ಇದ್ದರು ಎಂದು

ತಿಳಿಸಿರುತ್ತಾರೆ. ಒಂದು ವೇಳೆ ಸದರಿಯವರು 40 ವರ್ಷಗಳ ಕಾಲ ಸ್ವಾಧೀನಾನುಭವದಲ್ಲಿ ಇದ್ದುದ್ದೇ ಆಗಿದ್ದರೆ, ಅವರ ಹೆಸರಿಗೆ ಖಾತೆ ಆಗದೇ, ನೇರವಾಗಿ ವಾದಿಯ ಹೆಸರಿಗೆ ಚಿನ್ನಪ್ಪನವರಿಂದ ಪವತಿ ವಾರಸಿನ ಮೂಲಕ ಹೇಗೆ ಬರಲು ಸಾಧ್ಯ ಎಂಬ ಸಂಶಯ ಉಂಟಾಗುತ್ತದೆ. ಅಲ್ಲದೇ, ಇಲ್ಲಿ ನಾವು ಗಮನಿಸಬೇಕಾದ ಅತೀ ಪ್ರಮುಖ ಅಂಶವೆಂದರೆ, ಕೇವಲ ಕಂದಾಯ ದಾಖಲೆಗಳಲ್ಲಿ ನಮೂದಾಗಿದೆ ಎಂದ ಮಾತ್ರಕ್ಕೆ, ಸದರೀ ಸ್ವತ್ತಿಗೆ ವಾದಿಯೇ ಮಾಲೀಕರಾಗಿರುತ್ತಾರೆ ಎಂದು ಊಹೆ ಮಾಡಿಕೊಳ್ಳಲಾಗುವುದಿಲ್ಲ.

44. ಅಲ್ಲದೇ, ಈ ಅಂಶದ ಕುರಿತು ಪ್ರತಿವಾದಿಯ ಪರ ವಕೀಲರು ತಮ್ಮ ವಾದ ಮಂಡನೆಯ ಸಮಯದಲ್ಲಿ ಚಿನ್ನಪ್ಪನವರು ತಮ್ಮ ಜೀವಿತ ಕಾಲಾವಧಿಯಲ್ಲಿ ತಮಗೆ ಸೇರಿದ ಸ್ವತ್ತುಗಳಲ್ಲಿ ಕೆಲವು ಸ್ವತುತ್ತಗಳನ್ನು ತನ್ನ ತಮ್ಮ ಸಂಜೀವರೆಡ್ಡಿಯ ಮಗ ಅಂದರೆ ತನ್ನ ದತ್ತು ಮಗ ಲಕ್ಷ್ಮಣರೆಡ್ಡಿ ಯವರಿಗೆ ನೀಡಿದ್ದರು ಆ ಸಮಯದಲ್ಲಿ ದಾವಾ ಸ್ವತ್ತನ್ನೂ ಸಹಾ ಸದರೀ ಲಕ್ಷ್ಮಣರೆಡ್ಡಿಯವರಿಗೆ ನೀಡಿದ್ದು, ಸದರೀ ತಮ್ಮ ಹಕ್ಕು ಅಧಿಕಾರ ಮತ್ತು ಸ್ವಾಧೀನದ ಆಧಾರದ ಮೇರೆಗೆ ಸದರೀ ಲಕ್ಷ್ಮಣರೆಡ್ಡಿಯವರು ನಿ ಡಿ 3ರಂತೆ ಪ್ರಸ್ತುತ ಸ ನಂ 63ಃ5ರಲ್ಲಿ ಚಿನ್ನಪ್ಪನವರಿಗೆ ಉಡಾಫೆ ಯಿಂದ ಹೆಚ್ಚಾಗಿ ಬಂದ ಸ ನಂ 61ಃ4ನ್ನೂ ಸೇರಿಸಿ ನೊಂದಾಯಿತ ಪತ್ರದ ಮೂಲಕ ಅಡಮಾನ ಮಾಡಿದ್ದರು ನಂತರ ಅದೇ ಸ್ವತ್ತನ್ನು ಲಕ್ಷ್ಮಣರೆಡ್ಡಿಯವರು ಚಿನ್ನಪ್ಪನವರ ಸ್ವಂತ ಮಗ ರಾಮಪ್ಪ ಅಂದರೆ ವಾದಿಯ ತಂದೆಯೊಂದಿಗೆ ಕೂಡಿ ಸದರೀ ಅಡಮಾನ ಮಾಡಿದ ಸ್ವತ್ತನ್ನೇ ಚಿನ್ನಪ್ಪ ಬಿನ್ ದೊಡ್ಡ ಗಂಗಪ್ಪನವರಿಗೆ ನಿ ಡಿ 13ರ ಮೂಲಕ ಮಾರಾಟ ಮಾಡಿದ್ದರೆಂತಲೂ, ಸದರೀ ಚಿನ್ನಪ್ಪ ಬಿನ್ ದೊಡ್ಡಗಂಗಪ್ಪನವರು ನಿ ಡಿ 13ರ ಮೂಲಕ ತಾವು ಖರೀದಿ ಮಾಡಿದ ಸ್ವತ್ತನ್ನೇ ನಿ ಡಿ 40ರ ಮೂಲಕ ತನ್ನ ಹೆಸರಿಗೆ ನೊಂದಾಯಿತ ಕ್ರಯ ಪತ್ರದ ಮೂಲಕ ಮಾಡಿಕೊಟ್ಟಿರುತ್ತಾರೆ ಎಂದು ತಮ್ಮ ವಾದ ಮಂಡನೆಯನ್ನು ಮಂಡಿಸಿರುತ್ತಾರೆ.

45. ಈ ಅಂಶದ ಕುರಿತು ನಿ ಡಿ 3ರ ದಾಖಲಾತಿಯನ್ನು ನೋಡಿದಾಗ, ದಿಃ10.10.1949ರಂದು ವಾದಿಯ ತಾತ ಚಿನ್ನಪ್ಪನವರ ದತ್ತು ಮಗ ಲಕ್ಷ್ಮಣರೆಡ್ಡಿಯವರು ಸ ನಂ

63:5ರಲ್ಲಿ ಒಟ್ಟು 20 ಗುಂಟೆ ಜಮೀನನ್ನು ಅದೆಪ್ಪನವರ ಮಗ ಗಂಗಪ್ಪನವರಿಗೆ ಅಡಮಾನ ಮಾಡಿರುವುದು ಕಂಡು ಬರುತ್ತದೆ. ಸದರೀ ದಾಖಲೆಯ ಪ್ರಕಾರ ಸ ನಂ 63:5ರ ಚಕ್ಕುಬಂದಿಯನ್ನು ನೋಡಿದಾಗ,

¥Xªð¦PÀ .¯£ÀAZÀiÀÄ'£ªg ZÀ«ÆÉ£ÀÄ8
¥5ªÄP¦ ¸PÁð& WU8
3+gP¦R CP¦¸ÁF ªÄÄ\AiÄ¥ ªÄ+Ä .¯£ÀAZÀiÀÄ'£ªg ZÀ«ÆÉ£ÀÄ
zLÌUP¦R PÄgÄGg #H¦ 0A

ಈ ಮಧ್ಯದಲ್ಲಿರುವ ಸ್ವತ್ತನ್ನು ಸದರೀ ಲಕ್ಷ್ಮಣರೆಡ್ಡಿಯವರು ಅಡಮಾನ ಮಾಡಿರುವುದು ಕಂಡು ಬರುತ್ತದೆ. ಸದರೀ ಚಕ್ಕು ಬಂದಿಯನ್ನು ನಿ ಡಿ 1ರ ಕಚ್ಚಾ ನಕಾಶೆಯೊಂದಿಗೆ ಹೋಲಿಸಿ ನೋಡಿದಾಗ, ಸ ನಂ 63:5ರ ಜಮೀನಿನ ಪೂರ್ವಕ್ಕೆ- ಎಲೆ ನಂಜಯ್ಯನವರ ಜಮೀನು ಎಂದರೆ ಸ ನಂ 61:3 ಎಂಬುದು ಕಂಡು ಬರುತ್ತದೆ. ಅಂದರೆ, ಈ ಅಂಶವನ್ನು ನೋಡಿದಾಗ, ಸದರೀ 63:5 ಮತ್ತು 61:3ರ ನಡುವೆ ಇರುವ 61:4ರ ಜಮೀನನ್ನು ತೋರಿಸಿರುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

46. ಮುಂದುವರಿದು, ಒಂದು ವೇಳೆ ಸದರೀ ಸ ನಂ 61:4 ಸ ನಂ 63:5ರಲ್ಲಿ ಮಿಲೀನವಾಗದೇ ಇದ್ದಿದ್ದರೆ ಮತ್ತು ಸದರೀ 61:4ರ ಜಮೀನನ್ನು ಸೇರಿಸಿ ಸದರೀ ಲಕ್ಷ್ಮಣರೆಡ್ಡಿಯವರು ಅಡಮಾನ ಮಾಡದೇ ಹೋಗಿದ್ದರೆ, ತಾನು ಅಡಮಾನ ಮಾಡಿದ ಸ ನಂ 63:5ರಲ್ಲಿ 20 ಗುಂಟೆ ಜಮೀನಿನ ಪೂರ್ವದಲ್ಲಿ ಸ ನಂ 61:4 ಎಂದಾಗಲೀ ಅಥವಾ ವಾದಿಯ ತಾತನವರ ಹೆಸರಾಗಲೀ ಅಥವಾ ತಮ್ಮ ಜಮೀನು ಎಂದಾಗಲೀ ನಮೂದು ಮಾಡಬಹುದಾಗಿತ್ತು, ಆದರೆ ಸದರೀ ಅಡಮಾನ ಪತ್ರದಲ್ಲಿ ಸದರೀ ಸ ನಂ 63:5ರ ಪೂರ್ವದಲ್ಲಿ ಎಲೆನಂಜಯ್ಯನವರ ಜಮೀನು ಎಂದು ನಮೂದು ಮಾಡಿದ್ದು ಸದರೀ ಜಮೀನು ಸ ನಂ 61:3 ಆಗಿರುತ್ತದೆ ಎಂದು ಬಹಳ ಸ್ಪಷ್ಟವಾಗಿ ಊಹೆ ಮಾಡಿಕೊಳ್ಳಬಹುದಾಗಿದೆ, ಅಲ್ಲದೇ ಸ ನಂ 63:5ರಲ್ಲಿ ಸ ನಂ 61:4 ಮಿಲೀನವಾಗಿತ್ತು ಎಂದೂ ಸಹಾ ಊಹಿಸಿಕೊಳ್ಳಬಹುದಾಗಿದೆ. ಅಲ್ಲದೇ ಸದರೀ ಅಂಶವನ್ನು ನಿ ಡಿ 44 ರಿಂದ 51ರ ಕಚ್ಚಾ

ನಕಾಶೆಗಳನ್ನು ನೋಡಿದಾಗಲೂ ಸಹಾ, ನಿ ಡಿ 3ರ ಅಡಮಾನ ಪತ್ರದ ಪ್ರಕಾರ ಸ ನಂ 63:5ರ ಪೂರ್ವದಲ್ಲಿ ಎಲೆನಂಜಯ್ಯನವರ ಜಮೀನಾದ ಸ ನಂ 61:3 ಇರುತ್ತದೆ ಎಂದು ಕಂಡು ಬಂದಿದ್ದು, ಸದರೀ ಸ ನಂ 61:4 ಕೇವಲ ಅನುಭವದ ಆಧಾರದ ಮೇರೆಗೆ ಬಂದ ಕಾರಣ, ಸದರೀ ಅನುಭವವನ್ನು ಸ ನಂ 63:5ರೊಂದಿಗೆ ಸೇರಿಸಿ ವಾದಿಯ ತಾತನವರಾದ ಚಿನ್ನಪ್ಪನವರು ಅನುಭವಿಸುತ್ತಿದ್ದರು, ಆ ನಂತರ ಸದರೀ ಅನುಭವದ ಆಧಾರದ ಮೇಲೆಯೇ ಸದರೀ ಲಕ್ಷ್ಮಣರೆಡಿಡಯವರು ನಿ ಡಿ 3ರಂತೆ ಗಂಗಪ್ಪನವರಿಗೆ ಆಧಾರ ಮಾಡಿ ನಂತರ ಸದರೀ ಸ್ವತ್ತನ್ನೇ ನಿ ಡಿ 13ರ ಮೂಲಕ ಚಿನ್ನಪ್ಪ ಬಿನ್ ಗಂಗಪ್ಪನವರಿಗೆ ಮಾರಾಟ ಮಾಡಿದ್ದರು ಎಂದು ಊಹೆ ಮಾಡಿಕೊಳ್ಳಬಹುದಾಗಿದೆ.

47. ಮುಂದುವರಿದು ನಿ ಡಿ 4 ಸ ನಂ 63:5ಕ್ಕೆ ಸಂಬಂಧಿಸಿ ಋಣಭಾರ ಪತ್ರವಾಗಿದ್ದು, ಸದರೀ ದಾಖಲೆಯ ಪ್ರಕಾರ ಚಿನ್ನಪ್ಪನವರ ದತ್ತು ಮಗ ಲಕ್ಷ್ಮಣ ರೆಡ್ಡಿಯವರು ಸದರೀ ಸ ನಂ 63:5ಕ್ಕೆ ಸಂಬಂಧಿಸಿ 20 ಗುಂಟೆ ಜಮೀನನ್ನು ಆದೆಪ್ಪನ ಮಗ ಗಂಗಪ್ಪನವರಿಗೆ ಅಡಮಾನ ಮಾಡಿದ್ದರು ಎಂಬುದು ಸ್ಪಷ್ಟವಾಗಿ ನಮೂದಾಗಿರುವುದು ಕಂಡು ಬರುತ್ತದೆ. ಈಗಾಗಲೇ ನಿಡಿ 3ರ ಅಡಮಾನ ಪತ್ರವನ್ನು ಸ್ವತಃ ವಾದಿಯೇ ತನ್ನ ಪಾಟೀ ಸವಾಲಿನಲ್ಲಿ ಒಪ್ಪಿಕೊಂಡಿದ್ದರಂದ ಸದರೀ ನಿ ಡಿ 4ರ ದಾಖಲೆ ಬಗ್ಗೆ ಹೆಚ್ಚಿನ ವಿವರಣೆ ಅವಶ್ಯಕತೆ ಇರುವುದಿಲ್ಲ.

48. ನಿ ಡಿ 5 ಎಂ.ಆರ್.ಸಂ 16:1983-84ನೇ ಸಾಲಿನ ಮ್ಯುಟೇಷನ್ ಆದೇಶ ಪ್ರತಿಯಾಗಿದ್ದು, ಸದರೀ ದಾಖಲೆಯ ಪ್ರಕಾರ ಚಿನ್ನಪ್ಪ ಮತ್ತು ಆತನ ಮಗ ರಾಮಪ್ಪ ಮರಣಾನಂತರ ಚಿನ್ನಪ್ಪನವರಿಗೆ ಸಂಬಂಧಿಸಿದ ಸ್ವತ್ತಿಗೆ ಸಂಬಂಧಿಸಿ ಖಾತೆಯು ಆತನ ವಾರಸುದಾರರ ಪೈಕಿ ಈ ಪ್ರಸ್ತುತ ವಾದಿಯ ಹೆಸರಿಗೆ ಬದಲಾವಣೆ ಮಾಡಲು ಆದೇಶ ಮಾಡುವಂತೆ ಕೋರಿ ಅರ್ಜಿ ಸಲ್ಲಿಸಿದ ಮೇರೆಗೆ ಸದರೀ ಎಂ ಆರ್ ಸಂ 16:1983-84ರಂತೆ ವಾದಿಯ ಹೆಸರಿಗೆ ಮ್ಯುಟೇಶನ್ ಆದೇಶವಾಗಿರುತ್ತದೆ. ಸದರೀ ಆದೇಶದ ಮೊದಲ ಭಾಗದಲ್ಲಿ

ಚಿನ್ನಪ್ಪನವರ ಹೆಸರಿನಲ್ಲಿದ್ದ ಖಾತೆ ಹನುಮಂತರೆಡ್ಡಿ ಬಿನ್ ರಾಮಪ್ಪನವರ ಹೆಸರಿಗೆ ಬದಲಾವಣೆ ಕೋರಿ ಅರ್ಜಿಯನ್ನು ಸಲ್ಲಿಸಲಾಗಿರುತ್ತದೆ ಎಂದು ನಮೂದು ಮಾಡಿರುತ್ತಾರೆ.

49. ಆದರೆ, ಇಲ್ಲಿ ಅತೀ ಮುಖ್ಯವಾಗಿ ಗಮನಿಸಬೇಕಾದ ಅತೀ ಮುಖ್ಯ ಅಂಶವೆಂದರೆ, ಸದರೀ ಅರ್ಜಿಯ ಮೇಲೆ ನಿ ಡಿ 5ರ 2ನೇ ಪುಟದಲ್ಲಿ ಆದ ಮ್ಯುಟೇಶನ್ ಆದೇಶವನ್ನು ಸೂಕ್ಷ್ಮವಾಗಿ ಗಮನಿಸಿದಾಗ, ದಾವಾ ಸ್ವತ್ತು ಮತ್ತು ಇತರೆ ಸ್ವತ್ತುಗಳಿಗೆ ಅನ್ವಯಿಸಿ ಖಾತೆದಾರನಾದ ಚಿನ್ನಪ್ಪ ಪವತಿಯಾಗಿದ್ದು ಅವರಿಗೆ ಹೆಂಡತಿ ಲಕ್ಷ್ಮಮ್ಮ ಎಂಬುವವರಿದ್ದು, ಅವರಿಗೆ ಬೈರಪ್ಪ, ಹನುಮಂತರೆಡ್ಡಿ, ಕೃಷ್ಣಾರೆಡ್ಡಿ ಮತ್ತು ಸುಬ್ಬಾರೆಡ್ಡಿ ಎಂಬ ಮಕ್ಕಳಿರುತ್ತಾರೆಂದು ವಂಶ ವೃಕ್ಷದಿಂದ ತಿಳಿದು ಬಂದಿರುತ್ತದೆ. ಆ ಪೈಕಿ ಹನುಮಂತರೆಡ್ಡಿಯವರ ಹೆಸರಿಗೆ ತಮ್ಮ ತಂದೆಯ ಹೆಸರಿನಲ್ಲಿದ್ದ ಖಾತೆಯನ್ನು ಬದಲಾವಣೆ ಮಾಡಲು ಉಳಿದ ಮಕ್ಕಳು ಒಪ್ಪಿಗೆ ಕೊಟ್ಟಿರುತ್ತಾರೆ ಆ ಪ್ರಕಾರ ಹನುಮಂತರೆಡ್ಡಿ ಅಂದರೆ ಈ ದಾವೆಯ ವಾದಿಯ ಹೆಸರಿಗೆ ಖಾತೆ ಬದಲಾಯಿಸಲು ಅದೇಶವಾಗಿರುತ್ತದೆ ಎಂದು ಸ್ಪಷ್ಟವಾಗಿ ನಮೂದು ಮಾಡಿರುತ್ತಾರೆ.

50. ಇಲ್ಲಿ ನಾವು ಅತೀ ಮುಖ್ಯವಾಗಿ ಗಮನಿಸಲೇಬೇಕಾದ ಪ್ರಮುಖ ಅಂಶವೆಂದರೆ, ವಾದಿಯ ವಾದದ ಪ್ರಕಾರ ಚಿನ್ನಪ್ಪ ಎಂಬುವವರು ತನ್ನ ತಾತನಾಗಿರುತ್ತಾರೆ ಮತ್ತು ರಾಮಪ್ಪ ಎಂಬುವವರು ತಮ್ಮ ತಂದೆಯಾಗಿರುತ್ತಾರೆ. ಆದರೆ, ನಿ ಡಿ 5ರ ಎಂ ಆರ್ ಸಂ 16:1983-84ರ ದಾಖಲೆಯ ಪ್ರಕಾರ ಚಿನ್ನಪ್ಪ ಮತ್ತು ಆತನ ಹೆಂಡತಿ ಲಕ್ಷ್ಮಮ್ಮನವರಿಗೆ ಬೈರಪ್ಪ, ಹನುಮಂತರೆಡ್ಡಿ, ಕೃಷ್ಣಾರೆಡ್ಡಿ ಮತ್ತು ಸುಬ್ಬಾರೆಡ್ಡಿ ಎಂಬ ಮಕ್ಕಳಿದ್ದರು ಎಂದು ತಿಳಿಸಿರುತ್ತಾರೆ. ಸದರೀ ಆದೇಶದಲ್ಲಿ ಚಿನ್ನಪ್ಪನವರಿಗೆ ರಾಮಪ್ಪ ಎಂಬ ಮಗನಿದ್ದ ಬಗ್ಗೆ ಮತ್ತು ಸದರೀ ರಾಮಪ್ಪನಿಗೆ ಈ ದಾವೆಯ ವಾದಿಯಾದ ಹನುಮಂತರೆಡ್ಡಿ ಎಂಬ ಮಗನಿದ್ದ ಎಂಬ ಬಗ್ಗೆ ಎಲ್ಲಿಯೂ ನಮೂದು ಮಾಡಿರುವುದಿಲ್ಲ, ಹೀಗಿರುವಾಗ, ಎಂ ಆರ್ ಸಂ 16:1983-84ರಂತೆ ಆದ ಆದೇಶವು ಪ್ರಸ್ತುತ ವಾದಿಯ ಹೆಸರಿಗೆ ಆಗಿರುತ್ತದೆ ಎಂದು ಊಹೆ ಮಾಡಿಕೊಳ್ಳಲಾಗುವುದಿಲ್ಲ, ಅಲ್ಲದೇ ಸದರೀ ದಾಖಲೆಯ ಬಗ್ಗೆ ಅನುಮಾನ ಕೂಡ

ಉಂಟಾಗುತ್ತದೆ. ಕಾರಣ, ಸದರೀ ಆದೇಶದಲ್ಲಿ ತೋರಿಸಿರುವುದು ಚಿನ್ನಪ್ಪನವರ ಮಗ ಹನುಮಂತರೆಡ್ಡಿಯವರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂಬುದಾಗಿ, ಆದರೆ ಸದರೀ ಆದೇಶವು ಪ್ರಸ್ತುತ ವಾದಿ ಅಂದರೆ ರಾಮಪ್ಪನ ಮಗ ಹನುಮಂತರೆಡ್ಡಿಯವರ ಹೆಸರಿಗೆ ಆಗಿರುತ್ತದೆ ಎಂದು ನಮೂದು ಮಾಡಿರುವುದಿಲ್ಲ.

51. ಅಲ್ಲದೇ ಇಲ್ಲಿ ನಾವು ಗಮನಿಸಬೇಕಾದ ಮತ್ತೊಂದು ಅತೀ ಪ್ರಮುಖ ಅಂಶವೆಂದರೆ, ನಿ ಡಿ 14ರ ಪ್ರಕಾರ ಸದರೀ ಸ ನಂ 61:4ರ ಜಮೀನು ಚಿನ್ನಪ್ಪನವರಿಗೆ ಉಡಾಫೆಯ ಮೂಲಕ ಅನುಭವದ ಆಧಾರದ ಮೇರೆಗೆ ಒಂದು ಹಿಸ್ಸೆ ಹೆಚ್ಚಾಗಿ ಬಂದಿರುವುದು ಕಂಡು ಬರುತ್ತದೆ. ಹೀಗಿರುವಾಗ, ಸದರೀ ಹಿಸ್ಸೆಯ ಕುರಿತು ಪ್ರತ್ಯೇಕ ಹಕ್ಕು, ಅಧಿಕಾರ ಇರುತ್ತದೆ ಎಂದು ಹೇಳಲು ಬರುವುದಿಲ್ಲ. ಅಲ್ಲದೇ ಇಲ್ಲಿ ಅತೀ ಪ್ರಮುಖವಾಗಿ ಗಮನಿಸಲೇಬೇಕಾದ ಮತ್ತೊಂದು ಅಂಶವೆಂದರೆ, ದಿ:10.10.1949ರಂದು ಚಿನ್ನಪ್ಪನ ದತ್ತು ಮಗನಾದ ಲಕ್ಷ್ಮಣರೆಡ್ಡಿಯವರು ನಿ ಡಿ 3ರ ತತ್ಸಮಾನ ದಾಖಲೆಯಾದ ನಿ ಡಿ 24ರ ಪ್ರಕಾರ ಗಂಗಪ್ಪನವರಿಗೆ ಸ ನಂ 63:5ಕ್ಕೆ ಸಂಬಂಧಿಸಿ ಅಡಮಾನ ಪತ್ರ ಮಾಡಿಕೊಟ್ಟಿದ್ದು, ಸದರೀ ಸ್ವತ್ತಿನಲ್ಲಿ ಪೂರ್ವಕ್ಕೆ ಎಲೆನಂಜಯ್ಯನವರ ಜಮೀನು ಎಂದು ತೋರಿಸಿದ್ದು ಸದರೀ ಸ್ವತ್ತನ್ನೇ ಈಗಾಗಲೇ ನಾವು ಮೇಲೆ ವಿವರಿಸಿದಂತೆ ಚಿನ್ನಪ್ಪನವರ ಮಗನಾದ ರಾಮಪ್ಪ ಮತ್ತು ಚಿನ್ನಪ್ಪನ ದತ್ತು ಮಗನಾದ ಲಕ್ಷ್ಮಣರೆಡ್ಡಿ ಇಬ್ಬರೂ ಸೇರಿ ನಿ ಪಿ 13 ರಂತೆ ಚಿನ್ನಪ್ಪ ಬಿನ್ ದೊಡ್ಡಗಂಗಪ್ಪನವರ ಹೆಸರಿಗೆ ಕ್ರಯ ಪತ್ರವನ್ನು ಮಾಡಿಕೊಟ್ಟಿರುತ್ತಾರೆ. ನಂತರ ನಿ ಡಿ 3ರ ತತ್ಸಮಾನ ದಾಖಲೆಯಾದ ನಿ ಡಿ 24ರಲ್ಲಿ ತೋರಿಸಿದ ಚಕ್ಕು ಬಂದಿಯ ಸ್ವತ್ತನ್ನೇ ಚಿನ್ನಪ್ಪ ಬಿನ್ ದೊಡ್ಡಗಂಗಪ್ಪನವರು 1966ನೇ ಇಸವಿಯಲ್ಲಿಯೇ ನಿ ಡಿ 40ರ ಪ್ರಕಾರ ಪ್ರಸ್ತುತ ಪ್ರತಿವಾದಿಯವರಿಗೆ ಮಾರಾಟ ಮಾಡಿರುತ್ತಾರೆ. ಈ ಎಲ್ಲಾ ಅಂಶವನ್ನು ನೋಡಿದಾಗ, ನಿ ಡಿ 5ರ ಮ್ಯುಟೇಶನ್ ಆದೇಶ ಆಗುವ ಮೊದಲೇ ಅಂದರೆ 1983-84ನೇ ಇಸವಿಗಿಂತಲೂ ಮುಂಚಿತವಾಗಿ ದಾವಾ ಸ್ವತ್ತಿಗೆ ಸಂಬಂಧಿಸಿ ಹಲವಾರು ವ್ಯವಹಾರಗಳು ನಡೆದು ಹೋಗಿದ್ದವು ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ.

52. ಮುಂದುವರಿದು, ಇಲ್ಲಿ ನಾವು ಗಮನಿಸಬೇಕಾದ ಮತ್ತೊಂದು ಅಂಶವೇಂದರೆ, ನಿ ಡಿ 5ರ ಪ್ರಕಾರ ಸ ನಂ 61಼4ಕ್ಕೆ ಸಂಬಂಧಿಸಿದ ಖಾತೆಯು ಚಿನ್ನಪ್ಪನ ಹೆಸರಿನಿಂದ ನೇರವಾಗಿ ಪ್ರಸ್ತುತ ವಾದಿಯ ಹೆಸರಿಗೆ ಖಾತೆ ಆಗಿರುತ್ತದೆ. ಆದರೆ, ವಾದಿಯ ವಾದದ ಪ್ರಕಾರ ಚಿನ್ನಪ್ಪನ ಮರಣಾನಂತರ ತನ್ನ ತಂದೆ ರಾಮಪ್ಪ 40 ವರ್ಷಗಳ ಕಾಲ ಸದರೀ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದರು ಎಂದು ತಿಳಿಸಿರುತ್ತಾರೆ. ಆದರೆ, ಸದರೀ ರಾಮಪ್ಪ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇದ್ದ ಬಗ್ಗೆ ಯಾವುದೇ ಒಂದು ಸಣ್ಣ ದಾಖಲೆಯೂ ಸಹಾ ನ್ಯಾಯಾಲಯದ ಕಡತದಲ್ಲಿ ಕಾಣಸಿಗುವುದಿಲ್ಲ ಮತ್ತು ಅವರ ಹೆಸರಿಗೆ ಯಾವುದೇ ಕಂದಾಯ ದಾಖಲೆಗಳು ವರ್ಗಾವಣೆ ಆಗಿರುವುದಿಲ್ಲ. ಹೀಗಿರುವಾಗ, ನಿ ಡಿ 5ರ ಮುಖಾಂತರ ನೇರವಾಗಿ ವಾದಿಯ ಹೆಸರಿಗೆ ಖಾತೆ ಚಿನ್ನಪ್ಪನವರ ಹೆಸರಿನಿಂದ ಬದಲಾವಣೆ ಆಗಿದೆ ಎಂದ ಮಾತ್ರಕ್ಕೆ, ಅವರಿಗೆ ದಾವಾ ಸ್ವತ್ತಿನ ಕುರಿತು ಹಕ್ಕು ಅಧಿಕಾರ ಸ್ವಾಧೀನ ಇದೆ ಎಂದು ಹೇಳಲಾಗುವುದಿಲ್ಲ.

53. ನಿ ಡಿ 6 ಸ ನಂ 63ಕ್ಕೆ ಸಂಬಂಧಿಸಿ ಹಿಸ್ಸಾ ಟಿಪ್ಪಣಿ ಪ್ರತಿಯಾಗಿದ್ದು, ಸದರೀ ದಾಖಲೆಯ ಪ್ರಕಾರ ಸ ನಂ 63ರಲ್ಲಿ ಅನುಭವದಂತೆ 5 ಹಿಸ್ಸೆಗಳಿದ್ದು ಪ್ರಿಲಿಮಿನರಿ ರೀಹಿಸ್ಸೆಯಂತೆ 6 ಹಿಸ್ಸೆಗಳಿರುವುದು ಕಂಡು ಬರುತ್ತದೆ. ಸದರೀ ದಾಖಲೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಪ್ರಿಲಿಮಿನರಿ ರೀಹಿಸ್ಸೆಯಂತೆ 5 ಮತ್ತು 6ನೇ ಹಿಸ್ಸೆ ಚಿನ್ನಪ್ಪ ಬಿನ್ ದೊಡ್ಡ ಹನುಮಂತರಾಯಪ್ಪನವರ ಹೆಸರಿನಲ್ಲಿದ್ದು, ಸದರೀ ದಾಖಲೆಯ 2ನೇ ಷರಾದಲ್ಲಿ ತಿಳಿಸಿದಂತೆ 5ನೇ ಹಿಸ್ಸೆಯು ಬೇರೆ ಇಲ್ಲದೇ 6ನೇ ಹಿಸ್ಸೆಯಲ್ಲಿ ಸೇರಿದ್ದು ಹದ್ದುಬಸ್ತು ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಈ ಅಂಶವನ್ನು ನೋಡಿದಾಗ, ಸದರೀ ಹೆಚ್ಚಿನ ಹಿಸ್ಸೆಯು ಪ್ರತಿವಾದಿಯ ವಾದದಂತೆ ಸ ನಂ 61಼4ರ ಜಮೀನು ಸ ನಂ 63಼5ರಲ್ಲಿ ಸೇರಿಕೊಂಡಿರುತ್ತದೆ ಎಂದು ಊಹೆ ಮಾಡಿಕೊಳ್ಳಬಹುದಾಗಿದೆ. ಮೇಲಾಗಿ, ಸದರೀ ನಿ ಡಿ 6ರಲ್ಲಿ ನಮೂದಿಸಿದ ಅಂಶಗಳ ಬಗ್ಗೆ ವಾದಿಯು ತನ್ನ ಯಾವುದೇ ತಕರಾರನ್ನು ತಿಳಿಸಿರುವುದಿಲ್ಲ ಮತ್ತು ಸದರೀ ಅಂಶದ ಬಗ್ಗೆ

ತಮಗೆ ಗೊತ್ತಿಲ್ಲ ಎಂದು ತಮ್ಮ ಪಾಟೀ ಸವಾಲಿನಲ್ಲಿ ಉತ್ತರಿಸಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ.

54. ಮುಂದುವರಿದು, ನಿ ಡಿ 7 ರಿಂದ 10 ಸ ನಂ 61, 63ಕ್ಕೆ ಸಂಬಂಧಿಸಿದ ಟಿಪ್ಪಣಿ ಉತ್ತಾರ್ ಮತ್ತು ನಕಾಶೆಗಳಾಗಿದ್ದು, ನಿ ಡಿ 7 ಮತು 8ರ ಪ್ರಕಾರ ಸ ನಂ 63ಃ3ರಲ್ಲಿ ಒಟ್ಟಿಗೆ 5 ಹಿಸ್ಸೆಗಳಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಮುಂದುವರಿದು, ಪ್ರತಿವಾದಿಯ ವಾದದ ಪ್ರಕಾರ ಸ ನಂ 61ರಲ್ಲಿ ಒಟ್ಟಿಗೆ 3 ಹಿಸ್ಸೆಗಳು ಮಾತ್ರ ಇರುತ್ತವೆ ಅದಕ್ಕೆ ಅನುಗುಣವಾಗಿ ನಿ ಡಿ 9 ಮತ್ತು 10ನ್ನು ಹಾಜರು ಪಡಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಆದರೆ ನಿ ಡಿ 9 ಮತ್ತು 10ನ್ನು ಸೂಕ್ಷ್ಮವಾಗಿ ಗಮನಿಸಿದಾಗ, ನಿ ಡಿ 9ರ ಮೇಲ್ಭಾಗದಲ್ಲಿ ಸ ನಂ 61ಕ್ಕೆ ಸಂಬಂಧಿಸಿ 4 ಹಿಸ್ಸೆಗಳಾಗಿರುತ್ತವೆ ಎಂದು ನಮೂದು ಮಾಡಿದ್ದು, ಆ ಪೈಕಿ 61ಃ4 ಎಂದು ಬರೆದಿರುವುದನ್ನು ತಿದ್ದುಪಡಿ ಮಾಡಿ ಕಾಣದ ಹಾಗೆ ಮಾಡಿರುವುದು ಕಂಡು ಬರುತ್ತದೆ. ಅದೇ ರೀತಿ ನಕಾಶೆಯಲ್ಲಿಯೂ ಸಹಾ ತಿದ್ದುಪಡಿ ಮಾಡಿರುವುದು ಕಂಡು ಬರುತ್ತದೆ ಮತ್ತು ನಿ ಡಿ 10ರಲ್ಲಿಯ ನಕಾಶೆಯಲ್ಲಿಯೂ ಸಹಾ, 61ಃ4ಕ್ಕೆ ಸಂಬಂಧಿಸಿದ ಕಾಲಂನಲ್ಲಿ ತಿದ್ದುಪಡಿ ಮಾಡಿರುವುದು ಕಂಡು ಬರುತ್ತದೆ. ಆದರೆ ಸದರೀ ತಿದ್ದುಪಡಿಯ ವಿಚಾರವಾಗಿ ವಾದಿಯು ಎಲ್ಲಿಯೂ ತನ್ನ ತಕರಾರನ್ನು ತಿಳಿಸಿರುವುದಿಲ್ಲ ಮತ್ತು ಅದಕ್ಕೆ ಪ್ರತಿಯಾಗಿ ಯಾವುದೇ ಸಣ್ಣ ಸಾಕ್ಷ್ಯಾಧಾರವನ್ನೂ ಸಹಾ ನೀಡಿರುವುದಿಲ್ಲ. ಸದರೀ ತಿದ್ದುಪಡಿ ಮಾಡಿದ ಬಗ್ಗೆ ಸಂಶಯ ಉಂಟಾದರೂ ಸಹಾ ಸದರೀ ತಿದ್ದುಪಡಿಯನ್ನು ವಾದಿಯು ಎಲ್ಲಿಯೂ ತಕರಾರು ಮಾಡದೇ ಇರುವುದರಿಂದ, ಸದರೀ ತಿದ್ದುಪಡಿಯನ್ನು ವಾದಿಯು ಒಪ್ಪಿಕೊಂಡಿರುತ್ತಾರೆ ಎಂದು ಊಹೆ ಮಾಡಿಕೊಳ್ಳಬಹುದಾಗಿದೆ.

55. ನಿ ಡಿ 11 ಸ ನಂ 61ಃ3ಕ್ಕೆ ಸಂಬಂಧಿಸಿ ಎಲೆನಂಜಯ್ಯನವರ ಸೊಸೆ ನಂಜಮ್ಮನವರು ಕೆ ನಂಜಾರೆಡ್ಡಿಯವರಿಗೆ ದಿಃ5.7.1985ನೇ ಇಸವಿಯಲ್ಲಿ ಕ್ರಯ ಪತ್ರವನ್ನು ಮಾಡಿಕೊಟ್ಟಿರುವುದು ಕಂಡು ಬರುತ್ತದೆ. ಸದರೀ ದಾಖಲೆಯ ಪ್ರಕಾರ ಸನಂ 61ಃ3ರ ಪಶ್ಚಿಮ ಭಾಗದಲ್ಲಿ ಸೋಮಶೇಖರರೆಡ್ಡಿ ಅಂದರೆ ಈ ದಾವೆಯ ಪ್ರತಿವಾದಿಯ ಹೆಸರು ನಮೂದು

ಮಾಡಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಅಂದರೆ, ಸದರೀ ಸ ನಂ 61៖3ರ ಪಶ್ಚಿಮ ಭಾಗದಲ್ಲಿ ಈ ದಾವೆಯ ಪ್ರತಿವಾದಿಯವರು ಇರುತ್ತಾರೆ ಎಂಬುದು ಈ ದಾಖಲೆಯ ಮೂಲಕ ಸ್ಪಷ್ಟವಾಗುತ್ತದೆ. ಈ ಅಂಶದ ಕುರಿತು ಪ್ರತಿವಾದಿಯವರು ತಮ್ಮ ವಾದ ಮಂಡನೆಂನು ಸಮಯದಲ್ಲಿ ಸದರೀ ಸ ನಂ 61៖3ರ ಜಮೀನಿನ ಪಶ್ಚಿಮ ಭಾಗದಲ್ಲಿ ತನ್ನ ಜಮೀನಾದ ಸ ನಂ 61៖4 ಮತ್ತು 63៖5 ಇರುವುದರಿಂದಲೇ ಸದರೀ ಕ್ರಯ ಪತ್ರದಲ್ಲಿ ಸ್ವತ್ತಿನ ಪಶ್ಚಿಮ ಭಾಗದಲ್ಲಿ ತನ್ನ ಹೆಸರನ್ನು ತೋರಿಸಲಾಗಿರುತ್ತದೆ ಎಂದು ವಾದ ಮಂಡಿಸಿರುತ್ತಾರೆ. ಅಲ್ಲದೇ ತಮ್ಮ ವಾದವನ್ನು ಮುಂದುವರಿಸಿ, ನಿ ಡಿ 3ರ ಪ್ರಕಾರ ಲಕ್ಷ್ಮಣರೆಡ್ಡಿಯವರು ಸನಂ 63៖5ಕ್ಕೆ ಸಂಬಂಧಿಸಿ ಮಾಡಿದ ಅಡಮಾನ ಪತ್ರದಲ್ಲಿ ಪೂರ್ವ ಭಾಗಕ್ಕೆ ಎಲೆನಂಜಯ್ಯನವರ ಜಮೀನು ಎಂದು ತೋರಿಸಿದ್ದು ಸದರೀ ಜಮೀನೇ ಎಲೆನಂಜಯ್ಯನವರಿಗೆ ಸೇರಿದ ಸ ನಂ 61៖3 ಆಗಿರುತ್ತದೆ ಎಂತಲೂ ತಮ್ಮ ವಾದ ಮಂಡನೆಯನ್ನು ಮಂಡಿಸಿರುತ್ತಾರೆ.

56. ಮುಂದುವರಿದು, ಸದರೀ ಎಲೆನಂಜಯ್ಯನವರ ಮರಣಾನಂತರ ಆತನ ಸೊಸೆ ನಂಜಮ್ಮನವರು ಸದರೀ 61៖3ರ ಜಮೀನನ್ನು ಕೆ ನಂಜಾರೆಡ್ಡಿಯವರಿಗೆ ಸದರೀ ನಿ ಡಿ 11ರ ಮುಖಾಂತರ ಮಾರಾಟ ಮಾಡಿದ್ದರಿಂದಲೇ, ಚಿನ್ನಪ್ಪ ಬಿನ್ ದೊಡ್ಡಗಂಗಪ್ಪನವರು ಸ ನಂ 63៖5ನ್ನು ತನಗೆ ಅಂದರೆ ಈ ದಾವೆಯ ಪ್ರತಿವಾದಿಗೆ ನಿ ಡಿ 40ರ ಕ್ರಯ ಪತ್ರದ ಮುಖಾಂತರ ಮಾರಾಟ ಮಾಡುವ ಸಮಯದಲ್ಲಿ ಸ ನಂ 63៖5ರ ಪೂರ್ವದಲ್ಲಿ ಕೆ ನಂಜಾರೆಡ್ಡಿ ಎಂದು ನಮೂದು ಮಾಡಿರುತಾರೆ ಎಂತಲೂ ತಿಳಿಸಿರುತ್ತಾರೆ. ಮುಂದುವರಿದು, ಒಂದು ವೇಳೆ ಸದರೀ ಸ ನಂ 61៖3ರ ಪಶ್ಚಿಮದಲ್ಲಿ ವಾದಿಗೆ ಸಂಬಂಧಿಸಿದ ಜಮೀನು ಇದ್ದುದ್ದರೆ, ಸದರೀ ನಿ ಡಿ 11ರ ಕ್ರಯ ಪತ್ರದಲ್ಲಿ ವಾದಿಯ ಹೆಸರಾಗಲೀ ಅಥವಾ ಅವರ ಪೂರ್ವಜರ ಹೆಸರಾಗಲೀ ನಮೂದು ಮಾಡುತ್ತಿದ್ದರು ಎಂದು ತಿಳಿಸಿರುತ್ತಾರೆ.

57. ಈ ಅಂಶವನ್ನು ಸೂಕ್ಷ್ಮವಾಗಿ ಗಮನಿಸಿದಾಗ, ನಿ ಡಿ 3ರ ಅಡಮಾನ ಪತ್ರದ ಪ್ರಕಾರ ಸ ನಂ 63៖5ರ ಪೂರ್ವದಲ್ಲಿ ಎಲೆನಂಜಯ್ಯ ಎಂದು ನಮೂದು ಮಾಡಿದ್ದು ಮತ್ತು ನಿ ಡಿ 40ರ ಕ್ರಯಪತ್ರದ ಪ್ರಕಾರ ಸನಂ 63៖5ರ ಪೂರ್ವದಲ್ಲಿ ಕೆ ನಂಜಾರೆಡ್ಡಿ ಎಂದು

ಸ್ಪಷ್ಟವಾಗಿ ನಮೂದು ಮಾಡಿರುತ್ತಾರೆ. ಅದೇ ರೀತಿ ಎಲೆನಂಜಯ್ಯನವರಿಗೆ ಸೇರಿದ ಸ ನಂ 61ಃ3ರ ಜಮೀನನ್ನು ಸದರೀ ಎಲೆನಂಜಯ್ಯನವರ ಸೊಸೆ ನಂಜಮ್ಮನವರು ನಿ ಡಿ 11ರ ಕ್ರಯ ಪತ್ರದ ಪ್ರಕಾರ ಕೆ ನಂಜಾರೆಡ್ಡಿಯವರಿಗೆ ಮಾರಾಟ ಮಾಡಿದ್ದು, ಸದರೀ ದಾಖಲೆಯಲ್ಲಿ ಸ ನಂ 61ಃ3ರ ಪಶ್ಚಿಮದಲ್ಲಿ ಪ್ರಸ್ತುತ ಪ್ರತಿವಾದಿಯವರು ಇರುತ್ತಾರೆ ಎಂದು ನಮೂದು ಮಾಡಿರುತ್ತಾರೆ. ಅಂದರೆ, ಪ್ರತಿವಾದಿಯ ವಾದದ ಪ್ರಕಾರ ಎಲೆನಂಜಯ್ಯನವರಿಗೆ ಸೇರಿದ ಸ ನಂ 61ಃ3 ಮತ್ತು ಪ್ರಸ್ತುತ ಪ್ರತಿವಾದಿಯವರಿಗೆ ಸೇರಿದ ಜಮೀನುಗಳು ಅಕ್ಕಪಕ್ಕದಲ್ಲಿ ಇರುತ್ತವೆ ಎಂಬುದು ಸ್ಪಷ್ಟವಾಗುತ್ತದೆ. ಹೀಗಿರುವಾಗ, ಸ ನಂ 61ಃ3 ಮತ್ತು ಸ ನಂ 63ಃ5ರ ಮದ್ಯದಲ್ಲಿ ವಾದಿಯವರಿಗೆ ಸೇರಿದ ಜಮೀನು ಇರುವುದಿಲ್ಲ ಎಂಬುದೂ ಸಹಾ ಕಂಡು ಬರುತ್ತದೆ. ಅಲ್ಲದೇ ಇಲ್ಲಿ ಕಂಡು ಬರುವ ಮತ್ತೊಂದು ಪ್ರಮುಖ ಅಂಶವೆಂದರೆ, ಮೇಲೆ ವಿವರಿಸಿದ ಎಲ್ಲಾ ದಾಖಲೆಗಳ ಪ್ರಕಾರ ಸ ನಂ 61ಃ4 ಪ್ರತಿವಾದಿಯ ಸ್ವತ್ತಾದ ಸ ನಂ 63ಃ5ರಲ್ಲಿ ಮಿಲೀನವಾಗಿರುತ್ತದೆ ಮತ್ತು ಅದಕ್ಕೆ ಯಾವುದೇ ರೀತಿಯ ಪ್ರತ್ಯೇಕವಾದ ಗುರ್ತು ಇರುವುದಿಲ್ಲ ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ. ಆದ್ದರಿಂದ ನಿ ಡಿ 11ರಲ್ಲಿ ತೋರಿಸಿದ ಚಕ್ಕುಬಂದಿಯು ಪ್ರತಿವಾದಿಯ ವಾದಕ್ಕೆ ಬಹಳಷ್ಟು ಪುಷ್ಟೀ ನೀಡುವಂತ ದಾಖಲೆಯಾಗಿರುತ್ತದೆ.

58. ನಿ ಡಿ 12 ಸ ನಂ 54ಃ2 ಮತ್ತು 3ಕ್ಕೆ ಸಂಬಂಧಿಸಿ ವಾದಿಯ ತಂದೆ ರಾಮಪ್ಪ ಮತ್ತು ಆತನ ತಾಯಿ ಸಂಜೀವಮ್ಮ ನಂಜಾರೆಡ್ಡಿಯವರಿಗೆ ಬರೆದುಕೊಟ್ಟ ಕ್ರಯಪತ್ರವಾಗಿರುತ್ತದೆ. ಆದರೆ, ಸದರೀ ದಾಖಲೆಯು ಈ ಒಂದು ಪ್ರಸ್ತುತ ಪ್ರಕರಣಕ್ಕೆ ಅಷ್ಟಾಗಿ ಹೊಂದಾಣಿಕೆ ಕಂಡು ಬರುವುದಿಲ್ಲ, ಕಾರಣ ಸದರೀ ದಾಖಲೆಯ ವಿಷಯ ವಸ್ತುವಾದ ಸ್ವತ್ತು ಪ್ರಸ್ತುತ ದಾವಾ ಸ್ವತ್ತಿಗಾಗಲೀ ಅಥವಾ ವಾದಿ ಮತ್ತು ಪ್ರತಿವಾದಿಯವರಿಗಾಗಲೀ ಪೂರಕವಾಗಿರುವುದಿಲ್ಲ. ಕೇವಲ ಸದರೀ ಸ್ವತ್ತನ್ನು ವಾದಿಯ ತಂದೆ ಮತ್ತು ಆತನ ತಾಯಿ ನಂಜಾರೆಡ್ಡಿಯವರಿಗೆ ಮಾರಾಟ ಮಾಡಿರುತ್ತಾರೆ ಎಂಬುದು ಕಂಡು ಬರುತ್ತದೆ. ಆದ್ದರಿಂದ ಸದರೀ ದಾಖಲೆಯ ಬಗ್ಗೆ ಹೆಚ್ಚಿನ ವಿವರಣೆ ಅಗತ್ಯ ಇರುವುದಿಲ್ಲ.

59. ನಿ ಡಿ 13 ಸ ನಂ 63:2 ಮತ್ತು 63:3ಕ್ಕೆ ಸಂಬಂಧಿಸಿ ಎಲೆನಂಜಯ್ಯನವರ ಸೊಸೆಯಾದ ನಂಜಮ್ಮ ಕೋಂ ಗಂಗಾಧರಪ್ಪನವರು ಮತ್ತು ಆಕೆಯ ಮಗ ಅಡವೀಶಪ್ಪ ಇಬ್ಬರೂ ಸೇರಿ ದಿ:15.10.1953ರಂದು ಪ್ರತಿವಾದಿಯ ತಂದೆಯಾದ ಕೆ.ಬಿ.ಹನುಮಂತರೆಡ್ಡಿ ಯವರಿಗೆ ಮಾಡಿಕೊಟ್ಟ ಕ್ರಯ ಪತ್ರವಾಗಿರುತ್ತದೆ. ಸದರೀ ದಾಖಲೆಯ ಪ್ರಕಾರ ಸ ನಂ 63:2 ಮತ್ತು 63:3ರ ಸ್ವತ್ತಿನ ಚಕ್ಕುಬಂದಿಯಲ್ಲಿ ತೋರಿಸಿದಂತೆ ಪಶ್ಚಿಮ ಭಾಗಕ್ಕೆ ನಿಮ್ಮ ಜಮೀನು ಎಂದು ಬರೆದಿರುವುದು ಕಂಡು ಬರುತ್ತದೆ. ಅಂದರೆ ಸದರೀ ಸ್ವತ್ತಿನ ಪಶ್ಚಿಮ ಭಾಗದಲ್ಲಿ ಪ್ರಸ್ತುತ ಪ್ರತಿವಾದಿಯವರ ತಂದೆಯವರಾದ ಕೆ.ಬಿ.ಹನುಮಂತರೆಡ್ಡಿಯವರಿಗೆ ಸೇರಿದ ಸ್ವತ್ತು ಇರುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಸದರೀ ದಾಖಲೆಗೆ ಅನುಗುಣವಾಗಿ ಪ್ರತಿವಾದಿಯು ತಮ್ಮ ವಾದ ಮಂಡನೆಯ ಸಮಯದಲ್ಲಿ ಸದರೀ ಸ್ವತ್ತಿನ ಪಶ್ಚಿಮ ಭಾಗದಲ್ಲಿರುವ ಸ್ವತ್ತು ಪ್ರಸ್ತುತ ದಾವಾ ಸ್ವತ್ತಾದ ಸ ನಂ 63:5 ಮತ್ತು 61:4ರ ಸ್ವತ್ತುಗಳಾಗಿರುತ್ತವೆ ಎಂದು ತಿಳಿಸಿರುತ್ತಾರೆ.

60. ಮುಂದುವರಿದು, ನಿ ಡಿ 14- ದಿ:24.6.1933ರ ಸರ್ವೆ ನಂಬರ್ 61ಕ್ಕೆ ಸಂಬಂಧಿಸಿ ಸರ್ವೆ ಟಿಪ್ಪಣಿ ಕಾಪಿಯಾಗಿದ್ದು, ಈಗಾಗಲೇ ಈ ದಾಖಲೆಯ ಬಗ್ಗೆ ಮೇಲೆ ವಿವರಿಸಿದಂತೆ ಸ ನಂ 61ರಲ್ಲಿ ಪ್ರಿಲಿಮಿನರಿ ರೀಸರ್ವೆಯಂತೆ 3 ಪೋಡುಗಳಿದ್ದು ಅನುಭವದಂತೆ 4 ಪೋಡುಗಳಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಸದರೀ ಅಂಶದ ಕುರಿತು ನಿ ಡಿ 14ರಲ್ಲಿ ಬರೆದ 2ನೇ ಷರಾವನ್ನು ನೋಡಿದಾಗ, ಸದರೀ ಸರ್ವೆ ನಂಬರಿನಲ್ಲಿ 3 ಹಿಸ್ಸೆಗಳು ಮಾತ್ರ ಇರುತ್ತವೆ ಎಂತಲೂ, 1ನೇ ಹಿಸ್ಸೆದಾರನ ಹಿಸ್ಸೆ ಉಡಾಫೆಯಾಗಿದ್ದರಿಂದ ಅಡವಿಯಂತೆ 4 ಹಿಸ್ಸೆಗಳಾಗಿರುತ್ತವೆ ಎಂದು ತಿಳಿಸಿರುತ್ತಾರೆ. ಸದರೀ ದಾಖಲೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಪ್ರಿಲಿಮಿನರಿ ರೀಸರ್ವೆಯಂತೆ ವಾದಿಯ ತಾತನಾದ ಚಿನ್ನಪ್ಪ ಬಿನ್ ದೊಡ್ಡ ಹನುಮಂತರಾಯಪ್ಪರವರು 1ನೇ ಹಿಸ್ಸೆದಾರರಾಗಿರುತ್ತಾರೆ. ಅನುಭವದಂತೆ ಕಾಲಂನನ್ನು ನೋಡಿದಾಗ, ಸದರೀ ಚಿನ್ನಪ್ಪ ಬಿನ್ ದೊಡ್ಡಹನುಮಂತರಾಯಪ್ಪನವರು 4ನೇ ಹಿಸ್ಸೆದಾರರಾಗಿರುತ್ತಾರೆ. ಅಂದರೆ, ಸದರೀ ಚಿನ್ನಪ್ಪ ಬಿನ್ ದೊಡ್ಡ ಹನುಮಂತರಾಯಪ್ಪನವರಿಗೆ

ಸನಂ 61ಃ4 ಕೇವಲ ಅನುಭವದ ಆಧಾರದ ಮೇರೆಗೆ ಬಂದಿರುತ್ತದೆ ಅದಕ್ಕೆ ಯಾವುದೇ ಪ್ರತ್ಯೇಕವಾದ ಪೋಡು ಮಾಡಿರುವುದಿಲ್ಲ ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ.

61. ಮುಂದುವರಿದು ನಿ ಡಿ 15 ಸ ನಂ 62ಕ್ಕೆ ಸಂಬಂಧಿಸಿದ ಹಿಸ್ಸಾ ಟಿಪ್ಪಣಿಯಾಗಿರುತ್ತದೆ. ಸದರೀ ದಾಖಲೆಯು ಈ ಒಂದು ದಾವಾ ವಿಷಯ ವಸ್ತುವಿಗೆ ಯಾವುದೇ ರೀತಿಯಿಂದಲೂ ಸಂಬಂಧಪಟ್ಟಿರುವುದಿಲ್ಲ. ಆದ್ದರಿಂದ ಸದರೀ ದಾಖಲೆಯ ಬಗ್ಗೆ ಹೆಚ್ಚಿನ ವಿವರಣೆ ಅಗತ್ಯವಿರುವುದಿಲ್ಲ. ನಿ ಡಿ 16 ಸ ನಂ 63ಃ5ಕ್ಕೆ ಸಂಬಂಧಿಸಿದ 1988-89ರಿಂದ 1990-91ರ ವರೆಗಿನ ಪಹಣಿ ಪತ್ರಿಕೆಯಾಗಿದ್ದು, ಸದರೀ ದಾಖಲೆಯ ಪ್ರಕಾರ ಸ ನಂ 63ಃ5 ಈ ದಾವೆಯ ಪ್ರತಿವಾದಿಯವರಾದ ಕೆ.ಹೆಚ್.ಸೋಮಶೇಖರ ರೆಡ್ಡಿಯವರು ಖರೀದಿ ಮಾಡಿ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ.

62. ಅದೇ ರೀತಿ ನಿ ಡಿ 17 ಸ ನಂ 63ಃ4ಕ್ಕೆ ಸಂಬಂಧಿಸಿದ ದಾಖಲೆಯಾಗಿದ್ದು, ಸದರೀ ಸ್ವತ್ತೂ ಸಹಾ ಪ್ರತಿವಾದಿಯ ಹೆಸರಿನಲ್ಲಿದ್ದರೂ ಸದರೀ ಸ್ವತ್ತನ್ನು ಪ್ರತಿವಾದಿಯವರು ವಿಭಾಗದ ಮೂಲಕ 1972-73ರಲ್ಲಿ ಪಡೆದುಕೊಂಡಿರುತ್ತಾರೆ ಎಂಬುದು ಕಂಡು ಬರುತ್ತದೆ. ಸದರೀ ದಾಖಲೆಯು ಈ ದಾವಾ ವಿಷಯ ವಸ್ತುವಿಗೆ ಸಂಬಂಧಿಸಿಲ್ಲವಾದ್ದರಿಂದ ಅದರ ಬಗ್ಗೆ ಹೆಚ್ಚಿನ ವಿವರಣೆ ಅಗತ್ಯ ಇರುವುದಿಲ್ಲ.

63. ನಿ ಡಿ 18 ವಾದಿಯ ತಂದೆ ರಾಮಪ್ಪ ಮತ್ತು ಚಿನ್ನಪ್ಪನವರ ದತ್ತು ಮಗ ಲಕ್ಷ್ಮಪ್ಪರವರು ಸ ನಂ 63ಃ5ರಲ್ಲಿ ಒಟ್ಟು 20 ಗುಂಟೆ ಜಮೀನಿಗೆ ಸಂಬಂಧಿಸಿ ಸ್ವತ್ತನ್ನು ಗಂಗಪ್ಪ ಬಿನ್ ಚಿನ್ನಪ್ಪನವರಿಗೆ ದಿಃ9.4.1964ರಂದು ಮಾರಾಟ ಮಾಡಿರುವುದು ಕಂಡು ಬರುತ್ತದೆ. ಸದರೀ ದಾಖಲೆಯು ನಿ ಪಿ 13ರ ದಾಖಲೆಯ ತತ್ಸಮಾನ ದಾಖಲೆಯಾಗಿದ್ದು, ಸದರೀ ನಿ ಪಿ 13ರ ದಾಖಲೆಯ ಬಗ್ಗೆ ಈಗಾಗಲೇ ಮೇಲೆ ವಿವರಣೆ ನೀಡಿರುವುದರಿಂದ ಪುನಃ ಸದರೀ ದಾಖಲೆಯ ಬಗ್ಗೆ ಹೆಚ್ಚಿನ ವಿವರಣೆ ಅಗತ್ಯ ಇರುವುದಿಲ್ಲ.

64. ನಿ ಡಿ 19 ಮತ್ತು ನಿ ಡಿ 20 ಸನಂ 63ಃ5ಕ್ಕೆ ಸಂಬಂಧಿಸಿದ ಐಎಲ್ ಮತ್ತು ಆರ್‌ಆರ್ ಪ್ರತಿಗಳಾಗಿದ್ದು, ಸದರೀ ದಾಖಲೆಗಳ ಪ್ರಕಾರ ಮೂಲತಃ ಸ ನಂ 63ಃ5ರ ಸ್ವತ್ತು

ಚಿನ್ನಪ್ಪ ಬಿನ್ ದೊಡ್ಡ ಹನುಮಂತರಾಯಪ್ಪನವರಿಗೆ ಸೇರಿದ್ದಾಗಿದ್ದು, ತದನಂತರದಲ್ಲಿ ಚಿನ್ನಪ್ಪ ಬಿನ್ ದೊಡ್ಡ ಹನುಮಂತರಾಯಪ್ಪನ ದತ್ತು ಮಗ ಲಕ್ಷ್ಮಣರೆಡ್ಡಿಯವರು ಗಂಗಪ್ಪ ಬಿನ್ ಆದೆಪ್ಪನವರಿಗೆ ನಿ ಡಿ 3ರ ಪ್ರಕಾರ ಬೋಗ್ಯ ಮಾಡಿರುವ ಬಗ್ಗೆ ವಿವರಣೆಯನ್ನು ಮತ್ತು ನಿ ಡಿ 18 ತತ್ಸಮಾನ ದಾಖಲೆಯಾದ ನಿ ಪಿ 13ರ ಪ್ರಕಾರ ಚಿನ್ನಪ್ಪ ಬಿನ್ ಗಂಗಪ್ಪರವರು ಸದರೀ ಸ್ವತ್ತನ್ನು ಚಿನ್ನಪ್ಪನ ಮಕ್ಕಳಾದ ರಾಮಪ್ಪ ಮತ್ತು ಲಕ್ಷ್ಮಣರೆಡ್ಡಿಯವರಿಂದ ಖರೀದಿ ಮಾಡಿದ ಮೇಲೆ ಸದರೀ ಸ್ವತ್ತು ಅವರ ಹೆಸರಿಗೆ ವರ್ಗಾವಣೆ ಆದ ಬಗ್ಗೆ ಮತ್ತು ತದನಂತರದಲ್ಲಿ ಪ್ರಸ್ತುತ ಪ್ರತಿವಾದಿಯು ಸ ನಂ 63಼5ನ್ನು ಚಿನ್ನಪ್ಪ ಬಿನ್ ಗಂಗಪ್ಪನವರಿಂದ ಖರೀದಿ ಮಾಡಿ ನಂತರ ತನ್ನ ಹೆಸರಿಗೆ ಸ್ವತ್ತನ್ನು ವರ್ಗಾವಣೆ ಮಾಡಿಕೊಂಡ ಬಗ್ಗೆ ವಿವರಣೆಯನ್ನು ಸ್ಪಷ್ಟವಾಗಿ ನೋಡಬಹುದಾಗಿದೆ. ತದನಂತರದಲ್ಲಿ ಸದರೀ ಸ್ವತ್ತನ್ನು ಪ್ರಸ್ತುತ ಪ್ರತಿವಾದಿ ಮತ್ತು ಆತನ ಅಣ್ಣತಮ್ಮಂದಿರು ವಿಭಾಗ ಮಾಡಿಕೊಂಡಿರುವುದನ್ನು ಸ್ಪಷ್ಟವಾಗಿ ನಮೂದು ಮಾಡಿರುತ್ತಾರೆ. ಇಲ್ಲಿ ತಿಳಿಸಬೇಕಾದ ಪ್ರಮುಖ ಅಂಶವೆಂದರೆ, ಸದರೀ ಸ ನಂ 63಼5 ಪ್ರತಿವಾದಿಗೆ ಸೇರಿದ್ದು ಎಂಬುದರ ಬಗ್ಗೆ ಯಾವುದೇ ರೀತಿಯ ತಂಟೆ ತಕರಾರುಗಳು ಇರುವುದಿಲ್ಲ, ಆದರೆ ಸದರೀ ಸ್ವತ್ತಿನಲ್ಲಿ ಸ ನಂ 61಼4ರ ಸ್ವತ್ತು ಮಿಲೀನ ವಾಗಿದೆಯೋ ಇಲ್ಲವೋ ಎಂಬ ಬಗ್ಗೆ ತಕರಾರು ಇರುವುದರಿಂದ ಸದರೀ ನಿ ಡಿ 19ರ ಬಗ್ಗೆ ಹೆಚ್ಚಿನ ವಿವರಣೆ ಅಗತ್ಯ ಇರುವುದಿಲ್ಲ.

65. ನಿ ಡಿ 21 ಸ ನಂ 63಼5ಕ್ಕೆ ಸಂಬಂಧಿಸಿದ 2008-09ನೇ ಸಾಲಿನ ಪಹಣಿ ಪತ್ರಿಕೆಯಾಗಿದ್ದು, ಸದರೀ ದಾಖಲೆಯ ಪ್ರಕಾರ ಸದರೀ ಸ್ವತ್ತು ಎಂ ಆರ್ ಸಂ 8಼1997-98ರಂತೆ ವಿಭಾಗದ ಮೂಲಕ ಪ್ರತಿವಾದಿಯ ಹೆಸರಿಗೆ ನಮೂದಾಗಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಸದರೀ ದಾಖಲೆಯನ್ನು ಅತೀ ಸೂಕ್ಷ್ಮವಾಗಿ ಗಮನಿಸಿದಾಗ, ಕಾಲಂ ನಂ 7ರಲ್ಲಿ ಸ ನಂ 63಼5ರಲ್ಲಿ ಮಾವು ಮತ್ತು ತೇಗದ ಗಿಡಗಳಿರುವ ಬಗ್ಗೆ ಸ್ಪಷ್ಟವಾಗಿ ನಮೂದು ಮಾಡಿರುವುದನ್ನು ಕಾಣಬಹುದಾಗಿದೆ. ಈ ಅಂಶದ ವಿಚಾರವಾಗಿ ಪ್ರತಿವಾದಿಯ ಪರ

ವಕೀಲರು ತನ್ನ ಸ್ವತ್ತಿನಲ್ಲಿಯೇ ತಾನು ಮಾವು ಮತ್ತು ತೇಗದ ಗಿಡಗಳನ್ನು ಹಾಕಿದ್ದರಿಂದಲೇ ಪಹಣಿಯಲ್ಲಿ ಆ ಬಗ್ಗೆ ನಮೂದು ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ.

66. ಅದಕ್ಕೆ ಪ್ರತಿಯಾಗಿ ವಾದಿಯ ಪರ ವಕೀಲರು ಸದರೀ ಮಾವು ಮತ್ತು ತೇಗದ ಗಿಡಗಳನ್ನು ವಾದಿಯೇ ತನ್ನ ಸ್ವತ್ತಾದ ಸ ನಂ 61:4ರಲ್ಲಿ ಬೆಳೆಸಿರುತ್ತಾರೆ ಎಂದು ತಿಳಿಸಿರುತ್ತಾರೆ. ಆದರೆ ಇಲ್ಲಿ ನಾವು ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ನಿ ಪಿ 5 ರಿಂದ 9ರ ದಾಖಲೆಗಳು ಸ ನಂ 61:4ಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಗಳಾಗಿದ್ದು, ಸದರೀ ದಾಖ್ಲೆಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಯಾವುದೇ ಪಹಣಿಯಲ್ಲಿ ಸ ನಂ 61:4ರ ಜಮೀನಿನಲ್ಲಿ ಮೇಲೆ ತಿಳಿಸಿದ ಮಾವು ಮತ್ತು ತೇಗದ ಗಿಡಗಳು ಇರುವ ಬಗ್ಗೆ ಎಲ್ಲಿಯೂ ನಮೂದು ಮಾಡಿರುವುದಿಲ್ಲ. ಈ ಅಂಶವನ್ನು ಸೂಕ್ಷ್ಮವಾಗಿ ಪರಿಗಣಿಸಿದಾಗ, ಸದರೀ ಮಾವು ಮತ್ತು ತೇಗದ ಗಿಡಗಳು ಪ್ರತಿವಾದಿಗೆ ಸೇರಿದ ಜಮೀನಿನಲ್ಲಿಯೇ ಇರುತ್ತವೆ ಮತ್ತು ಆವುಗಳನ್ನು ಪ್ರತಿವಾದಿಯೇ ಬೆಳೆಸಿರುತ್ತಾರೆ ಎಂಬ ಅಂಶವು ಸ್ಪಷ್ಟವಾಗಿ ಕಂಡು ಬರುತ್ತದೆ. ಸದರೀ ಮರಗಳನ್ನು ತಾನು ಬೆಳೆಸಿರುತ್ತೇನೆ ಎಂಬ ವಾದಿಯ ವಾದವು ಸುಳ್ಳಿನಿಂದ ಕೂಡಿರುತ್ತದೆ ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ.

67. ನಿ ಡಿ 22 ಸ ನಂ 61:2 ಮತ್ತು ನಿ ಡಿ 23 ಸ ನಂ 61:3ಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಗಳಾಗಿದ್ದು ಸದರೀ ದಾಖಲೆಗಳ ಪ್ರಕಾರ ಸ ನಂ 61:2 ಪ್ರಸ್ತುತ ವಾದಿಯ ಹೆಸರಿನಲ್ಲಿದ್ದು ಸದರೀ ಸ್ವತ್ತನ್ನು ವಾದಿಯು ವಿಭಾಗದ ಮೂಲಕ ಪಡೆದುಕೊಂಡಿರುತ್ತಾರೆ ಎಂದು ಸ್ಪಷ್ಟವಾಗಿ ಕಂಡು ಬರುತ್ತದೆ. ಅದೇ ರೀತಿ ಸ ನಂ 61:3 ಕೆ ಸಿ ಗಂಗರೆಡ್ಡಿಯವರ ಹೆಸರಿನಲ್ಲಿದ್ದು ಅವರು ಸದರೀ ಸ್ವತ್ತನ್ನು ವಿಭಾಗದ ಮೂಲಕ ಪಡೆದುಕೊಂಡಿರುತ್ತಾರೆ ಎಂಬುದು ಕಂಡು ಬರುತ್ತದೆ.

68. ಮುಂದುವರಿದು ನಿ ಡಿ 23ರ ದಾಖಲೆಯನ್ನು ಗಮನಿಸಿದಾಗ, ಸದರೀ ಸ ನಂ 61:3ರ ಜಮೀನನ್ನು ಕೆ.ಎಲ್.ನಂಜಾರೆಡ್ಡಿಯವರು ಎಲೆನಂಜಯ್ಯನವರ ಸೊಸೆಯಾದ ನಂಜಮ್ಮನವರಿಂದ ಖರೀದಿ ಮಾಡಿದ ಮೇಲೆ ಸದರೀ ಸ್ವತ್ತನ್ನು ಸದರೀ

ಕೆ.ಎಲ್.ನಂಜಾರೆಡ್ಡಿಯವರು ಚಿನ್ನಪ್ಪ ಬಿನ್ ದೊಡ್ಡ ಹನುಮಂತರಾಯಪ್ಪನವರ ದತ್ತು ಮಗನಾದ ಲಕ್ಷ್ಮಣರೆಡ್ಡಿಯವರ ಖಾಸಾ ಸಹೋದರನಾದ ಸಂಜೀವರೆಡ್ಡಿಯವರ ಮತ್ತೊಬ್ಬ ಮಗ ಚಿಕ್ಕಪ್ಪಯ್ಯನವರಿಗೆ ನಿ ಡಿ 25ರ ಪ್ರಕಾರ ಸ ನಂ 61ಃ3ರ ಸ್ವತ್ತನ್ನು ಮಾರಾಟ ಮಾಡಿದ್ದು, ಆ ಪ್ರಕಾರ ಸದರೀ ಚಿಕ್ಕಪ್ಪಯ್ಯನವರ ಹೆಸರಿಗೆ ಖಾತೆ ಬದಲಾವಣೆ ಆಗಿದ್ದು, ಸದರೀ ಸ್ವತ್ತು ವಿಭಾಗದ ಮೂಲಕ ಸದರೀ ಚಿಕ್ಕಪ್ಪಯನವರ ಮಗನಾದ ಕೆ.ಸಿ.ಗಂಗರೆಡ್ಡಿಯವರ ಹೆಸರಿಗೆ ಖಾತೆ ಬದಲಾವಣೆ ಆಗಿದ್ದು, ಆ ಪ್ರಕಾರ ಅವರ ಹೆಸರು ನಿ ಡಿ 23ರಲ್ಲಿ ನಮೂದಾಗಿರುವುದು ಕಂಡು ಬರುತ್ತದೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಸದರೀ ಕೆ.ಸಿ.ಗಂಗರಡ್ಡಿಯವರು ಈ ದಾವೆಯಲ್ಲಿ ಪ್ರತಿವಾದಿಯ ದಾವೆಗೆ ಸಹಕಾರಿಯಾಗಿ ಒಂದು ಪ್ರಮಾಣ ಪತ್ರವನ್ನು ನಿ ಡಿ 30ರಂತೆ ಸಲ್ಲಿಸಿದ್ದಲ್ಲದೇ, ಸದರೀ ಪ್ರತಿವಾದಿಯರ ಪರವಾಗಿ ಸಾಕ್ಷ್ಯವನ್ನು ಸಹಾ ನುಡಿದು, ಪ್ರಸ್ತುತ ದಾವಾ ಸ್ವತ್ತು ಪ್ರತಿವಾದಿಯವರಿಗೆ ಸೇರಿರುತ್ತದೆ ಮತ್ತು ಅವರೇ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದು ಸ್ಪಷ್ಟವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

69. ಈ ಹಂತದಲ್ಲಿ ನಿ ಡಿ 25ರ ದಾಖಲಾತಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಸದರೀ ದಾಖಲೆಯಲ್ಲಿಯೂ ಸಹಾ ಸ ನಂ 61ಃ3ರ ಪಶ್ಚಿಮ ಭಾಗದಲ್ಲಿ ಪ್ರಸ್ತುತ ಪ್ರತಿವಾದಿಯವರಾದ ಕೆ.ಹೆಚ್.ಸೋಮಶೇಖರರೆಡ್ಡಿಯವರ ಜಮೀನು ಇರುತ್ತದೆ ಎಂದು ಸ್ಪಷ್ಟವಾಗಿ ನಮೂದು ಮಾಡಿರುವುದು ಕಂಡು ಬರುತ್ತದೆ. ಸದರೀ ದಾಖಲೆಯು ನಿ ಡಿ 11ರ ದಾಖಲೆಗೆ ಸಹಕಾರಿಯಾಗಿರುತ್ತದೆ. ಅಲ್ಲದೇ ಇಲ್ಲಿ ನಾವು ಗಮನಿಸಬೇಕಾದ ಅತೀ ಮುಖ್ಯವಾದ ಅಂಶವೆಂದರೆ, ಒಂದು ವೇಳೆ ಸ ನಂ 61ಃ3ರ ಪಶ್ಚಿಮ ಭಾಗದಲ್ಲಿ ಇರುವ ಸ ನಂ 61ಃ4 ವಾದಿಯವರಿಗೆ ಸೇರಿದ್ದಾಗಿದ್ದರೆ, ಸದರೀ ಸದರೀ ಸ ನಂ 61ಃ3ರ ಪಶ್ಚಿಮ ಭಾಗದಲ್ಲಿ ವಾದಿ ಅಥವಾ ಅವರ ಕುಟುಂಬದವರ ಹೆಸರನ್ನು ನಮೂದು ಮಾಡುತ್ತಿದ್ದರು. ಈ ಅಂಶವನ್ನು ನೋಡಿದಾಗ, ಸ ನಂ 61ಃ3ರ ಪಶ್ಚಿಮ ಭಾಗದಲ್ಲಿ ಇರುವ ಸ ನಂ 61ಃ4 ಪ್ರಸ್ತುತ ಪ್ರತಿವಾದಿಯ ಸ್ವಾಧೀನಾನುಭವದಲ್ಲಿ ಇರುತ್ತದೆ ಎಂಬುದು ಕಂಡು ಬರುತ್ತದೆ.

70. ನಿ ಡಿ 24 ನಿ ಡಿ 3ರ ತತ್ಸಮಾನ ದಾಖಲೆಯಾಗಿದ್ದು ದಿಃ10.10.1949ರಂದು ಚಿನ್ನಪ್ಪನವರ ದತ್ತು ಮಗನಾದ ಲಕ್ಷ್ಮಣರೆಡ್ಡಿಯವರು ಆದೆಪ್ಪ ಮಗನಾದ ಗಂಗಪ್ಪನವರಿಗೆ ಸ ನಂ 63ಃ5ರ ಸ್ವತ್ತನ್ನು ಅಡಮಾನ ಮಾಡಿದ ಬಗ್ಗೆ ನೊಂದಾಯಿತ ಅಡಮಾನ ಪತ್ರವಾಗಿರುತ್ತದೆ. ಸದರೀ ಪತ್ರದ ವಿಚಾರವಾಗಿ ಈಗಾಗಲೇ ನಿ ಡಿ 3ರ ದಾಖಲೆಯ ಬಗ್ಗೆ ಸಾಕಷ್ಟು ವಿವರಣೆಯನ್ನು ನೀಡಲಾಗಿರುತ್ತದೆ. ಮತ್ತೊಮ್ಮೆ ಸದರೀ ದಾಖಲೆಯ ಬಗ್ಗೆ ಹೆಚ್ಚಿನ ವಿವರಣೆ ನೀಡುವುದು ಅವಶ್ಯಕವಾಗಿರುವುದಿಲ್ಲ.

71. ನಿ ಡಿ 26 ದಿಃ17.2.2009ರಂದು ಈ ದಾವೆಯ ಪ್ರತಿವಾದಿಯವರು ವಾದಿಯ ಮೇಲೆ ದಾವಾ ಸ್ವತ್ತಿನ ವಿಚಾರವಾಗಿ ವಾದಿಯು ತನ್ನ ಸ್ವಾಧೀನಕ್ಕೆ ಅಡ್ಡಿ ಪಡಿಸಿರುತ್ತಾರೆಂದು ನೀಡಿದ ಪೋಲೀಸ್ ದೂರಿನ ಪ್ರತಿಯಾಗಿರುತ್ತದೆ. ಸದರೀ ದಾಖಲೆಯ ಕುರಿತು ಪ್ರತಿವಾದಿಯವರು ತಮ್ಮ ವಾದ ಮಂಡನೆಯ ಸಮಯದಲ್ಲಿ ವಾದಿಯು ತನ್ನ ಸ್ವಾಧೀನಾನುಭವದಲ್ಲಿ ಇರುವ ಸ ನಂ 63ಃ4 ಮತ್ತು ಸ ನಂ 63ಃ5ರ ಸ್ವತ್ತಿಗೆ ಸಂಬಂಧಿಸಿ ತಮ್ಮ ಕೆಲಸಗಾರರು ಕೆಲಸ ಮಾಡುತ್ತಿರುವಾಗ, ವಾದಿಯು ಬಂದು ತಮ್ಮ ಕೆಲಸಕಾರ್ಯಗಳಿಗೆ ಅಡ್ಡಿ ಪಡಿಸಿದ ಮೇರೆಗೆ ತಾನು ನಿ ಡಿ 26ರಂತೆ ದೂರನ್ನು ಪೋಲೀಸರಿಗೆ ನೀಡಿರುತ್ತೇವೆ ಎಂತಲೂ ನುಡಿದಿರುತ್ತಾರೆ. ಸದರೀ ಅಂಶದ ಕುರಿತು ವಾದಿಯನ್ನು ಪಾಟೀ ಸವಾಲಿಗೆ ಗುರಿಪಡಿಸಿದಾಗ, ಸದರೀ ನಿ ಡಿ 26ರಂತೆ ಪಿರ್ಯಾದನ್ನು ನೀಡಿದ್ದರು ಎಂಬ ಅಂಶವನ್ನು ತನ್ನ ಪಾಟೀ ಸವಾಲಿನ 14ನೇ ಪುಟದ ಮದ್ಯಭಾಗದಲ್ಲಿ ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ. ಅದಕ್ಕೆ ಪ್ರತಿಯಾಗಿ ತಾನೂ ಸಹಾ ದೂರನ್ನು ನೀಡಿದ್ದೆ ಎಂದು ತಿಳಿಸಿರುತ್ತಾರೆ. ಆದರೆ ಆ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

72. ಮುಂದುವರಿದು, ಅದೇ 14ನೇ ಪುಟದ ಮೊದಲನೇ ಭಾಗದಲ್ಲಿ ಸಾಕ್ಷಿಯು ಸ್ವತಃ ಒಪ್ಪಿಕೊಳ್ಳುವಂತೆ ಸನಂ 61, 61ಃ4, 62 ಎಲ್ಲಾ ಜಮೀನುಗಳಿಗೆ ಪ್ರತಿವಾದಿಯು ಮುಳ್ಳು ತಂತಿಯನ್ನು ಹಾಕಿರುತ್ತಾರೆ ಎಂಬ ಅಂಶವನ್ನು ಒಪ್ಪಿಕೊಂಡಿದ್ದು, ಸದರೀ ಮುಳ್ಳು ತಂತಿಯನ್ನು

ಪ್ರತಿವಾದಿಯವರೇ ಒತ್ತಾಯ ಪೂರ್ವಕವಾಗಿ 2009ನೇ ಇಸವಿಯಲ್ಲಿ ಹಾಕಿರುತ್ತಾರೆ ಎಂದು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ. ಈ ಅಂಶವನ್ನು ನೋಡಿದಾಗ, ಸದರೀ ಸ್ವತ್ತಿನಲ್ಲಿ ಪ್ರತಿವಾದಿಯೇ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂಬುದು ಬಹಳ ಸ್ಪಷ್ಟವಾಗಿ ಕಂಡು ಬರುತ್ತದೆ. ಅಲ್ಲದೇ, ಸದರೀ ಪುಟದ 5ನೇ ಸಾಲನ್ನು ನೋಡಿದಾಗ, ಸ ನಂ 63಼4, 63಼5 ಮತ್ತು 63಼3ರಲ್ಲಿ ಗೇಟಿನ ಮೂಲಕವೇ ತನ್ನ ಜಮೀನಿಗೆ ಹೋಗಬೇಕು ಎಂಬ ಅಂಶವನ್ನು ಒಪ್ಪಿಕೊಂಡಿದ್ದು, ಮೇಲೆ ತಿಳಿಸಿದ ಬೇಲಿಯನ್ನು ಹಾಕಬೇಕಾದರೆ, ತಾನು ಕೂಲಿಯವರನ್ನು ಬೆದರಿಸಿರುತ್ತೇನೆ ಎಂಬ ಅಂಶವನ್ನೂ ಸಹಾ ಸಾಕ್ಷಿಯು ಬಹಳ ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ.

73. ಈ ಅಂಶವನ್ನು ನೋಡಿದಾಗ, ವಾದಿಯು ಪ್ರತಿವಾದಿಯರ ಸ್ವಾಧೀನಾನುಭವಕ್ಕೆ ಧಕ್ಕೆ ಪಡಿಸಿರುತ್ತಾರೆ ಎಂಬ ಅಂಶವು ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಆ ಕಾರಣದಿಂದಲೇ ಪ್ರತಿವಾದಿಯವರು ನಿ ಡಿ 26ರಂತೆ ವಾದಿಯ ಮೇಲೆ ಪಿರ್ಯಾದನ್ನು ನೀಡಿದ್ದರು ಎಂಬುದೂ ಸಹಾ ಸ್ಪಷ್ಟವಾಗುತ್ತದೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಒಂದು ವೇಳೆ ಪ್ರತಿವಾದಿಯು ತನ್ನ ಸ್ವಾಧೀನಾನುಭವಕ್ಕೆ ಧಕ್ಕೆ ಪಡಿಸಿದ್ದೇ ಆಗಿದ್ದಲ್ಲಿ, ಆ ಕುರಿತು ವಾದಿಯು ಪ್ರತಿವಾದಿಯವರ ವಿರುದ್ಧ ಪಿರ್ಯಾದನ್ನು ನೀಡಬಹುದಾಗಿತ್ತು, ಆದಕ್ಕೆ ಆ ಯಾವುದೇ ಕ್ರಮಗಳನ್ನು ವಾದಿಯು ಕೈಗೊಂಡಿರುವುದಿಲ್ಲ.

74. ಸದರೀ ಅಂಶವನ್ನು ನೋಡಿದಾಗ, ವಾದಿಗೆ ಸದರೀ ಸ್ವತ್ತಿನ ಕುರಿತು ಯಾವುದೇ ರೀತಿಯ ಹಕ್ಕು, ಅಧಿಕಾರ, ಸ್ವಾಧೀನ ಮತ್ತು ಹಿತಾಸಕ್ತಿ ಇಲ್ಲದೇ ಇದ್ದರಿಂದ ತಾನು ಯಾವುದೇ ಪಿರ್ಯಾದನ್ನು ನೀಡಿರುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಸದರೀ ನಿ ಡಿ 26ರ ಕುರಿತು ವಾದಿಯ ಪರ ವಕೀಲರು ಸದರೀ ಪಿರ್ಯಾದು ಪ್ರಸ್ತುತ ದಾವಾ ಸ್ವತ್ತಿಗೆ ಸಂಬಂಧಿಸಿದ ಪಿರ್ಯಾದಾಗಿರುವುದಿಲ್ಲ ಎಂದು ನುಡಿದಿರುತ್ತಾರೆ. ಆದರೆ ಸದರೀ ದಾಖಲೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಪ್ರಸ್ತುತ ದಾವೆಗಳ ವಿಷಯ ವಸ್ತುವಾದ ಸ ನಂ 63಼5 ಮತ್ತು 61಼4ಕ್ಕೆ ಸಂಬಂಧಿಸಿದ ಪಿರ್ಯಾದಾಗಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಆದ್ದರಿಂದ ವಾದಿಯ ವಾದವನ್ನು ನಂಬುವುದು ಸಮಂಜಸವಾಗಿರುವುದಿಲ್ಲ.

75. ನಿ ಡಿ 27 ಸ ನಂ 62:4ಕ್ಕೆ ಸಂಬಂಧಿಸಿ ಆಂಜಿನಪ್ಪ ಮತ್ತು ಆತನ ಮಕ್ಕಳಾದ ವೆಂಕಟರವಣಪ್ಪ ಮತ್ತು ಅಶ್ವತ್ಥನಾರಾಯಣರವರು ಕೆ.ಹೆಚ್.ಕೃಷ್ಣಾರೆಡ್ಡಿಯವರಿಗೆ ದಿ:10.5.2002 ರಂದು ಬರೆದುಕೊಟ್ಟ ಕ್ರಯ ಪತ್ರವಾಗಿರುತ್ತದೆ. ಸದರೀ ದಾಖಲೆಯ ಪ್ರಕಾರ ಸದರೀ ಆಂಜಿನಪ್ಪನವರು ಸ ನಂ 62:4ರಲ್ಲಿ 1 ಎಕರೆ 0.27 ಗುಂಟೆ ಜಮೀನನ್ನು ಸದರೀ ಕೆ.ಹೆಚ್.ಕೃಷ್ಣಾರೆಡ್ಡಿಯವರಿಗೆ ಮಾರಾಟ ಮಾಡಿರುತ್ತಾರೆ. ಸದರೀ ದಾಖಲೆಯಲ್ಲಿ ಬರೆದ ಸ್ವತ್ತಿನ ಚಕ್ಕುಬಂದಿಯನ್ನು ಗಮನಿಸಿದಾಗ, ಪೂರ್ವಕ್ಕೆ- ಕೆ.ಹೆಚ್.ಗಂಗಾರೆಡ್ಡಿ ಯವರ ಜಮೀನು, ಪಶ್ಚಿಮಕ್ಕೆ ಪ್ರತಿವಾದಿಯವರಾದ ಕೆ.ಹೆಚ್.ಸೋಮಶೇಖರರೆಡ್ಡಿಯವರ ಜಮೀನು, ಉತ್ತರಕ್ಕೆ ಇದೇ ನಂಬರ್ ಪೈಕಿ ಕೆ.ವಿ.ಹನುಮಂತರೆಡ್ಡಿಯವರ ಜಮೀನು, ದಕ್ಷಿಣಕ್ಕೆ ಕೆ.ಸಿ.ಗಂಗಾರೆಡ್ಡಿಯವರ ಜಮೀನು ಎಂದು ನಮೂದು ಮಾಡಿರುತ್ತಾರೆ. ಸದರೀ ದಾಖಲೆಯ ಕುರಿತು ಪ್ರತಿವಾದಿಯವರು ತಮ್ಮ ವಾದ ಮಂಡನೆಯ ಸಮಯದಲ್ಲಿ ಪಶ್ಚಿಮ ಭಾಗದಲ್ಲಿರುವ ತನ್ನ ಸ್ವತ್ತು ಎಂದರೆ ಸ ನಂ 63:4 ಆಗಿರುತ್ತದೆ ಎಂತಲೂ ಮತ್ತು ದಕ್ಷಿಣ ಭಾಗದಲ್ಲಿರುವ ಕೆ ಸಿ ಗಂಗಾರೆಡ್ಡಿಯವರ ಜಮೀನು ಎಂದರೆ ಸ ನಂ 61:3 ಆಗಿರುತ್ತದೆ ಎಂತಲೂ ನುಡಿದಿರುತ್ತಾರೆ. ಆದರೆ ಇಲ್ಲಿ ನಾವು ಗಮನಿಸಬೇಕಾದ ಅತೀ ಪ್ರಮುಖ ಅಂಶವೆಂದರೆ, ಸನಂ 63:4 ಆಗಲೀ ಅಥವಾ ಸ ನಂ 61:3ರಾಗಲೀ ಈ ದಾವೆಯ ವಿಷಯ ವಸ್ತು ಆಗಿರುವುದಿಲ್ಲ. ಆದ್ದರಿಂದ ಸದರೀ ದಾಖಲೆಯ ಬಗ್ಗೆ ಹೆಚ್ಚಿನ ವಿವರಣೆ ಅವಶ್ಯಕತೆ ಇರುವುದಿಲ್ಲ.

76. ಮುಂದುವರಿದು ನಿ ಡಿ 28 ಸದರೀ ಕೆ.ಹೆಚ್.ಕೃಷ್ಣಾರೆಡ್ಡಿಯವರು ನಿ ಡಿ 27ರಂತೆ ಸ ನಂ 62:4ನ್ನು ಖರೀದಿ ಮಾಡಿದ ಮೇಲೆ ಸದರೀ ಸ್ವತ್ತನ್ನು ನಿ ಡಿ 28ರಂತೆ ಐಸಿಐಸಿಐ ಬ್ಯಾಂಕಿಗೆ ಅಡಮಾನ ಮಾಡಿದ್ದರು ಎಂದು ತಿಳಿಸಿರುತ್ತಾರೆ. ಸದರೀ ದಾಖಲೆಯಲ್ಲಿ ಸ ನಂ 62:4ರ ಚಕ್ಕು ಬಂದಿಯನ್ನು ಗಮನಿಸಿದಾಗ, ಪೂರ್ವಕ್ಕೆ ರಸ್ತೆ ಪಶ್ಚಿಮಕ್ಕೆ ಮತ್ತು ಉತ್ತರಕ್ಕೆ ಈ ದಾವೆಯ ಪ್ರತಿವಾದಿಯಾದ ಕೆ.ಹೆಚ್.ಸೋಮಶೇಖರರೆಡ್ಡಿಯವರ ಸ್ವತ್ತು ದಕ್ಷಿಣಕ್ಕೆ ಗಂಗಿರೆಡ್ಡಿಯವರ ಜಮೀನು ಎಂದು ನಮೂದು ಮಾಡಿರುತ್ತಾರೆ. ಸದರೀ ದಾಖೀಯ ಚಕ್ಕು ಬಂದಿಯನ್ನು ಬೇರೆ ದಾಖಲೆಗಳೊಂದಿಗೆ ಹೋಲಿಸಿ ನೋಡಿದಾಗ, ಸದರೀ ಚಕ್ಕು ಬಂದಿಯು

ಪ್ರಸ್ತುತ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಕಂಡು ಬರುವುದಿಲ್ಲ. ಕಾರಣ, ಸದರೀ ಪಶ್ಚಿಮ ಮತ್ತು ಉತ್ತರದಲ್ಲಿರುವ ಪ್ರತಿವಾದಿಯರ ಸ್ವತ್ತು ಎಂದರೆ ನಕಾಶೆಯ ಪ್ರಕಾರ ಪಶ್ಚಿಮದಲ್ಲಿ ಸ ನಂ 63ಃ4 ಇರುತ್ತದೆ ಎಂತಲೂ ಕಂಡು ಬಂದಿದ್ದು, ಆದರೆ ಉತ್ತರ ಭಾಗದಲ್ಲಿರುವ ಪ್ರತಿವಾದಿಯ ಸ್ವತ್ತು ಯಾವುದು ಎಂಬ ಬಗ್ಗೆ ಎಲ್ಲಿಯೂ ನಮೂದು ಇರುವುದಿಲ್ಲ. ಆದರೆ, ದಕ್ಷಿಣ ಭಾಗದಲ್ಲಿರುವ ಗಂಗಿರೆಡ್ಡಿಯವರ ಜಮೀನು ಎಂದರೆ ಸ ನಂ 61ಃ3 ಎಂಬುದಾಗಿ ಅರ್ಥೈಸಿಕೊಳ್ಳಬಹುದಾಗಿದೆ. ಅದರೆ, ಸದರೀ ದಾಖಲೆಯಲ್ಲಿ ಸ ನಂ 61ಃ4ರ ವಿಚಾರವಾಗಲೀ, ಸ ನಂ 63ಃ5ರ ವಿಚಾರವಾಗಲೀ ಎಲ್ಲಿಯೂ ನಮೂದು ಮಾಡಿರುವುದಿಲ್ಲ. ಆದ್ದರಿಂದ ಸದರೀ ದಾಖಲೆಯ ಬಗ್ಗೆ ಎಲ್ಲಿಯೂ ನಮೂದು ಇರುವುದಿಲ್ಲ, ಆದ್ದರಿಂದ ಸದರೀ ದಾಖಲೆಯ ಬಗ್ಗೆ ಹೆಚ್ಚಿನ ವಿವರಣೆ ಅಗತ್ಯ ಇರುವುದಿಲ್ಲ.

77. ನಿ ಡಿ 29 ರಿಂದ ನಿ ಡಿ 33 ಅಪ್ಪಿರೆಡ್ಡಿ, ಗಂಗರೆಡ್ಡಿ, ಆಂಜಿನಪ್ಪ, ಖಾನ್ ಸಾಬಿ ಮತ್ತು ಅಜೀಜ್ ರವರು ತಾವುಗಳು ದಾವಾ ಸ್ವತ್ತಿನ ಬಾಜುದಾರರಾಗಿದ್ದು, ದಾವಾ ಸ್ವತ್ತಿನಲ್ಲಿ ಪ್ರತಿವಾದಿಯವರೇ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದು ನುಡಿದು, ಅ ಕುರಿತು ತಾವು ನ್ಯಾಯಾಲಯಕ್ಕೆ ಸಲ್ಲಿಸಿದ ಪ್ರಮಾಣ ಪತ್ರದ ದೃಡೀಕೃತ ನಕಲಾಗಿರುತ್ತದೆ. ಮುಂದುವರಿದು, ಸದರೀ ಸ್ವತ್ತಿಗೂ ವಾದಿಯ ಸ್ವತ್ತಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂತಲೂ, ದಾವಾ ಸ್ವತ್ತಿನಲ್ಲಿ ಪ್ರತಿವಾದಿಯವರೇ ಮಾವಿನ ಗಿಡಗಳನ್ನು ನೆಟ್ಟಿರುತ್ತಾರೆ ಎಂದು ತಮ್ಮ ಪ್ರಮಾಣ ಪತ್ರಗಳಲ್ಲಿ ತಿಳಿಸಿರುತ್ತಾರೆ. ಆದರೆ, ಸದರೀ ಪ್ರಮಾಣ ಪತ್ರಗಳನ್ನು ಇತರೆ ಮೂಲ ದಾಖಲೆಗಳೊಂದಿಗೆ ಹೋಲಿಕೆ ಮಾಡಿ ನೋಡಲು ಸಹಾಯಕಾರಿಯಾಗಿರುತ್ತದೆಯೇ ಹೊರತು, ಸದರೀ ಪ್ರಮಾಣ ಪತ್ರಗಳ ಆಧಾರದ ಮೇಲೆಯೇ ದಾವೆಯನ್ನು ನಿರ್ಧರಿಸಲು ಆಗುವುದಿಲ್ಲ. ಆದರೆ, ಇಲ್ಲಿ ತಿಳಿಸಬೇಕಾದ ಪ್ರಮುಖ ಅಂಶವೆಂದರೆ, ಸದರೀ ಪ್ರಮಾಣ ಪತ್ರದ ಅಂಶಗಳಿಗೂ ಮತ್ತು ಪ್ರತಿವಾದಿಯ ಪ್ರತಿವಾದಕ್ಕೂ ಸಾಕಷ್ಟು ಹೊಂದಾಣಿಕೆ ಕಂಡು ಬಂದಿರುತ್ತದೆ.

78. ನಿ ಡಿ 34 ಅ ದಾ ಸಂ 78ಃ2003ರಲ್ಲಿ ವಾದಿಯು ಸಲ್ಲಿಸಿದ ಕ್ರಮಾದೇಶ 39 ನಿಯಮ 1, 2 ಮತ್ತು 7 ಮತ್ತು ಸಹವಾಚಕ ಕಲಂ 151ರಲ್ಲಿ ಸಲ್ಲಿಸಿದ ಅರ್ಜಿಯ ಮೇಲೆ ಹೊರಡಿಸಿದ ಆದೇಶದ ದೃಡೀಕೃತ ನಕಲಾಗಿದ್ದು, ಸದರೀ ಅದೇಶದ ಪ್ರಕಾರ ವಾದಿಯು ಪ್ರತಿವಾದಿಯ ಮೇಲೆ ತಾತ್ಕಾಲಿಕ ನಿರ್ಭಂದಕಾಜ್ಞೆಯನ್ನು ಕೋರಿದ್ದು, ಸದರೀ ಅರ್ಜಿಯನ್ನು ನ್ಯಾಯಾಲಯವು ವಜಾ ಗೊಳಿಸಿರುವುದು ಕಂಡು ಬರುತ್ತದೆ. ಆದರೆ, ಸದರೀ ಅರ್ಜಿಯನ್ನು ವಜಾ ಗೊಳಿಸಿದ್ದಾರೆ ಎಂದ ಮಾತ್ರಕ್ಕೆ, ಪ್ರತಿವಾದಿಯು ತನ್ನ ದಾವೆಯನ್ನು ರುಜುವಾತು ಪಡಿಸಿರುತ್ತಾರೆಂದು ಹೇಳಲಾಗುವುದಿಲ್ಲ. ಆದ್ದರಿಂದ ಸದರೀ ದಾಖಲೆಯ ಬಗ್ಗೆ ಹೆಚ್ಚಿನ ವಿವರಣೆ ಅಗತ್ಯವಿರುವುದಿಲ್ಲ.

79. ನಿ ಡಿ 40 – ತಾತಣ್ಣನವರ ದೊಡ್ಡಗಂಗಪ್ಪನವರ ಚಿನ್ನಪ್ಪನವರು ಸ ನಂ 63ಃ5ರ ಸ್ವತ್ತನ್ನು ಪ್ರಸ್ತುತ ಪ್ರತಿವಾದಿಯ ಹೆಸರಿಗೆ ಮಾರಾಟ ಮಾಡಿದ ಬಗ್ಗೆ ನೊಂದಾಯಿತ ಕ್ರಯ ಪತ್ರದ ಮೂಲ ಪ್ರತಿಯಾಗಿದ್ದು, ನಿ ಡಿ 35 ಸದರೀ ಕ್ರಯ ಪತ್ರದ ದೃಡೀಕೃತ ನಕಲಾಗಿರುತ್ತದೆ. ಸದರೀ ದಾಖಲೆಗಳ ವಿವರಣೆಗೆ ಬಂದಾಗ ಪ್ರತಿವಾದಿಯ ಪರ ವಕೀಲರು ತಮ್ಮ ವಾದ ಮಂಡನೆಯ ಸಮಯದಲ್ಲಿ ಗಂಗಪ್ಪನ ಮಗ ಚಿನ್ನಪ್ಪ ಸ ನಂ 63ಃ5ರ ಸ್ವತ್ತನ್ನು ವಾದಿಯ ತಾತ ಚಿನ್ನಪ್ಪನ ಮಕ್ಕಳಾದ ರಾಮಪ್ಪ ಮತ್ತು ಲಕ್ಷ್ಮಣರೆಡ್ಡಿಯವರಿಂದ ನಿ ಡಿ 18ರ ಕ್ರಯ ಪತ್ರದ ಮೂಲಕ ಖರೀದಿ ಮಾಡಿದ ಮೇಲೆ ಸದರೀ ಸ್ವತ್ತನ್ನು ನಿ ಡಿ 40 ತತ್ಸಮಾನ ದಾಖಲೆಯಾದ ನಿ ಡಿ 35ರ ಪ್ರಕಾರ ಸದರೀ ಗಂಗಪ್ಪನವರ ಮಗ ಚಿನ್ನಪ್ಪನವರು ಸ ನಂ 63ಃ5ನ್ನು ಪ್ರಸ್ತುತ ಪ್ರತಿವಾದಿಯವರಿಗೆ ಮಾರಾಟ ಮಾಡಿರುವುದು ಕಂಡು ಬರುತ್ತದೆ.

80. ಸದರೀ ದಾಖಲೆಯ ಚಕ್ಕು ಬಂದಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಸ ನಂ 63ಃ5ರ ಸ್ವತ್ತಿನ ಪೂರ್ವದಲ್ಲಿ ಕೆ.ಎನ್.ನಂಜಾರೆಡ್ಡಿಯವರ ಜಮೀನು ಎಂದು ಬರೆದಿರುತ್ತಾರೆ. ಸದರೀ ಕೆ ಎನ್ ನಂಜಾರೆಡ್ಡಿಯವರ ಜಮೀನು ಎಂದರೆ, ಎಲೆನಂಜಯ್ಯನವರ ಸೊಸೆಯಾದ ನಂಜಮ್ಮನವರು ಪ್ರಸ್ತುತ ಕೆ ಎನ್ ನಂಜಾರೆಡ್ಡಿಯವರಿಗೆ ನಿ ಡಿ 11ರ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ ಸ್ವತ್ತಾದ ಸ ನಂ 61ಃ3 ಆಗಿರುತ್ತದೆ. ಕಾರಣ, ಸದರೀ ನಿ ಡಿ

11ರ ಕ್ರಯ ಪತ್ರದಲ್ಲಿ ಪಶ್ಚಿಮ ಭಾಗದಲ್ಲಿ ಇರುವ ಸ್ವತ್ತು ಪ್ರಸ್ತುತ ಪ್ರತಿವಾದಿಯವರಿಗೆ ಸೇರಿದ ಸ್ವತ್ತಾಗಿರುತ್ತದೆ ಎಂದು ನಮೂದು ಮಾಡಿದ್ದು ಈ ಒಂದು ನಿ ಡಿ 40ರ ಕ್ರಯ ಪತ್ರದ ಪೂರ್ವಕ್ಕೆ ಸದರೀ ಕೆ.ಎನ್.ನಂಜಾರೆಡ್ಡಿಯವರಿಗೆ ಸೇರಿದ ಜಮೀನು ಎಂದು ನಮೂದು ಮಾಡಿದ್ದು, ಎರಡು ದಾಖಲೆಗಳ ನಡುವೆ ಬಹಳಷ್ಟು ಹೊಂದಾಣಿಕೆ ಕಂಡು ಬರುತ್ತದೆ. ಒಂದು ವೇಳೆ ಸದರೀ ಸ ನಂ 61ಃ3 ಮತ್ತು 63ಃ5ರ ನಡುವೆ ವಾದಿಯವರಿಗೆ ಸೇರಿದ ಸ ನಂ 61ಃ4 ಪ್ರತ್ಯೇಕವಾಗಿ ಇದ್ದದ್ದೇ ಆಗಿದ್ದರೆ, ಸದರೀ ನಿ ಡಿ 40ರ ದಾಖಲೆಯ ಪ್ರಕಾರ ಸ ನಂ 63ಃ5ರ ಪೂರ್ವದಲ್ಲಿ ಮತ್ತು ನಿ ಡಿ 11ರ ದಾಖಲೆಯ ಪ್ರಕಾರ ಸ ನಂ 61ಃ3ರ ಪಶ್ಚಿಮದಲ್ಲಿ ವಾದಿಯವರಿಗೆ ಅಥವಾ ಅವರ ಕುಟುಂಬದವರಿಗೆ ಸೇರಿದ ಜಮೀನು ಎಂದು ನಮೂದು ಮಾಡುತ್ತಿದ್ದರು. ಆದರೆ ನಿ ಡಿ 40ರ ದಾಖಲೆಯ ಪ್ರಕಾರ ಸ ನಂ 63ಃ5ರ ಜಮೀನಿನ ಪೂರ್ವದಲ್ಲಿ ಕೆ.ಎನ್.ನಂಜಾರೆಡ್ಡಿ ಎಂದು ಮತ್ತು ನಿ ಡಿ 11ರ ದಾಖಲೆಯ ಪ್ರಕಾರ ಸ ನಂ 61ಃ4ರ ಪಶ್ಚಿಮದಲ್ಲಿ ಕೆ.ಹೆಚ್.ಸೋಮಶೇಖರ ರೆಡ್ಡಿ ಎಂದು ಬರೆದಿರುವುದು ಆ ಎರಡೂ ದಾಖಲೆಗಳಲ್ಲಿರುವ ಸಾಮ್ಯತೆಯನ್ನು ಎತ್ತಿ ತೋರಿಸುತ್ತದಲ್ಲದೆ, ಪ್ರತಿವಾದಿಯ ವಾದಕ್ಕೆ ಸಹಕಾರಿಯಾಗಿರುತ್ತದೆ.

81. ಮುಂದುವರಿದು ನಿ ಡಿ 40ರ ದಾಖಲೆಯ ಪ್ರಕಾರ ಸ ನಂ 63ಃ5ರ ಉತ್ತರ ಭಾಗಕ್ಕೆ ಕೆ.ಎನ್.ನಂಜಾರಡ್ಡಿ ಮತ್ತು ನಿಮ್ಮ ಜಮೀನು ಎಂದು ಬರೆದಿದ್ದು, ಅದಕ್ಕೆ ಪ್ರತಿಯಾಗಿ ಪ್ರತಿವಾದಿಯು ತಮ್ಮ ವಾದ ಮಂಡನೆಯ ಸಮಯದಲ್ಲಿ ತಮಗೆ ಸೇರಿದ ಸ ನಂ 63ಃ4ರ ಜಮೀನು ಇರುತ್ತದೆ ಎಂದು ತಿಳಿಸಿರುತ್ತಾರೆ. ಅ ಬಗ್ಗೆ ವಾದಿಯು ಎಲ್ಲಿಯೂ ತನ್ನ ತಕರಾರನ್ನು ಸಲ್ಲಿಸಿರುವುದಿಲ್ಲ. ಮುಂದುವರಿದು ನಿ ಡಿ 40ರ ದಾಖಲೆಯ ಪ್ರಕಾರ ಸ ನಂ 63ಃ5ರ ಪಶ್ಚಿಮಕ್ಕೆ ಓಣಿ ಎಂದು ನಮೂದು ಮಾಡಿದ್ದು, ಸದರೀ ವಿಚಾರವಾಗಿಯೂ ಸಹಾ ವಾದಿಯು ಎಲ್ಲಿಯೂ ಸಹಾ ತಮ್ಮ ತಕರಾರನ್ನು ಸಲ್ಲಿಸಿರುವುದಿಲ್ಲ. ಅದೇ ರೀತಿ ದಕ್ಷಿಣ ಭಾಗಕ್ಕೆ ಕುರುಬರಹಳ್ಳಿ ಗಡಿ ಎಂದು ತೋರಿಸಿದ್ದು, ಸದರೀ ಅಂಶವನ್ನು ವಾದಿಯೇ ತಮ್ಮ ಪಾಟೀ ಸವಾಲಿನಲ್ಲಿ ಸ್ವತಃ ಒಪ್ಪಿಕೊಂಡಿರುತ್ತಾರೆ. ಒಟ್ಟಿಗೆ ನಾವು ತಿಳಿಸಬೇಕಾದ ಪ್ರಮುಖ

ಅಂಶವೆಂದರೆ, ಸದರೀ ಸ ನಂ 63:5ರ ಸ್ವತ್ತಿನ ಪೂರ್ವದ ಭಾಗದ ಸ್ವತ್ತನ್ನು ಹೊರತುಪಡಿಸಿ, ಉಳಿದ ಯಾವುದೇ ಭಾಗದ ಚಕ್ಕು ಬಂದಿಯ ಬಗ್ಗೆ ವಾದಿಯು ತಮ್ಮ ತಕರಾರನ್ನು ತಿಳಿಸಿರುವುದಿಲ್ಲ. ವಾದಿಯ ವಾದದ ಪ್ರಕಾರ ಸ ನಂ 63:5ರ ಪೂರ್ವದಲ್ಲಿ ತನಗೆ ಸೇರಿದ ಸ ನಂ 61:4ರ ಸ್ವತ್ತು ಇದ್ದರೂ ಸಹಾ, ನಿ ಡಿ 40ರ ಕ್ರಯ ಪತ್ರದಲ್ಲಿ ವಾದಿಯ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸ ನಂ 61:3 ಎಂದು ತಪ್ಪಾಗಿ ನಮೂದು ಮಾಡಿ ಪ್ರತಿವಾದಿಯು ಈ ಒಂದು ಸುಳ್ಳು ತಕರಾರನ್ನು ಸಲ್ಲಿಸಿರುತ್ತಾರೆ ಎಂದು ವಾದಿಸಿರುತ್ತಾರೆ.

82. ಇಲ್ಲಿ ನಾವು ಗಮನಿಸಬೇಕಾದ ಅತೀ ಪ್ರಮುಖ ಅಂಶವೆಂದರೆ, ಒಂದು ವೇಳೆ ಸ ನಂ 63:5ರ ಪೂರ್ವದಲ್ಲಿ ವಾದಿಗೆ ಸೇರಿದ ಸ ನಂ 61:4ರ ಸ್ವತ್ತೇ ಇದ್ದುದ್ದೇ ಆಗಿದ್ದಲ್ಲಿ, ಸದರೀ ವಾದಿಯ ತಂದೆಯ ದತ್ತು ಮಗನಾದ ಲಕ್ಷ್ಮಣರೆಡ್ಡಿಯವರು ನಿ ಡಿ 3ರಂತೆ ನೊಂದಾಯಿತ ಅಡಮಾನ ಪತ್ರವನ್ನು ಸ ನಂ 63:5ಕ್ಕೆ ಸಂಬಂಧಿಸಿ ಅದೆಪ್ಪ ಬಿನ್ ಗಂಗಪ್ಪನವರಿಗೆ 1949ನೇ ಇಸವಿಯಲ್ಲಿಯೇ ಮಾಡಿಕೊಟ್ಟಿದ್ದು ಸದರೀ ದಾಖಲೆಯಲ್ಲಿಯೂ ಸಹಾ ಸ ನಂ 63:5ರ ಪೂರ್ವದಲ್ಲಿ ಎಲೆನಂಜಯ್ಯನವರ ಜಮೀನು ಎಂದು ಯಾವ ಕಾರಣದಿಂದ ಮಾಡಿರುತ್ತಾರೆ ಎಂಬ ಬಗ್ಗೆ ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ. ಅಂದರೆ ಆ ಸಮಯದಲ್ಲಿ ಸದರೀ ಎಲೆನಂಜಯ್ಯನವರಿಗೆ ಸೇರಿದ ಸ ನಂ 61:3ರ ಜಮೀನು ಸ ನಂ 63:5ರ ಪೂರ್ವದಲ್ಲಿ ಇತ್ತು ಎಂಬುದು ಕಂಡು ಬರುತ್ತದೆ.

83. ಒಂದು ವೇಳೆ ಸದರೀ ಸ ನಂ 63:5ರ ಪೂರ್ವದಲ್ಲಿ ತಮಗೆ ಸೇರಿದ ಸ್ವತ್ತೇ ಇದ್ದುದ್ದೇ ಆಗಿದ್ದಲ್ಲಿ, ನಿ ಡಿ 3ರ ಅಡಮಾನ ಪತ್ರವನ್ನು ಮಾಡಿದ ದಿನವೇ ಸದರೀ ಲಕ್ಷ್ಮಣರೆಡ್ಡಿಯವರು ಸ ನಂ 63:5ರ ಪೂರ್ವದಲ್ಲಿ ತಮಗೆ ಸೇರಿದ ಸ್ವತ್ತು ಇರುತ್ತದೆ ಎಂದು ತಿಳಿಸುತ್ತಿದ್ದರು. ಆದ್ದರಿಂದ ಸದರೀ ಸ ನಂ 63:5ರಲ್ಲಿ ಸ ನಂ 61:4 ಸೇರಿಸಿ ಲಕ್ಷ್ಮಣರೆಡ್ಡಿಯವರು ನಿ ಡಿ 3ರಂತೆ ಅಡಮಾನ ಪತ್ರವನ್ನು ಬರೆದುಕೊಟ್ಟಿದ್ದರು ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ. ಸದರೀ ನಿ ಡಿ 3 ಅಡಮಾನ ಪತ್ರದಲ್ಲಿ ತೋರಿಸಿದ ಚಕ್ಕು ಬಂದಿಯ ಸ್ವತ್ತನ್ನೇ ಪ್ರಸ್ತುತ ಪ್ರತಿವಾದಿಯವರು ಚಿನ್ನಪ್ಪ ಬಿನ್ ಗಂಗಪ್ಪನವರಿಂದ 1966ನೇ

ಇಸವಿಯಲ್ಲಿಯೇ ಖರಿದಿ ಮಾಡಿರುತ್ತಾರೆ. ಕೇವಲ ಸದರೀ ಪತ್ರದಲ್ಲಿ ಸ ನಂ 63:5ರಲ್ಲಿ 20 ಗುಂಟೆ ಸ್ವತ್ತು ಎಂದು ನಮೂದು ಮಾಡಿದ್ದಾರೆ ಎಂದ ಮಾತ್ರಕ್ಕೆ, ಸದರೀ ನಿ ಡಿ 3 ಮತ್ತು ನಿ ಡಿ 40ರಲ್ಲಿ ತೋರಿಸಿದ ಚಕ್ಕು ಬಂದಿಗಳು ತಪ್ಪಾಗಿರುತ್ತವೆ ಎಂದು ಹೇಳಲಾಗುವುದಿಲ್ಲ. ಕಾರಣ, ಯಾವುದೇ ಒಂದು ಸ್ವತ್ತಿನ ವಿಸ್ತೀರ್ಣ ಮತ್ತು ಸಂಖ್ಯೆಗಿಂತಲೂ ಸದರೀ ಸ್ವತ್ತಿನ ಚಕ್ಕು ಬಂದಿಯು ಹೆಚ್ಚಿನ ಮಹತ್ವವನ್ನು ಪಡೆದುಕೊಳ್ಳುತ್ತದೆ.

84. ಇಲ್ಲಿ ನಾವು ಅತೀ ಮುಖ್ಯವಾಗಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ಈ ಹಿಂದೆ ಪಕ್ಷಗಾರರು ಯಾವುದೇ ಸ್ವತ್ತನ್ನು ಖರೀದಿ ಮಾಡುವ ಮತ್ತು ಮಾರಾಟ ಮಾಡುವ ಸಮಯದಲ್ಲಿ ತಮ್ಮ ಜಮೀನಿನ ಯಾವ ಚಕ್ಕು ಬಂದಿಯಡಿಯಲ್ಲಿ ಇರುತ್ತಿತ್ತು ಎಂಬುದಕ್ಕೇ ಮಹತ್ವವನ್ನು ನೀಡುತ್ತಿದ್ದರು. ಕಾರಣ, ಆ ಸಮಯದಲ್ಲಿ ಪ್ರತಿಯೊಬ್ಬ ಪಕ್ಷಗಾರರು ತಮ್ಮ ತಮ್ಮ ವಿಶ್ವಾಸದ ಮೇಲೆ ತಾವು ಸ್ವಾಧೀನಾನುಭವದಲ್ಲಿದ್ದ ಚಕ್ಕು ಬಂದಿಯನ್ನು ಬೇರೆಯವರಿಗೆ ಮಾರಾಟ ಮಾಡುತ್ತಿದ್ದರು. ಆ ಸಮಯದಲ್ಲಿ ಸದರೀ ಸ್ವತ್ತಿನ ಸಂಖ್ಯೆಯಾಗಲೀ ಅಥವಾ ವಿಸ್ತೀರ್ಣಕ್ಕಾಗಲೀ ಹೆಚ್ಚಿನ ಮಹತ್ತವನ್ನು ನೀಡುತ್ತಿರಲಿಲ್ಲ. ಹೀಗಿರುವಾಗ, ಪ್ರಸ್ತುತ ನಿ ಡಿ 3ರ ದಾಖಲೆಯ ಪ್ರಕಾರ 1949ನೇ ಇಸವಿಯಲ್ಲಿ ಚಿನ್ನಪ್ಪನ ಮಗ ಅಡಮಾನ ಮಾಡಿದ ಚಕ್ಕುಬಂದಿಯ ಸ್ವತ್ತನ್ನೇ, 1966ನೇ ಇಸವಿಯಲ್ಲಿ ಪ್ರತಿವಾದಿಯು ಖರೀದಿ ಮಾಡಿರುತ್ತಾರೆ. ಆದ್ದರಿಂದ ನಾವು ಸರ್ವೆ ನಂಬರ್ ಮತ್ತು ವಿಸ್ತೀರ್ಣಕ್ಕಿಂತಲೂ ನಾವು ಹೆಚ್ಚಾಗಿ ಚಕ್ಕು ಬಂದಿಗೆ ಹೆಚ್ಚಿನ ಮಹತ್ವವನ್ನು ನೀಡಬೇಕಾಗುತ್ತದೆ.

85. ಮುಂದುವರಿದು, ಇಲ್ಲಿ ನಾವು ಗಮನಿಸಬೇಕಾದ ಅತೀ ಪ್ರಮುಖ ಅಂಶವೆಂದರೆ, ನಿ ಡಿ 3ರ ದಾಖಲೆಯು 1949ನೇ ಇಸವಿಯ ದಾಖಲೆಯಾಗಿದ್ದು, ನಿ ಡಿ 40ರ ದಾಖಲೆಯ 1966ನೇ ಇಸವಿಯ ದಾಖಲೆಯಾಗಿರುತ್ತದೆ. ಅಂದರೆ ಸದರೀ ನಿ ಡಿ 3ರ ದಾಖಲೆಯು ಸುಮಾರು 67 ವರ್ಷಗಳ ಹಿಂದಿನ ನೊಂದಾಯಿತ ದಾಖಲೆಯಾಗಿರುತ್ತದೆ. ಅದೇ ರೀತಿ ನಿ ಡಿ 40ರ ದಾಖಲೆಯು ಸುಮಾರು 50 ವರ್ಷಗಳ ಹಿಂದಿನ ನೊಂದಾಯಿತ ದಾಖಲೆಯಾಗಿರುತ್ತದೆ. ಒಂದು ವೇಳೆ ಸದರೀ ದಾಖಲೆಗಳಲ್ಲಿ ಸ್ವತ್ತಿನ ಚಕ್ಕುಬಂದಿಯನ್ನು

ತಪ್ಪಾಗಿ ನಮೂದು ಮಾಡಿದ್ದಾರೆ ಎಂದಾಗಿದ್ದರೆ, ವಾದಿಯು ಆಗಲೇ ಸದರೀ ದಾಖಲೆಗನ್ನು ಪ್ರಶ್ನೆ ಮಾಡಬಹುದಾಗಿತ್ತು, ಆದರೆ, ಹಲವಾರು ವರ್ಷಗಳ ನಂತರ ಈಗ ಸದರೀ ದಾಖಲೆಗಳಲ್ಲಿ ನಮೂದು ಮಾಡಿದ ಚಕ್ಕು ಬಂದಿಯು ತಪ್ಪಾಗಿರುತ್ತದೆ ಎಂದು ಹೇಳಲಾಗುವುದಿಲ್ಲ, ಕಾರಣ, ನಿ ಡಿ 40ರ ದಾಖಲೆಯನ್ನು ಬೇರೆಯವರು ಬರೆದುಕೊಟ್ಟಿರುತ್ತಾರೆಂದು ವಾದಿಯು ತಪ್ಪಿಸಿಕೊಳ್ಳಲು ಪ್ರಯತ್ನಪಟ್ಟರೂ ನಿ ಡಿ 3ರ ದಾಖಲೆಯನ್ನು ಮಾತ್ರ ಸ್ವತಃ ತನ್ನ ತಂದೆಯ ದತ್ತು ಮಗನಾದ ಲಕ್ಶ್ಮಣರೆಡ್ಡಿಯವರೇ ಬರೆದುಕೊಟ್ಟಿದ್ದು ಸದರೀ ಪತ್ರದಲ್ಲಿ ನಮೂದು ಮಾಡಿದ ಬಗ್ಗೆ ಚಕ್ಕು ಬಂದಿ ತನಗೆ ಗೊತ್ತಿರಲಿಲ್ಲ ಎಂದು ಹೇಳಲಾಗುವುದಿಲ್ಲ, ಕಾರಣ, ಸದರೀ ನಿ ಡಿ 3ರ ಅಡಮಾನ ಪತ್ರವನ್ನು ಮಾಡಿದ ಬಗ್ಗೆ ತನ್ನ ಗಮನದಲ್ಲಿರುತ್ತದೆ ಎಂಬ ಅಂಶವನ್ನು ಸ್ವತಃ ಸಾಕ್ಷಿಯೇ ತನ್ನ ಪಾಟೀ ಸವಾಲಿನಲ್ಲಿ ಒಪ್ಪಿಕೊಂಡಿರುತ್ತಾರೆ. ಈ ಎಲ್ಲಾ ಅಂಶಗಳನ್ನು ನೋಡಿದಾಗ, ಹಲವಾರು ಸತ್ಯಾಂಶಗಳನ್ನು ವಾದಿಯು ಮರೆಮಾಚಿರುತ್ತಾರೆ ಎಂದು ಕಂಡು ಬಂದಿದ್ದು, ನಿ ಡಿ 40ರ ದಾಖಲೆಯ ಪ್ರಕಾರ ಪ್ರತಿವಾದಿಯ ವಾದದಂತೆ ಸ ನಂ 63:5ರಲ್ಲಿ ಸ ನಂ 61:4 ಮಿಲೀನಗೊಂಡಿರುತ್ತದೆ ಎಂದು ಊಹೆ ಮಾಡಿಕೊಳ್ಳಬಹುದಾಗಿದೆ.

86. ನಿ ಡಿ 41 ಸ ನಂ 61:4 ಮತ್ತು 63:5ಕ್ಕೆ ಸಂಬಂಧಿಸಿದ ಐಎಲ್ ಪ್ರತಿಯಾಗಿದ್ದು , ಸದರೀ ದಾಖಲೆಗಳ ಪ್ರಕಾರ ಸ ನಂ 61:4 ಚಿನ್ನಪ್ಪ ಬಿನ್ ದೊಡ್ಡಹನುಮಂತರಾಯಪ್ಪನವರ ನಂತರ ಪ್ರಸ್ತುತ ವಾದಿಯ ಹೆಸರಿಗೆ ಐಹೆಚ್ಆರ್ ಸಂ 16:1983-84ರಂತೆ ವರ್ಗಾವಣೆ ಆಗಿರುತ್ತದೆ ಎಂಬುದು ಕಂಡು ಬರುತ್ತದೆ. ಆದರೆ, ಈಗಾಗಲೇ ನಾವು ಮೇಲೆ ವಿವರಿಸಿದಂತೆ ವಾದಿಯ ವಾದದ ಪ್ರಕಾರ ಚಿನ್ನಪ್ಪ ಬಿನ್ ದೊಡ್ಡ ಹನುಮಂತರಾಯಪ್ಪನ ಮರಣಾ ನಂತರ ತನ್ನ ತಂದೆಯಾದ ರಾಮಪ್ಪನವರು ಸ ನಂ 61:4ರಲ್ಲಿ 40 ವರ್ಷಗಳ ಕಾಲ ಸ್ವಾಧೀನಾನುಭವದಲ್ಲಿದ್ದರು ಎಂದು ತಿಳಿಸಿರುತ್ತಾರೆ. ಹಾಗಿದ್ದರೆ, ಸದರೀ ಚಿನ್ನಪ್ಪ ಬಿನ್ ದೊಡ್ಡಹನುಮಂತರಾಯಪ್ಪನವರ ಮರಣಾನಂತರ ಸದರೀ ಸ ನಂ 61:4ರ ಜಮೀನು ಸದರೀ

ರಾಮಪ್ಪನವರ ಹೆಸರಿಗೆ ವರ್ಗಾವಣೆ ಆಗದೇ ನೇರವಾಗಿ ವಾದಿಯ ಹೆಸರಿಗೆ ಹೇಗೆ ವರ್ಗಾವಣೆ ಆಗಲು ಸಾದ್ಯ ಎಂಬ ಅನುಮಾನ ಉಂಟಾಗುತ್ತದೆ.

87. ಕೇವಲ ಕಂದಾಯ ದಾಖಲೆಗಳಲ್ಲಿ ಸ ನಂ 61:4ಕ್ಕೆ ಸಂಬಂಧಿಸಿ ವಾದಿಯ ಹೆಸರು ನಮೂದಾಗಿದೆ ಎಂದ ಮಾತ್ರಕ್ಕೆ, ಸದರೀ ವಾದಿಯವರೇ ಸದರೀ ಸ್ವತ್ತಿನ ಮಾಲೀಕರಾಗಿರುತ್ತಾರೆ ಎಂದು ಹೇಳಲಾಗುವುದಿಲ್ಲ. ಕಾರಣ, ಸದರೀ ಸ್ವತ್ತಿನ ನೇರವಾದ ಹಕ್ಕನ್ನು ತೋರಿಸುವಂತಹ ಯಾವುದೇ ಒಂದು ಸಣ್ಣ ದಾಖಲೆಯೂ ಸಹಾ ವಾದಿಯ ಬಳಿ ಇರುವುದಿಲ್ಲ, ವಾದಿಯ ವಾದವೆಲ್ಲಾ ನೇರವಾಗಿ ಕಂದಾಯ ದಾಖಲೆಗಳ ಮೇಲೆಯೇ ಆಧಾರವಾಗಿರುತ್ತದೆ. ಆದರೆ, ಕೇವಲ ಕಂದಾಯ ದಾಖಲೆಗಳ ಆಧಾರದ ಮೇರೆಗೆ ಒಬ್ಬ ವ್ಯಕ್ತಿಯ ಹಕ್ಕನ್ನು ನಿರ್ಧರಿಸುವುದು ಸಾದ್ಯವಿಲ್ಲ ಕಾರಣ, ವಾದಿಯ ವಾದವು ಕೇವಲ ಕಂದಾಯ ದಾಖಲೆಗಳ ಮೇಲೆ ಆಧಾರಿತವಾಗಿದ್ದರೆ, ಪ್ರತಿವಾದಿಯ ವಾದವು ನೊಂದಾಯಿತ ಪತ್ರಗಳ ಆಧಾರದ ಮೇಲೆ ಆಧಾರಿತವಾಗಿರುತ್ತದೆ. ಹೀಗಿರುವಾಗ, ನಾವು ಸದರೀ ನೊಂದಾಯಿತ ಪತ್ರಗಳ ಮೇಲೆಯೇ ಹಕ್ಕನ್ನು ನಿರ್ಧರಿಸಬೇಕಾಗಿರುತ್ತದೆ ಹೊರತು, ಕಂದಾಯ ದಾಖಲೆಗಳ ಮೇಲೆ ನಿರ್ಧರಿಸಲಾಗುವುದಿಲ್ಲ.

88. ಮುಂದುವರಿದು ನಿ ಡಿ 42 ಮತ್ತು ನಿ ಡಿ 43 ಸ ನಂ 63:5ಕ್ಕೆ ಸಂಬಂಧಿಸಿದ ಐಎಲ್ ಮತ್ತು ಆರ್ ಆರ್ ಪ್ರತಿಗಳಾಗಿದ್ದು, ಸದರೀ ದಾಖಲೆಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಸ ನಂ 63:5 ಮೂಲತಃ ಚಿನ್ನಪ್ಪ ಬಿನ್ ಹನುಮಂತರಾಯಪ್ಪನವರಿಗೆ ಸೇರಿತ್ತು ಎಂಬ ಬಗ್ಗೆ ಮತ್ತು ಸದರೀ ಸ್ವತ್ತನ್ನು ಚಿನ್ನಪ್ಪನವರ ದತ್ತು ಮಗ ಲಕ್ಷ್ಮಣರೆಡ್ಡಿಯವರು ಆದೆಪ್ಪ ಬಿನ್ ಗಂಗಪ್ಪನವರಿಗೆ ನಿ ಡಿ 3ರಂತೆ ಅಡಮಾನ ಮಾಡಿದ ಬಗ್ಗೆ ಬಹಳ ಸ್ಪಷ್ಟವಾಗಿ ನಮೂದು ಮಾಡಿರುವುದು ಕಂಡು ಬರುತ್ತದೆ. ಕೊನೆಯದಾಗಿ, ಸದರೀ ಸ್ವತ್ತು ಪ್ರಸ್ತುತ ಪ್ರತಿವಾದಿಯವರ ಕುಟುಂಬಕ್ಕೆ ವರ್ಗಾವಣೆ ಆದ ಬಗ್ಗೆ ನಮೂದು ಇರುತ್ತದೆ.

89. ನಿ ಡಿ 44 ರಿಂದ ನಿ ಡಿ 51ರ ದಾಖಲೆಗಳು ಕಚ್ಚಾ ನಕಾಶೆಗಳಾಗಿದ್ದು ಸದರೀ ದಾಖಲೆಗಳ ಕುರಿತು ಪ್ರತಿವಾದಿಯ ಪರ ವಕೀಲರು ತಮ್ಮ ವಾದ ಮಂಡನೆಯ ಸಮಯದಲ್ಲಿ

ಸದರೀ ನಿ ಡಿ 44 ರಿಂದ 51ರ ಕಚ್ಚಾ ನಕಾಶೆಗಳನ್ನು ನೊಂದಾಯಿತ ಕ್ರಯ ಪತ್ರಗಳಲ್ಲಿ ತೋರಿಸಿದ ಚಕ್ಕು ಬಂದಿಗಳ ಆಧಾರದ ಮೇರೆಗೆ ನಮೂದು ಮಾಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಸದರೀ ದಾಖಲೆಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ, ನಿ ಡಿ 44ನ್ನು ನಿ ಡಿ 3ರ ಪ್ರಕಾರ ಲಕ್ಷ್ಮಣರೆಡ್ಡಿಯವರು ಗಂಗಪ್ಪ ಬಿನ್ ಆದೆಪ್ಪ ನವರಿಗೆ ಮಾಡಿದ ಅಡಮಾನ ಪತ್ರದ ಆಧಾರದ ಮೇರೆಗೆ ರಚಿಸಲಾಗಿರುತ್ತದೆ. ಸದರೀ ನಿ ಡಿ 3ರ ದಾಖಲೆಯ ಪ್ರಕಾರ ಸ ನಂ 63ಃ5ರ ಜಮೀನಿನ ಪೂರ್ವದಲ್ಲಿ ಎಲೆನಂಜಯ್ಯನವರ ಜಮೀನು ಎಂದು ಬರೆದಿದ್ದು, ಸದರೀ ಸ್ವತ್ತು ಸ ನಂ 61ಃ3 ಆಗಿರುತ್ತದೆ.

90. ಅದೇ ರೀತಿ ನಿ ಡಿ 45 1953ನೇ ಇಸವಿಯಲ್ಲಿ ಸ ನಂ 63ಃ2 ಮತ್ತು 63ಃ4ಕ್ಕೆ ಸಂಬಂಧಿಸಿ ಕೆ.ಬಿ.ಹನುಮಂತರೆಡ್ಡಿಯವರಿಗೆ ನಿ ಡಿ 13ರ ಪ್ರಕಾರ ಬರೆದುಕೊಟ್ಟ ಕ್ರಯ ಪತ್ರದಲ್ಲಿ ತೋರಿಸಿದ ಚಕ್ಕು ಬಂದಿಯ ಆಧಾರಿತ ಕಚ್ಚಾ ನಕಾಶೆಯಾಗಿದ್ದು ಸದರೀ ದಾಖಲೆಯ ಪ್ರಕಾರ ಸ ನಂ 63ಃ4ರ ದಕ್ಷಿಣ ಭಾಗದಲ್ಲಿ ಚಿನ್ನಪ್ಪನವರ ಜಮೀನು ಎಂದು ಬರೆದಿದ್ದು ಸದರೀ ದಾಖಲೆಯನ್ನು 1953ನೇ ಇಸವಿಯಲ್ಲೇ ರಚಿಸಿದ್ದರಿಂದ, ಆ ಸಮಯದಲ್ಲಿ ಸದರೀ ಆ ಸ್ವತ್ತು ಚಿನ್ನಪ್ಪನವರ ಸ್ವಾಧೀನದಲ್ಲಿತ್ತು ಆ ನಂತರ 1966ನೇ ಇಸವಿಯಲ್ಲಿ ತಾನು ಸದರೀ ಸ್ವತ್ತನ್ನು ಚಿನ್ನಪ್ಪ ಬಿನ್ ಗಂಗಪ್ಪನವರಿಂದ ಖರೀದಿ ಮಾಡಿರುತ್ತೇನೆ ಎಂಬುದು ಪ್ರತಿವಾದಿಯ ವಾದವಾಗಿರುತ್ತದೆ.

91. ನಿ ಡಿ 46ನ್ನು ಸ ನಂ 61ಃ3ಕ್ಕೆ ಸಂಬಂಧಿಸಿ ದಿಃ19.7.1962ರಲ್ಲಿ ನಂಜಮ್ಮ ಮತ್ತು ಆಕೆಯ ಮಗ ಕೆ.ಎನ್.ನಂಜಾರೆಡ್ಡಿಯವರಿಗೆ ಮಾಡಿಕೊಟ್ಟ ಅಡಮಾನ ಪತ್ರದಂತೆ ರಚಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಆದರೆ, ಇಲ್ಲಿ ನಾವು ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಸದರೀ ಅಡಮಾನ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಹೀಗಿರುವಾಗ, ನಿ ಡಿ 46ರ ದಾಖಲೆಯ ಅಧಾರದ ಮೇರೆಗೆ ಸ್ವತ್ತಿನ ಚಕ್ಕು ಬಂದಿಯನ್ನು ನಂಬುವುದು ಸಮಂಜಸವಾಗಿರುವುದಿಲ್ಲ.

92. ನಿ ಡಿ 47 ಸ ನಂ 63:5ಕ್ಕೆ ಸಂಬಂಧಿಸಿ ಚಿನ್ನಪ್ಪ ಮತ್ತು ಆತನ ಇಬ್ಬರು ಮಕ್ಕಳು ಸೇರಿ ಚೀಗಟಗೆರೆ ಚಿನ್ನಪ್ಪನವರಿಗೆ ಮಾಡಿಕೊಟ್ಟ ನಿ ಡಿ 18 ತತ್ಸಮಾನ ದಾಖಲೆಯಾದ ನಿ ಪಿ 13ರ ನೊಂದಾಯಿತ ಕ್ರಯಪತ್ರದನ್ವಯ ರಚಿಸಲಾಗಿರುತ್ತದೆ. ಸದರೀ ದಾಖಲೆಯ ಕುರಿತು ವಾದಿಯ ಪರ ವಕೀಲರು ತಮ್ಮ ವಾದ ಮಂಡನೆಯ ಸಮಯದಲ್ಲಿ ನಿ ಡಿ 18ರ ಪ್ರಕಾರ ಸ ನಂ 63:5ನ್ನು ಮಾತ್ರ ಚೀಗಟಗೆರೆ ಚಿನ್ನಪ್ಪನವರಿಗೆ ಮಾರಾಟ ಮಾಡಲಾಗಿರುತ್ತದೆ. ಆ ಸಮಯದಲ್ಲಿ ಸ ನಂ 61:4ನ್ನು ಸೇರಿಸಿರುವುದಿಲ್ಲ, ಆದ್ದರಿಂದಲೇ ಸ ನಂ 63ರ ಪೂರ್ವದಲ್ಲಿ ನಮ್ಮ ಜಮೀನು ಎಂದು ನಮೂದು ಮಾಡಲಾಗಿರುತ್ತದೆ. ಸದರೀ ನಮ್ಮ ಜಮೀನು ಎಂದು ನಮೂದು ಮಾಡಿದ ಸ್ವತ್ತೇ ಸ ನಂ 61:4 ಆಗಿರುತ್ತದೆ, ಹೀಗಿರುವಾಗ, ಸ ನಂ 63:5ರಲ್ಲಿ 61:4 ಸೇರಿರುತ್ತದೆ ಎಂದು ಹೇಳಲಾಗುವುದಿಲ್ಲ, ಕೇವಲ ನಿ ಡಿ 40ರಲ್ಲಿ ತಪ್ಪು ಚಕ್ಕು ಬಂದಿಯನ್ನು ತೋರಿಸಿದ್ದಾರೆ ಎಂದ ಮಾತ್ರಕ್ಕೆ ಪ್ರತಿವಾದಿಯ ವಾದವನ್ನು ನಂಬಲಾಗುವುದಿಲ್ಲ ಎಂದು ವಾದಿಸಿರುತ್ತಾರೆ.

93. ಆದರೆ ಇಲ್ಲಿ ನಾವು ಗಮನಿಸಬೇಕಾದ ಅತೀ ಪ್ರಮುಖ ಅಂಶವೆಂದರೆ, ನಿ ಡಿ 3ರ ದಾಖಲೆಯ ಪ್ರಕಾರವೇ ಚಿನ್ನಪ್ಪನವರ ದತ್ತು ಮಗನಾದ ಲಕ್ಷ್ಮಣರೆಡ್ಡಿಯವರು ಸ ನಂ 63:5ನ್ನು ಅಡಮಾನ ಮಾಡಿದಾಗ, ಸದರೀ ಜಮೀನಿನ ಪೂರ್ವದಲ್ಲಿ ಎಲೆನಂಜಯ್ಯನವರ ಜಮೀನು ಅಂದರೆ ಸ ನಂ 61:3 ಎಂದು ತಿಳಿಸಿರುತ್ತಾರೆ. ಅಲ್ಲದೇ, ನಿ ಡಿ 11ರ ಪ್ರಕಾರ ಸದರೀ ಎಲೆನಂಜಯ್ಯನವರ ಸೊಸೆ ಸ ನಂ 61:3ನ್ನು ನಂಜಾರೆಡ್ಡಿಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಸ ನಂ 61:3ರ ಪಶ್ಚಿಮ ಭಾಗದಲ್ಲಿ ಈ ದಾವೆಯ ಪ್ರತಿವಾದಿಯಾದ ಕೆ.ಹೆಚ್.ಸೋಮಶೇಖರ ರೆಡ್ಡಿಯವರ ಜಮೀನು ಎಂದು ನಮೂದು ಮಾಡಿರುತ್ತಾರೆ.

94. ಅದೇ ರೀತಿ ಸದರೀ ಕೆ.ಎನ್.ನಂಜಾರೆಡ್ಡಿಯವರು ಸದರೀ ಸ ನಂ 61:3ರ ಜಮೀನನ್ನು ನಿ ಡಿ 25ರ ಮೂಲಕ ಚಿಕ್ಕಪ್ಪಯ್ಯನವರಿಗೆ ಮಾರಾಟ ಮಾಡುವ ಸಂದರ್ಭದಲ್ಲೂ ಸಹಾ ಸ ನಂ 61:3ರ ಪಶ್ಚಿಮ ಭಾಗದಲ್ಲಿ ಕೆ.ಹೆಚ್.ಸೋಮಶೇಖರರೆಡ್ಡಿಯವರ ಜಮೀನು ಎಂದು ನಮೂದು ಮಾಡಿರುತ್ತಾರೆ. ಅಲ್ಲದೇ, ನಿ ಡಿ 18ರ ಮೂಲಕ ಸ್ವತ್ತನ್ನು ಚೀಗಟಗೆರೆ

ಚಿನ್ನಪ್ಪನವರು ಖರೀದಿ ಮಾಡಿದ ಮೇಲೆ ನಿ ಡಿ 40ರ ಮೂಲಕ ಸದರೀ ಸ ನಂ 63:5ನ್ನು ಮಾರಾಟ ಮಾಡುವ ಸಂದರ್ಭದಲ್ಲಿ 1966ನೇ ಇಸವಿಯಲ್ಲಿಯೇ ಸ ನಂ 63:5ರ ಪೂರ್ವ ಭಾಗದಲ್ಲಿ ಕೆ.ಎನ್.ನಂಜಾರೆಡ್ಡಿಯವರ ಜಮೀನು ಎಂಬುದಾಗಿ ನಮೂದು ಮಾಡಿರುತ್ತಾರೆ ಅಂದರೆ ಸದರೀ ನಂಜಾರೆಡ್ಡಿಯವರ ಜಮೀನು ಸ ನಂ 61:3 ಆಗಿರುತ್ತದೆ ಎಂದು ಊಹೆ ಮಾಡಿಕೊಳ್ಳಬಹುದಾಗಿದೆ.

95. ಅಲ್ಲದೇ ಇತರೆ ದಾಖಲಾತಿಗಳನ್ನು ನೋಡಿದಾಗ, ಸ ನಂ 61:3ರ ಪಶ್ಚಿಮ ಭಾಗದಲ್ಲಿ ಈ ದಾವೆಯ ಪ್ರತಿವಾದಿಯಾದ ಸೋಮಶೇಖರ ರೆಡ್ಡಿಯವರ ಜಮೀನು ಇರುತ್ತದೆ ಎಂದಾದಾಗ, ಸದರೀ ಜಮೀನು ಸ ನಂ 63:5ರಲ್ಲಿ ವಿಲೀನವಾಗಿದೆ ಎಂದು ಊಹೆ ಮಾಡಿಕೊಳ್ಳಬಹುದಾಗಿದೆ. ಒಂದು ವೇಳೆ ಸದರೀ ಸ ನಂಂ 61:3ರ ಪಶ್ಚಿಮ ಭಾಗದಲ್ಲಿ ವಾದಿಗೆ ಸೇರಿದ ಜಮೀನು ಇದ್ದುದ್ದರೆ ಅವರ ಹೆಸರನ್ನು ಏಕೆ ನಮೂದು ಮಾಡಲಿಲ್ಲ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಆದ್ದರಿಂದ ಕೇವಲ ನಿ ಡಿ 18ರಲ್ಲಿ ಸ ನಂ 63:5ರ ಪೂರ್ವದಲ್ಲಿ ನಮ್ಮ ಜಮೀನು ಎಂದು ನಮೂದು ಮಾಡಿದ್ದಾರೆ ಎಂದ ಮಾತ್ರಕ್ಕೆ ಅದು ಸ ನಂ 61:4 ಆಗಿರುತ್ತದೆ ಎಂದು ಊಹೆ ಮಾಡಿಕೊಳ್ಳಲಾಗುವುದಿಲ್ಲ. ಆದ್ದರಿಂದ ಕೇವಲ ನಿ ಡಿ 18ರ ಆಧಾರದ ಮೇರೆಗೆ ಒಬ್ಬ ವ್ಯಕ್ತಿಯ ಹಕ್ಕನ್ನು ನಿರ್ಧರಿಸಲಾಗುವುದಿಲ್ಲ. ಕಾರಣ ಅದಕ್ಕೆ ಪ್ರತಿಯಾಗಿ ಪ್ರತಿವಾದಿಯ ವಾದಕ್ಕೆ ಸಹಕಾರಿಯಾಗುವಂತೆ ಹಲವಾರು ನೊಂದಾಯಿತ ಕ್ರಯ ಪತ್ರಗಳು ಇರುತ್ತವೆ. ಆದ್ದರಿಂದ ನಿ ಡಿ 47ರ ಚಕ್ಕುಬಂದಿಯ ಆಧಾರದ ಮೇಲೆ ವಾದಿ ಸ ನಂ 61:4ರ ಜಮೀನಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದು ಹೇಳಲಾಗುವುದಿಲ್ಲ.

96. ನಿ ಡಿ 48 ಸ ನಂ 61:3ಕ್ಕೆ ಸಂಬಂಧಿಸಿ ಕ್ರಯ ಪತ್ರವಾದ ಬಗ್ಗೆ ನಕಾಶೆಯಾಗಿರುತ್ತದೆ ಎಂಬುದು ಪ್ರತಿವಾದಿಯ ವಾದವಾಗಿರುತ್ತದೆ. ಅದರೆ ಸದರೀ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಸದರೀ ಕಚ್ಚಾ ನಕಾಶೆಯ ಮೇರೆಗೆ ಪ್ರತಿವಾದಿಯ ವಾದವನ್ನು ನಂಬುವುದು ಸಮಂಜಸವಾಗಿರುವುದಿಲ್ಲ.

97. ನಿ ಡಿ 49 ಸ ನಂ 61:3ಕ್ಕೆ ಸಂಬಂಧಿಸಿ ನಂಜಾರೆಡ್ಡಿಯವರು ಚಿಕ್ಕಪ್ಪಯ್ಯನವರಿಗೆ ನಿ ಡಿ 25ರಂತೆ ಮಾಡಿಕೊಟ್ಟ ಕ್ರಯ ಪತ್ರದನ್ವಯ ರಚಿಸಿದ ಕಚ್ಚಾ ನಕಾಶೆಯಾಗಿರುತ್ತೆ ಎಂಬುದು ಪ್ರತಿವಾದಿಯ ವಾದವಾಗಿರುತ್ತದೆ. ಸದರೀ ನಂಜಾರೆಡ್ಡಿಯವರು ನಿ ಡಿ 11ರಂತೆ ನಂಜಮ್ಮನಿಂದ ಸ ನಂ 61:3ರಂತೆ ಖರೀದಿ ಮಾಡಿದ ನಂತರ ಸದರೀ ಸ್ವತ್ತನ್ನು ಚಿನ್ನಪ್ಪನ ದತ್ತು ಮಗನಾದ ಲಕ್ಷ್ಮಣರೆಡ್ಡಿಯ ಖಾಸಾ ಸಹೋದರರಾದ ಸಂಜೀವಪ್ಪನ ಮಗನಾದ ಚಿಕ್ಕಪ್ಪಯ್ಯನವರಿಗೆ ಸದರೀ ಸ ನಂ 61:3ರ ಜಮೀನನ್ನು ಮಾರಾಟ ಮಾಡಲಾಗಿರುತ್ತದೆ ಎಂದು ನುಡಿದಿರುತ್ತಾರೆ. ಅಂದರೆ, ಸದರೀ ಚಿಕ್ಕಪ್ಪಯ್ಯನೂ ಸಹಾ ವಾದಿಯರ ಸಂಬಂಧಿಯಾಗಿರುತ್ತಾನೆ ಎಂಬುದು ಈ ಅಂಶದ ಮೂಲಕ ಕಂಡು ಬರುತ್ತದೆ. ಸದರೀ ನಿ ಡಿ 49ನ್ನು ನೋಡಿದಾಗಲೂ ಸಹಾ, ನಿ ಡಿ 25ರ ದಾಖಲೆಯಲ್ಲಿ ಸ ನಂ 61:3ರ ಜಮೀನಿಗೆ ಪಶ್ಚಿಮ ಭಾಗದಲ್ಲಿ ಪ್ರತಿವಾದಿಯವರ ಜಮೀನು ಎಂದು ನಮೂದು ಮಾಡಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಈ ಅಂಶವನ್ನು ನೋಡಿದಾಗ, ವಾದಿಯ ಕುಟುಂಬದ ಸದಸ್ಯರೇ ಈ ಅಂಶದ ಕುರಿತು ಒಪ್ಪಿಕೊಂಡಿರುತ್ತಾರೆ ಎಂದಾದಾಗ, ಸದರೀ ದಾವಾ ಸ್ವತ್ತು ಪ್ರತಿವಾದಿಯರ 1966ನೇ ಇಸವಿಯಿಂದಲೂ ಸ್ವಾಧೀನದಲ್ಲಿರುತ್ತದೆ ಎಂಬುದು ಸ್ಪಷ್ಟವಾಗುತ್ತದೆ.

98. ನಿ ಡಿ 50 ಸ ನಂ 62:4ಕ್ಕೆ ಸಂಬಂಧಿಸಿ ಆಂಜಿನಪ್ಪನವರು ನಿ ಡಿ 27ರಂತೆ ಕೆ ಹೆಚ್ ಕೃಷ್ಣಾರೆಡ್ಡಿಯವರಿಗೆ ಬರೆದುಕೊಟ್ಟ ಕ್ರಯ ಪತ್ರದನ್ವಯ ರಚಿಸಲಾಗಿರುತ್ತದೆ ಎಂಬುದು ಪ್ರತಿವಾದಿಯ ವಾದವಾಗಿರುತ್ತದೆ. ಆದರೆ ಸದರೀ ನಿ ಡಿ 27ರ ದಾಖಲೆಯಲ್ಲಿ ಪ್ರಸ್ತುತ ದಾವಾ ಸ್ವತ್ತಿನ ಕುರಿತು ಯಾವುದೇ ರೀತಿಯ ವಿವರಣೆ ಆಗಲೀ ಅಥವಾ ಚಕ್ಕು ಬಂದಿಯಾಗಲೀ ನಮೂದು ಮಾಡಿರುವುದಿಲ್ಲ. ಆದ್ದರಿಂದ, ಸದರೀ ದಾಖಲನ್ವಯ ರಚಿಸಿದ ನಿ ಡಿ 50ರ ನಕಾಶೆಯ ಬಗ್ಗೆ ಹೆಚ್ಚಿನ ವಿವರಣೆ ಅಗತ್ಯವಿರುವುದಿಲ್ಲ.

99. ನಿ ಡಿ 51 ಸ ನಂ 62:4ಕ್ಕೆ ಸಂಬಂಧಿಸಿ ಸದರೀ ಕೆ.ಹೆಚ್.ಕೃಷ್ಣಾರೆಡ್ಡಿಯವರು ಐಸಿಐಸಿಐ ಬ್ಯಾಂಕಿನವರಿಗೆ ನಿ ಡಿ 28ರಂತೆ ಬರೆದುಕೊಟ್ಟ ಅಡಮಾನ ಪತ್ರದನ್ವಯ ರಚಿಸಲಾಗಿರುತ್ತದೆ ಎಂಬುದು ಪ್ರತಿವಾದಿಯ ವಾದವಾಗಿರುತ್ತದೆ. ಆದರೆ ಸದರೀ ನಿ ಡಿ 28ರ

ದಾಖಲೆಯಲ್ಲಿಯೂ ಸಹಾ ಪ್ರಸ್ತುತ ದಾವಾ ಸ್ವತ್ತಿನ ಕುರಿತು ಯಾವುದೇ ರೀತಿಯ ವಿವರಣೆ ಆಗಲೀ ಅಥವಾ ಚಕ್ಕು ಬಂದಿಯಾಗಲೀ ನಮೂದು ಮಾಡಿರುವುದಿಲ್ಲ. ಆದ್ದರಿಂದ, ಸದರೀ ದಾಖಲನ್ವಯ ರಚಿಸಿದ ನಿ ಡಿ 51ರ ನಕಾಶೆಯ ಬಗ್ಗೆ ಹೆಚ್ಚಿನ ವಿವರಣೆ ಅಗತ್ಯವಿರುವುದಿಲ್ಲ.

100. ನಿ ಡಿ 52 ಗಣಕ ಯಂತ್ರದಿಂದ ಅಂತರ್ಜಾಲದ ಮೂಲಕ ತೆಗೆದ ಛಾಯಾಚಿತ್ರವಾಗಿದ್ದು, ಸದರೀ ದಾಖಲೆಯಲ್ಲಿ ದಾವಾ ಸ್ವತ್ತಿನ ಕುರಿತು ಯಾವುದೇ ರೀತಿಯ ಸರಿಯಾದ ವಿವರಣೆ ಇರದೇ ಇರುವುದರಿಂದ, ಸದರೀ ದಾಖಲೆಯ ಬಗ್ಗೆ ಹೆಚ್ಚಿನ ವಿವರಣೆ ಅಗತ್ಯ ಇರುವುದಿಲ್ಲ.

101. ಈ ಮೇಲೆ ತಿಳಿಸಿದಂತೆ ವಾದಿ ಮತ್ತು ಪ್ರತಿವಾದಿಗಳು ಹಾಜರು ಪಡಿಸಿದ ದಾಖಲೆಗಳನ್ನು ಅತೀ ಸೂಕ್ಷ್ಮವಾಗಿ ಗಮನಿಸಿದಾಗ, ಕಂಡು ಬರುವ ಪ್ರಮುಖ ಅಂಶವೆಂದರೆ, ವಾದಿಯು ತನ್ನ ವಾದದಂತೆ ದಾವಾ ಸ್ವತ್ತು ಸ ನಂ 61ಃ4 ತನಗೆ ಪಿತ್ರಾರ್ಜಿತವಾಗಿ ಐಹೆಚ್ಆರ್ ಸಂ 16ಃ1983-84ರಂತೆ ಪವತಿ ವಾರಸಿನ ಮೂಲಕ ಬಂದಿರುತ್ತದೆ ಆ ಕುರಿತು ಕಂದಾಯ ದಾಖಲೆಗಳಲ್ಲೂ ತನ್ನ ಹೆಸರು ನಮೂದು ಆಗಿರುತ್ತದೆ, ಅಂದಿನಿಂದಲೂ ತಾನು ಮತ್ತು ತನ್ನ ಪೂರ್ವಜರು ಸ್ವಾಧೀನಾನುಭವದಲ್ಲಿ ಇರುತ್ತೇವೆ ಎಂಬ ಅಂಶವನ್ನು ರುಜುವಾತು ಪಡಿಸಲು ಪ್ರಯತ್ನಿಸಿರುತ್ತಾರೆ.

102. ಅದೇ ರೀತಿ ಪ್ರತಿವಾದಿಯವರು ನಿ ಡಿ 40ರ ಪ್ರಕಾರ ಸನಂ 63ಃ5ರ ಸ್ವತ್ತನ್ನು ದಿಃ25.8.1966ರಂದು ಚಿನ್ನಪ್ಪ ಬಿನ್ ಗಂಗಪ್ಪನವರು ತನಗೇ ಮಾರಾಟ ಮಾಡಿದ ಸಂದರ್ಭದಲ್ಲಿ ಸ ನಂ 61ಃ4ರ ಜಮೀನಿನ ವಿಸ್ತೀರ್ಣವನ್ನು ಸೇರಿಸಿ ಸದರೀ ಎರಡೂ ಜಮೀನಿಗೆ ಸಂಬಂಧಿಸಿ ಚಕ್ಕು ಬಂದಿಯನ್ನು ನೀಡಿರುತ್ತಾರೆ ಎಂತಲೂ, ಆ ಮೂಲಕ ಸದರೀ ಸ ನಂ 63ಃ5ರಲ್ಲಿ ಸ ನಂ 61ಃ4 ಸಹಾ ಸೇರಿಕೊಂಡಿರುತ್ತದೆ ಎಂತಲೂ, ತಾನು ಖರೀದಿ ಮಾಡಿದ ದಿನದಿಂದ ಎರಡೂ ಜಮೀನಿನಲ್ಲಿ ತಾವೇ ಸ್ವಾಧೀನಾನುಭವದಲ್ಲಿ ಇರುತ್ತೇನೆ ಎಂಬ ಅಂಶವನ್ನು ರುಜುವಾತು ಪಡಿಸಲು ಪ್ರಯತ್ನಿಸಿರುತ್ತಾರೆ.

103. ಸದರೀ ವಾದಿ ಮತ್ತು ಪ್ರತಿವಾದಿಯ ವಾದದ ಪ್ರಕಾರ ಎಲ್ಲಾ ದಾಖಲೆಗಳನ್ನು ಈಗಾಗಲೇ ನೋಡಿದಾಗ, ಮೊದಲಿಗೆ ನಾವು ಗಮನಿಸಬೇಕಾದ ಅಂಶವೆಂದರೆ, ದಾವಾ ಸ್ವತ್ತು ಮೂಲತಃ ಚಿನ್ನಪ್ಪ ಬಿನ್ ದೊಡ್ಡಹನುಮಂತರಾಯಪ್ಪನವರಿಗೆ ಸೇರಿತ್ತು ಎಂಬುದರಲ್ಲಿ ಯಾವುದೇ ತಕರಾರು ಇರುವುದಿಲ್ಲ, ಆದರೆ, ವಾದಿಯ ವಾದದ ಪ್ರಕಾರ ಸದರೀ ಚಿನ್ನಪ್ಪ ಬಿನ್ ದೊಡ್ಡ ಹನುಮಂತರಾಯಪ್ಪನವರ ಮರಣಾನಂತರ ಸದರೀ ಸ್ವತ್ತು ತನ್ನ ತಂದೆಯಾದ ರಾಮಪ್ಪನವರಿಗೆ ಬಂದಿರುತ್ತದೆ ಅವರು ಸದರೀ ಸ್ವತ್ತಿನಲ್ಲಿ ಸುಮಾರು 40 ವರ್ಷಗಳವರೆಗೆ ಸ್ವಾಧೀನದಲ್ಲಿದ್ದರು ತನ್ನ ತಂದೆಯ ಮರಣಾನಂತರ ದಾವಾ ಸ್ವತ್ತು ತನ್ನ ಸ್ವಾಧೀನಕ್ಕೆ ಬಂದಿರುತ್ತದೆ, ಆ ಪ್ರಕಾರ ತನ್ನ ಹೆಸರಿಗೆ ಖಾತೆ ಆಗಿರುತ್ತದೆ, ಆದ್ದರಿಂದ ಸದರೀ ಸ್ವತ್ತಿಗೆ ತಾನೇ ಮಾಲೀಕನು ಎಂದಾಗಿರುತ್ತದೆ.

104. ಇಲ್ಲಿ ನಾವು ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ಚಿನ್ನಪ್ಪನ ಮರಣಾನಂತರ ವಾದಿಯ ತಂದೆಯಾದ ರಾಮಪ್ಪನವರು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ 40 ವರ್ಷಗಳ ಕಾಲ ಇದ್ದುದ್ದೇ ಆಗಿದ್ದರೆ, ಯಾವ ಕಾರಣದಿಂದ ತಮ್ಮ ಹೆಸರಿಗೆ ಖಾತೆಯನ್ನು ಬದಲಾಯಿಸಿಕೊಳ್ಳಲಿಲ್ಲ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಅದೇ ರೀತಿ ಸದರಿ ರಾಮಪ್ಪನವರು 40 ವರ್ಷಗಳ ಕಾಲ ಸ್ವಾಧೀನದಲ್ಲಿದ್ದರು ಎಂಬ ಬಗ್ಗೆ ಯಾವುದೇ ಒಂದು ಸಣ್ಣ ದಾಖಲೆಯನ್ನೂ ಸಹಾ ನ್ಯಾಯಾಲಯಕ್ಕೆ ವಾದಿಯು ಹಾಜರು ಪಡಿಸಿರುವುದಿಲ್ಲ, ಹೀಗಿರುವಾಗ, ಸದರೀ ರಾಮಪ್ಪನವರು ಚಿನ್ನಪ್ಪ ಬಿನ್ ದೊಡ್ಡಹನುಮಂತರಾಯಪ್ಪನವರ ಮರಣಾನಂತರ ಸ್ವಾಧೀನದಲ್ಲಿದ್ದರು ಎಂದು ಊಹೆ ಮಾಡಿಕೊಳ್ಳಲಾಗುವುದಿಲ್ಲ.

105. ಅದಕ್ಕೆ ಪ್ರತಿಯಾಗಿ ಪ್ರತಿವಾದಿಯವರು ತಮ್ಮ ವಾದ ಮಂಡನೆಯ ಸಮಯದಲ್ಲಿ ಸದರೀ ಚಿನ್ನಪ್ಪ ಬಿನ್ ದೊಡ್ಡಹನುಮಂತರಾಯಪ್ಪನವರು ತಮ್ಮ ಜೀವಿತ ಕಾಲದಲ್ಲಿ ತನ್ನ ಸಹೋದರ ಮಗನಾದ ಲಕ್ಷ್ಮಣರೆಡ್ಡಿಯವರನ್ನು ದತ್ತುವಿಗೆ ತೆಗೆದುಕೊಂಡಿದ್ದರು ಮತ್ತು ತಮ್ಮ ಜೀವಿತ ಕಾಲದಲ್ಲೇ ತಮ್ಮ ಕೆಲವು ಸ್ವತ್ತುಗಳನ್ನು ಲಕ್ಷ್ಮಣರೆಡ್ಡಿಯವರಿಗೆ ನೀಡಿದ್ದರು, ಸದರೀ ಸ್ವತ್ತುಗಳ ಪೈಕಿ ಸದರೀ ದಾವಾ ಸ್ವತ್ತೂ ಸಹಾ ಸೇರಿರುತ್ತದೆ ಆದ್ದರಿಂದಲೇ

ಸದರೀ ಲಕ್ಷ್ಮಣರೆಡ್ಡಿಯವರು ತನ್ನ ಹಕ್ಕು ಅಧಿಕಾರದ ಮೇಲೆ ಸ ನಂ 63ಃ5ರಲ್ಲಿ ಸ ನಂ 61ಃ4ನ್ನು ಸೇರಿಸಿ ನಿ ಡಿ 3ರಂತೆ ಅಡಮಾನ ಪತ್ರವನ್ನು ಗಂಗಪ್ಪ ಬಿನ್ ಆದೆಪ್ಪನವರಿಗೆ ಅಡಮಾನ ಮಾಡಿದ್ದರು ನಂತರ ಅದೇ ಸ್ವತ್ತನ್ನು ಚಿನ್ನಪ್ಪ ಬಿನ್ ಗಂಗಪ್ಪನವರಿಗೆ ಮಾರಾಟ ಮಾಡಿದ್ದು ಆ ನಂತರ ಸದರೀ ಚಿನ್ನಪ್ಪನವರಿಂದ ತಾನು ನಿ ಡಿ 40 ರ ಮೂಲಕ ಖರೀದಿ ಮಾಡಿ ಅಂದಿನಿಂದ ತಾನೇ ಮಾಲೀಕನಾಗಿ ಸ್ವಾಧೀನಾನುಭವದಲ್ಲಿ ಇರುತ್ತೇನೆ ಎಂದು ನುಡಿದಿರುತ್ತಾರೆ.

106. ಅದಕ್ಕೆ ಸಹಕಾರಿಯಾಗಿ ಪ್ರತಿವಾದಿಯವರು ನಿ ಡಿ 3ರ ಅಡಮಾನ ಪತ್ರವನ್ನು ಮತ್ತು ನಿ ಡಿ 18 ಕ್ರಯ ಪತ್ರವನ್ನು ನಿ ಡಿ 40ರ ಕ್ರಯ ಪತ್ರವನ್ನು ಹಾಜರುಪಡಿಸಿರುತ್ತಾರೆ. ಈ ಮೂರೂ ಪತ್ರಗಳು ಒಂದೇ ಸ್ವತ್ತಿಗೆ ಸಂಬಂಧಿಸಿ ಆದ ವ್ಯವಹಾರದ ಬಗ್ಗೆ ನೊಂದಾಯಿತ ಪತ್ರಗಳಾಗಿದ್ದು, ಸದರೀ ನಿ ಡಿ 3 ಮತ್ತು ನಿ ಡಿ 40ರ ಪತ್ರಗಳಲ್ಲಿ ನಮೂದು ಮಾಡಿದ ಸ್ವತ್ತಿನ ಚಕ್ಕು ಬಂದಿಯಲ್ಲಿ ಹೊಂದಾಣಿಕೆ ಕಂಡು ಬರುತ್ತದೆ. ಅಂದರೆ ಸದರೀ ದಾಖಲೆಗಳ ಪ್ರಕಾರ ಸ ನಂ 63ಃ5ರ ಪೂರ್ವದಲ್ಲಿ ಎಲೆನಂಜಯ್ಯನವರ ಜಮೀನು ಇರುತ್ತದೆ ಎಂದು ನಮೂದು ಮಾಡಿದ್ದು, ಉಭಯ ಪಕ್ಷಗಾರರು ಒಪ್ಪಿಕೊಂಡಂತೆ ಸದರೀ ಎಲೆನಂಜಯ್ಯನವರಿಗೆ ಸೇರಿದ ಜಮೀನು ಎಂದರೆ ಸ ನಂ 61ಃ3 ಆಗಿರುತ್ತದೆ. ಆದರೆ ನಿ ಡಿ 18 ತತ್ಸಮಾನ ದಾಖಲೆಯಾದ ನಿ ಪಿ 13ರ ದಾಖಲೆಯಲ್ಲಿ ಮಾತ್ರ ಸ ನಂ 63ಃ5ರ ಸ್ವತ್ತಿನ ಪೂರ್ವದಲ್ಲಿ ನಮ್ಮ ಜಮೀನು ಎಂದು ನಮೂದು ಮಾಡಿರುತ್ತಾರೆ. ಆದರೆ, ಯಾವ ಸರ್ವೆ ನಂಬರ್ ಎಂದು ಸ್ಪಷ್ಟವಾಗಿ ನಮೂದು ಮಾಡಿರುವುದಿಲ್ಲ. ವಾದಿಯ ಪ್ರಕಾರ ನಿ ಡಿ 18ರ ದಾಖಲೆಯಲ್ಲಿ ನಮೂದು ಮಾಡಿದ ಪೂರ್ವದ ನಮ್ಮ ಜಮೀನು ಎಂದರೆ ಸ ನಂ 61ಃ4 ಆಗಿರುತ್ತದೆ ಎಂದು ತಿಳಿಸಿರುತ್ತಾರೆ. ಆದರೆ, ಆ ಬಗ್ಗೆ ಯಾವುದೇ ರೀತಿಯ ಸಾಕ್ಷ್ಯಾಧಾರವು ನ್ಯಾಯಾಲಯದ ಕಡತದಲ್ಲಿ ಕಾಣ ಸಿಗುವುದಿಲ್ಲ.

107. ಆದರೆ, ಪ್ರತಿವಾದಿಯ ವಾದಕ್ಕೆ ಸಹಕಾರಿಯಾಗಿ ಸ ನಂ 61ಃ3ಕ್ಕೆ ಸಂಬಂಧಿಸಿ ಆದ ವ್ಯವಹಾರದ ಕುರಿತು ನಿ ಡಿ 11, 25ರ ನೊಂದಾಯಿತ ಕ್ರಯ ಪತ್ರಗಳನ್ನು

ನೋಡಿದಾಗ ಮಾತ್ರ ಸ ನಂ 61ಃ3ರ ಪಶ್ಚಿಮ ಭಾಗದಲ್ಲಿ ಈ ದಾವೆಯ ಪ್ರತಿವಾದಿಯವರಾದ ಕೆ.ಹೆಚ್.ಸೋಮಶೇಖರರೆಡ್ಡಿಯವರ ಜಮೀನು ಇರುತ್ತದೆ ಎಂದು ಸ್ಪಷ್ಟವಾಗಿ ನಮೂದು ಮಾಡಿರುವುದು ಕಂಡು ಬರುತ್ತದೆ. ಅಂದರೆ ಸ ನಂ 61ಃ3ರ ಪಶ್ಚಿಮ ಭಾಗದಲ್ಲಿ ವಾದಿಯು ಇರುವುದಿಲ್ಲ, ಬದಲಾಗಿ ತನಗೆ ಸೇರಿದ ಜಮೀನಾದ ಸ ನಂ 63ಃ5ರಲ್ಲಿ ಸ ನಂ 61ಃ4 ಮಿಲೀನವಾಗಿರುತ್ತದೆ ಎಂಬ ಪ್ರತಿವಾದಿಯ ವಾದಕ್ಕೆ ಪುಷ್ಟೀ ನೀಡಿದಂತಾಗುತ್ತದೆ.

108. ಈ ಎಲ್ಲಾ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ, 1949ನೇ ಇಸವಿಯಲ್ಲಿ ಲಕ್ಷ್ಮಣರೆಡ್ಡಿಯವರು ಸ ನಂ 63ಃ5ಕ್ಕೆ ಸಂಬಂಧಿಸಿ ಸ್ವತ್ತನ್ನು ನಿ ಡಿ 3ರಂತೆ ಅಡಮಾನ ಮಾಡಿದಾಗಲೂ ಸಹಾ ಸ ನಂ 61ಃ4ನ್ನು ಸೇರಿಸಿ ಅಡಮಾನ ಮಾಡಿದ್ದರು ಎಂಬ ಅಂಶವು ಮತ್ತು ಚಿನ್ನಪ್ಪ ಬಿನ್ ಗಂಗಪ್ಪನವರು ನಿ ಡಿ 40ರಂತೆ ಪ್ರತಿವಾದಿಯ ಹೆಸರಿಗೆ ಕ್ರಯ ಪತ್ರ ಮಾಡಿಕೊಟ್ಟಾಗಲೂ ಸಹಾ ಸದರೀ ಸ ನಂ 63ಃ5ರಲ್ಲಿ ಸ ನಂಂ 61ಃ4ನ್ನು ಸೇರಿಸಿ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂಬುದು ಸ್ಪಪ್ಟವಾಗಿ ಕಂಡು ಬರುತ್ತದೆ.

109. ಮುಂದುವರಿದು ವಾದಿಯು ತನ್ನ ವಾದ ಮಂಡನೆಯ ಸಮಯದಲ್ಲಿ ನಿಡಿ 18ರ ಪ್ರಕಾರ ಸ ನಂ 63ಃ5ನ್ನು ಮಾತ್ರ ಪ್ರತಿವಾದಿಗೆ ಮಾತ್ರ ಮಾರಾಟ ಮಾಡಿರುತ್ತೇವೆ ಮತ್ತು ಸದರೀ ಸ್ವತ್ತಿನ ಚಕ್ಕು ಬಂದಿಯನ್ನು ಮಾತ್ರ ನಿ ಡಿ 18ರಲ್ಲಿ ನಮೂದು ಮಾಡಿರುತ್ತೇವೆ ಹೀಗಿರುವಾಗ ಚಿನ್ನಪ್ಪ ಬಿನ್ ಗಂಗಪ್ಪನವರು ನಿ ಡಿ 40 ರ ಪ್ರಕಾರ ತಪ್ಪು ಚಕ್ಕು ಬಂದಿಯನ್ನು ತೋರಿಸಿ ಪ್ರತಿವಾದಿಯವರಿಗೆ ಮಾರಾಟ ಮಾಡಿದ್ದಾರೆ ಎಂದ ಮಾತ್ರಕ್ಕೆ ಸದರೀ ಸ್ವತಿತನ ಹಕ್ಕು ಪ್ರತಿವಾದಿಗೆ ಹಸ್ತಾಂತರವಾಗುವುದಿಲ್ಲ ಎಂದು ವಾದಿಸಿರುತ್ತಾರೆ.

110. ಆದರೆ, ಇಲ್ಲಿ ನಾವು ಅತೀ ಮುಖ್ಯವಾಗಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ನಿಡಿ 18ರ ಕ್ರಯ ಪತ್ರವನ್ನು ರಾಮಪ್ಪ ಮತ್ತು ಲಕ್ಷ್ಮಣರೆಡ್ಡಿಯವರು ದಿಃ9.4.1964ರಲ್ಲಿ ಬರೆದುಕೊಟ್ಟಿರುತ್ತಾರೆ. ಆದರೆ, ನಿ ಡಿ 11ರ ದಾಖಲೆಯನ್ನು ಎಲ್ಲೆನಂಜಯ್ಯನವರ ಸೊಸೆಯಾದ ನಂಜಮ್ಮನವರು ಸ ನಂ 61ಃ3ಕ್ಕೆ ಸಂಬಂಧಿಸಿ 1985ನೇ ಇಸವಿಯಲ್ಲಿ ಅಂದರೆ ನಿ ಡಿ 18ರ ಕ್ರಯ ಪತ್ರವಾದ ಮೇಲೆ ಬರೆದುಕೊಟ್ಟಿರುವುದು ಕಂಡು

ಬರುತ್ತದೆ. ಅಂದರೆ, 1964ನೇ ಇಸವಿಯಲ್ಲಿ ಸದರೀ ರಾಮಪ್ಪ ಮತ್ತು ಲಕ್ಷ್ಮಣರೆಡ್ಡಿಯವರು ಸ ನಂ 63ಃ5ರಲ್ಲಿ ಸ ನಂ 61ಃ4ನ್ನು ಸೇರಿಸಿಯೇ ನಿ ಡಿ 18ರ ಕ್ರಯ ಪತ್ರವನ್ನು ಮಾಡಿಕೊಟ್ಟಿದ್ದು ಆ ನಂತರ ಸದರೀ ಸ್ವತತನ್ನು ನಿ ಡಿ 40ರ ಮೂಲಕ ಚಿನ್ನಪ್ಪನವರು ಪ್ರತಿವಾದಿಯವರಿಗೆ 1966ನೇ ಇಸವಿಯಲ್ಲಿ ಮಾಡಿ ಕೊಟ್ಟಿದ್ದರಿಂದಲೇ 1985ನೇ ಇಸವಿಯಲ್ಲಿ ಈ ದಾವೆಯ ಪ್ರತಿವಾದಿಯವರು ಸ ನಂ 61ಃ3ರ ಪಶ್ಚಿಮ ಭಾಗದಲ್ಲಿ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದು ನಿ ಡಿ 11ರ ಕ್ರಯ ಪತ್ರದಲ್ಲಿ ಸದರೀ ನಂಜಮ್ಮನವರು ನಮೂದು ಮಾಡಿರುತ್ತಾರೆ ಎಂಬುದನ್ನು ಊಹೆ ಮಾಡಿಕೊಳ್ಳಬಹುದಾಗಿದೆ.

111. ಅದೇ ರೀತಿ ನಿಡಿ 11ರ ದಾಖಲೆಯ ಆಧಾರದ ಮೇಲೆ ಸದರೀ ಸ ನಂ 61ಃ3ನ್ನು ಕೆ ಎನ್ ನಂಜಾರೆಡ್ಡಿಯವರು ನಿ ಡಿ 25ರ ಮೂಲಕ ವಾದಿಯ ತಂದೆಯ ತಮ್ಮನ ಮಗನಾದ ಚಿಕ್ಕಪ್ಪಯ್ಯ ನವರಿಗೆ 1986ನೇ ಇಸವಿಯಲ್ಲಿ ಮಾರಾಟ ಮಾಡಿದಾಗಲೂ ಸಹಾ, ಸ ನಂ 61ಃ3ರ ಪಶ್ಚಿಮ ಭಾಗದಲ್ಲಿ ಪ್ರತಿವಾದಿಯವರೇ ಸ್ವಾಧೀನಾನುಭವದಲ್ಲಿ ಇದ್ದುದ್ದರಿಂದ, ಪ್ರತಿವಾದಿಯ ಹೆಸರನ್ನು ಸದರೀ ಕೆ ಎನ್ ನಂಜಾರೆಡ್ಡಿ ಮತ್ತು ಸದರೀ ಚಿಕ್ಕಪ್ಪಯ್ಯ ನಿ ಡಿ 25ರ ದಾಖಲೆಯಲ್ಲಿ ಸ ನಂ 61ಃ3ರ ಪಶ್ಚಿಮ ಭಾಗದಲ್ಲಿ ತೋರಿಸಿರುತ್ತಾರೆ ಎಂದು ಊಹೆ ಮಾಡಿಕೊಳ್ಳಬಹುದಾಗಿದೆ.

112. ಮುಂದುವರಿದು ವಾದಿಯು ಕೇವಲ ನಿ ಡಿ 18 ತತ್ಸಮಾನ ದಾಖಲೆಯಾದ ನಿ ಪಿ 13ರ ದಾಖಲೆಯಲ್ಲಿ ಸ ನಂ 63ಃ5ರ ಪೂರ್ವ ಭಾಗದಲ್ಲಿ ನಮ್ಮ ಜಮೀನು ಎಂದು ತೋರಿಸಿದ ಮಾತ್ರಕ್ಕೆ ಸದರೀ ಪ್ರಸ್ತುತ ದಾವಾ ಸ್ವತ್ತೇ ಇರುತ್ತದೆ ಎಂದು ಹೇಳಲಾಗುವುದಿಲ್ಲ. ಮುಂದುವರಿದು, ವಾದಿಯ ಪರ ವಕೀಲರು ತಮ್ಮ ವಾದ ಮಂಡನೆಯ ಸಮಯದಲ್ಲಿ ಪ್ರತಿವಾದಿಯವರು ತಾವು ಸಲ್ಲಿಸಿದ ಸ್ವತ್ತಿನ ಚಕ್ಕು ಬಂದಿಯು ತಪ್ಪಾಗಿರುತ್ತದೆ ಅದು ನಿರ್ದಿಷ್ಟವಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಆದರೆ ಇಲ್ಲಿ ನಾವು ಗಮನಿಸಬೇಕಾದ ಅತೀ ಪ್ರಮುಖ ಅಂಶವೆಂದರೆ, ನಿ ಡಿ 3, 40ರ ನೊಂದಾಯಿತ ಪತ್ರಗಳ ಅನ್ವಯವೇ ಪ್ರತಿವಾದಿಯವರು ತಮ್ಮ ಚಕ್ಕು ಬಂದಿಯನ್ನು ತೋರಿಸಿರುತ್ತಾರೆ. ಅದೇ ರೀತಿ ನಿ ಡಿ 3

ಮತ್ತು ನಿ ಡಿ 40ರ ಕ್ರಯ ಪತ್ರಗಳಿಗೆ ನಿ ಡಿ 11, ನಿ ಡಿ 25 ಕ್ರಯಪತ್ರಗಳು ಸಹಾಯಕಾರಿಯಾಗಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಹೀಗಿರುವಾಗ, ಸದರೀ ಅ ದಾ ಸಂ 59ಃ2009ರಲ್ಲಿ ತೋರಿಸಿದ ಚಕ್ಕು ಬಂದಿಯು ನಿರ್ದಿಷ್ಟವಾಗಿರುವುದಿಲ್ಲ ಎಂಬ ವಾದಿಯ ವಾದವನ್ನು ನಂಬುವುದು ಸಮಂಜಸವಾಗಿರುವುದಿಲ್ಲ.

113. ಮುಂದುವರಿದು, ಸ ನಂ 63ಃ4ಕ್ಕೆ ಸಂಬಂಧಿಸಿ ಪ್ರತಿವಾದಿಯ ತಂದೆ ಕೆ.ಬಿ.ಹನುಮಂತರೆಡ್ಡಿಯವರು 1952ನೇ ಇಸವಿಯಲ್ಲಿ ನಿ ಡಿ 13ರಂತೆ ಕ್ರಯ ಮಾಡಿದ್ದು ಸದರೀ ಕ್ರಯಪತ್ರದನ್ವಯ ನಿ ಡಿ 51ರಲ್ಲಿ ಚಕ್ಕು ಬಂದಿಯನ್ನು ಸ್ಪಷ್ಟವಾಗಿ ನಮೂದು ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಅದೇ ರೀತಿ ಸ ನಂ 63ಃ5 ದಾವಾ ಸ್ವತ್ತಿನ ಪಶ್ಚಿಮಕ್ಕೆ ಇದ್ದು ಸ ನಂ 63ಃ4 ಉತ್ತರ ದಿಕ್ಕಿಗೆ ಇರುವ ಅಂಶ ಸದರೀ ಕ್ರಯಪತ್ರದಲ್ಲಿ ನಮೂದಾಗಿದೆ ಎಂದು ತಿಳಿಸಿರುತ್ತಾರೆ. ಆದರೆ, ಈಗಾಗಲೇ ಮೇಲೆ ವಿವರಿಸಿದಂತೆ ಸದರೀ ನಿ ಡಿ 13ರ ದಾಖಲೆಯಲ್ಲಿ ಪ್ರಸ್ತುತ ದಾವಾ ಸ್ವತ್ತಿನ ಬಗ್ಗೆ ಆಗಲೀ ಅಥವಾ ಸ ನಂ 63ಃ5ರ ಬಗ್ಗೆ ಆಗಲೀ ಯಾವುದೇ ರೀತಿಯ ಸ್ಪಷ್ಟ ವಿವರಣೆ ಇರುವುದಿಲ್ಲ. ಆದ್ದರಿಂದ ಆ ಬಗ್ಗೆ ಹೆಚ್ಚಿನ ವಿವರಣೆ ಅಗತ್ಯ ಇರುವುದಿಲ್ಲ.

114. ಮುಂದುವರಿದು ದಾವಾ ಸ್ವತ್ತು ಪ್ರತಿವಾದಿಗೆ ನೈಜ ಸ್ಥಿತಿಯಲ್ಲಿ ಹೇಗೆ ಬಂತು ಎಂದು ತೋರಿಸು ಯಾವುದೇ ಪುರಾವೆ ಇರುವುದಿಲ್ಲ ಎಂದು ವಾದಿಯು ವಾದಿಸಿರುತ್ತಾರೆ. ಆದರೆ, ಇಲ್ಲಿ ನಾವು ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ನಿಡಿ 40ರ ಪ್ರಕಾರ ಅದರಲ್ಲಿ ತೋರಿಸಿದ ಚಕ್ಕು ಬಂದಿಯ ಸ್ವತ್ತನ್ನು 1966ನೇ ಇವಿಯಲ್ಲಿಯೇ ಪ್ರತಿವಾದಿಯವರು ಖರೀದಿ ಮಾಡಿರುತ್ತಾರೆ ಮತ್ತು ಸದರೀ ಸ್ವತ್ತನ್ನು ಖರೀದಿ ಮಾಡಿದ ಮೇಲೆ ತಮ್ಮ ಜಮೀನಿನಲ್ಲಿ ಪ್ರತಿವಾದಿಯು ಮಾವು ಮತ್ತು ತೇಗದ ಗಿಡಗಳನ್ನು ನೆಟ್ಟಿರುತ್ತಾರೆ ಎಂಬ ಬಗ್ಗೆ ಪಹಣಿಗಳ ಮೂಲಕ ಮತ್ತು ಇತರೆ ಸಾಕ್ಷಿದಾರರ ಮೂಲಕ ಈಗಾಗಲೇ ರುಜುವಾತಾಗಿರುತ್ತದೆ. ಅಲ್ಲದೇ ಸ್ವತಃ ಪಾಟೀ ಸವಾಲಿನಲ್ಲಿ ಪಿಡಬ್ಲ್ಯೂ 1 ರವರು ಒಪ್ಪಿಕೊಂಡಂತೆ ಪ್ರತಿವಾದಿಯು ಈಗಾಗಲೇ ಸದರೀ ಸ್ವತ್ತಿಗೆ ಬೇಲಿಯನ್ನು ಸಹಾ ಹಾಕಿಕೊಂಡಿರುತ್ತಾರೆ.

115. ಈ ಎಲ್ಲಾ ಅಂಶಗಳನ್ನು ನೋಡಿದಾಗ, ಪ್ರತಿವಾದಿಯವರೇ ಸದರೀ ನಿ ಡಿ 40ರಲ್ಲಿ ತೋರಿಸಿದ ಚಕ್ಕು ಬಂದಿಯ ಸ್ವತ್ತಿನಲ್ಲಿ ಮಾಲೀಕತ್ವವನ್ನು ಹೊಂದಿ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ. ಹೀಗಿರುವಾಗ, ಚಿನ್ನಪ್ಪ ಬಿನ್ ದೊಡ್ಡಹನುಮಂತಪ್ಪನವರಿಂದ ಅವರ ಮಗನಾದ ರಾಮಪ್ಪನವರ ಹೆಸರಿಗೆ ಖಾತೆ ಬದಲಾವಣೆ ಆಗದೇ ಹಲವಾರು ವರ್ಷಗಳ ನಂತರ ನೇರವಾಗಿ ವಾದಿಯ ಹೆಸರಿಗೆ ದಾವಾ ಸ್ವತ್ತಿನ ಕುರಿತು ಖಾತೆ ಬದಲಾವಣೆ ಆಗಿದ ಎಂದ ಮಾತ್ರಕ್ಕೆ, ಸದರೀ ಸ್ವತ್ತು ವಾದಿಗೆ ಬಂದಿದೆ ಎಂದು ಹೇಳಲಾಗುವುದಿಲ್ಲ. ಕಾರಣ, ಸದರೀ ಚಿನ್ನಪ್ಪ ಬಿನ್ ದೊಡ್ಡಹನುಮಂತಪ್ಪನವರ ಮರಣಾ ನಂತರ ಅವರ ಮಗ ರಾಮಪ್ಪನವರು 40 ವರ್ಷಗಳ ಕಾಲ ಸ್ವಾಧೀನದಲ್ಲಿದ್ದರು ಎಂಬ ವಾದಿಯ ವಾದಕ್ಕೆ ಯಾವುದೇ ಒಂದು ಸಣ್ಣ ದಾಖಲೆಯೂ ಸಹಾ ನ್ಯಾಯಾಲಯದ ಕಡತದಲ್ಲಿ ಕಾಣಸಿಗುವುದಿಲ್ಲ. ಹೀಗಿರುವಾಗ, ಸದರೀ 40 ವರ್ಷಗಳ ಕಾಲ ವಾದಿಯ ತಂದೆಯಾದ ರಾಮಪ್ಪನವರು ಸ್ವಾಧೀನದಲ್ಲಿದ್ದರು ಎಂದು ಹೇಳಲಾಗುವುದಿಲ್ಲ.

116. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಪ್ರಸ್ತುತ ಸ ನಂ 61ಃ4ಕ್ಕೆ ಸಂಬಂಧಿಸಿ ವಾದಿಯು ಖಾತೆಯನ್ನು ತನ್ನ ಹೆಸರಿಗೆ 1983-84ನೇ ಇಸವಿಯಲ್ಲಿ ಮಾಡಿಸಿಕೊಂಡಿರುತ್ತಾರೆ. ಆದರೆ, ಸ ನಂ 63ಃ5ರಲ್ಲಿ ಸ ನಂ 61ಃ4ನ್ನು ಸೇರಿಸಿ ಮಾರಾಟ ಮಾಡಿದ ಸ್ವತ್ತನ್ನು 1966ನೇ ಇಸವಿಯಲ್ಲಿಯೇ ಪ್ರತಿವಾದಿಯು ಖರೀದಿ ಮಾಡಿರುತ್ತಾರೆ. ಅಂದರೆ, ವಾದಿಯ ಹೆಸರಿಗೆ ಖಾತೆ ಬದಲಾವಣೆ ಆಗುವುದಕ್ಕಿಂತ ಮುಂಚಿತವಾಗಿ ಪ್ರತಿವಾದಿಯವರು ಸದರೀ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇದ್ದರು ಎಂಬುದು ಕಂಡು ಬರುತ್ತದೆ. ಕೇವಲ ತಮ್ಮ ತಾತನ ಹೆಸರಿನಲ್ಲಿ ಖಾತೆ ಇತ್ತು ಎಂಬ ಅಂಶವನ್ನು ಆಧಾರವಾಗಿ ಇಟ್ಟುಕೊಂಡು ತಮ್ಮ ಹೆಸರಿಗೆ ಖಾತೆಯನ್ನು ಬದಲಾಯಿಸಿಕೊಂಡ ಮಾತ್ರಕ್ಕೆ, ದಾವಾ ಸ್ವತ್ತಿನ ಕುರಿತು ಹಕ್ಕು ಅಧಿಕಾರ ಸ್ವಾಧೀನ ವಾದಿಗೆ ಹಸ್ತಾಂತರವಾಗಿರುತ್ತದೆ ಎಂದು ಹೇಳಲಾಗುವುದಿಲ್ಲ. ಕಾರಣ, ವಾದಿಯು ತನ್ನ ದಾವೆಗೆ ಸಹಕಾರಿಯಾಗಿ ಕೇವಲ ಕಂದಾಯ ದಾಖಲೆಗಳನ್ನು ಮಾತ್ರ ಹಾಜರು ಪಡಿಸಿರುತ್ತಾರೆ ಹೊರತು, ಸದರೀ ಸ್ವತ್ತಿನ ಹಕ್ಕನ್ನು

ರುಜುವಾತು ಪಡಿಸುವಂತಹ ಯಾವುದೇ ಒಂದು ಸಣ್ಣ ದಾಖಲೆಯೂ ಸಹಾ ನ್ಯಾಯಾಲಯದ ಕಡತದಲ್ಲಿ ಕಾಣಸಿಗುವುದಿಲ್ಲ. ಹೀಗಿರುವಾಗ, ವಾದಿಯ ವಾದವನ್ನು ನಂಬುವುದು ಸಮಂಜಸವಾಗಿರುವುದಿಲ್ಲ.

117. ಮುಂದುವರಿದು, ನಿ ಪಿ 13 ತತ್ಸಮಾನ ದಾಖಲೆಯಾದ ನಿ ಡಿ 18ನ್ನು ಚಿನ್ನಪ್ಪನ ಮಕ್ಕಳಾದ ರಾಮಪ್ಪ ಮತ್ತು ಲಕ್ಷ್ಮಣರೆಡ್ಡಿಯವರು ಚಿನ್ನಪ್ಪ ಬಿನ್ ದೊಡ್ಡ ಗಂಗಪ್ಪನವರಿಗೆ 1964ನೇ ಇಸವಿಯಲ್ಲಿ ಮಾರಾಟ ಮಾಡಿರುವುದು ಕಂಡು ಬರುತ್ತದೆ. ಆದರೆ ವಾದಿಯು ತನ್ನ ಮುಖ್ಯ ವಿಚಾರಣೆಯನ್ನು ನೀಡುವ ಸಮಯದಲ್ಲಿ ಸದರೀ ದಾಖಲೆಯನ್ನು ಗುರ್ತಿಸುವ ಸಂದರ್ಭದಲ್ಲಿ ಸದರೀ ಸ ನಂ 63:5ನ್ನು ನಿ ಪಿ 13ರಂತೆ ರಾಮಪ್ಪ ಮತ್ತು ಲಕ್ಷ್ಮಪ್ಪನವರು ತನ್ನ ತಾತನಾದ ಚಿನ್ನಪ್ಪನವರಿಗೆ ಮಾಡಿಕೊಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. ಈ ಅಂಶವನ್ನು ನೋಡಿದಾಗ, ವಾದಿಯು ವಿನಾ ಕಾರಣ ವಾದವನ್ನು ಮಂಡಿಸುತ್ತಿರುತ್ತಾರೆ ಎಂದು ಅರ್ಥವಾಗುತ್ತದೆ. ಕಾರಣ, ವಾದಿಯು ಸ್ವತಃ ಒಪ್ಪಿಕೊಂಡಂತೆ ತನ್ನ ತಾತ ಚಿನ್ನಪ್ಪ ದೊಡ್ಡಹನುಮಂತರಾಯಪ್ಪನವರ ಮಗನಾಗಿರುತ್ತಾರೆ. ಆದರೆ, ನಿ ಪಿ 13ರ ದಾಖಲೆಯನ್ನು ದೊಡ್ಡಗಂಗಪ್ಪ ಬಿನ್ ಚಿನ್ನಪ್ಪನವರಿಗೆ ವಾದಿಯ ತಂದೆ ಮತ್ತು ಆತನ ಚಿಕ್ಕಪ್ಪನಾದ ಲಕ್ಷ್ಮಣರೆಡ್ಡಿಯವರು ಮಾರಾಟ ಮಾಡಿರುತ್ತಾರೆ. ಸದರೀ ಅಂಶವನ್ನು ನೋಡಿದಾಗ, ವಾದಿಯ ಕ್ಲೇಮು ಸತ್ಯಾಂಶದಿಂದ ಮರೆಮಾಚಿದ್ದು ಎಂಬುದು ಸ್ಪಷ್ಟವಾಗುತ್ತದೆ.

118. ಅಲ್ಲದೇ, ಇಲ್ಲಿ ನಾವು ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಪಿಡಬ್ಲ್ಯೂ 1ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತನ್ನ ತಾತನಾದ ಚಿನ್ನಪ್ಪನವರು ಲಕ್ಷ್ಮಣರೆಡ್ಡಿಯವರನ್ನು ದತ್ತುಗೆ ತೆಗೆದುಕೊಂಡಿದ್ದರು ಎಂದು ಒಂದು ಬಾರಿ ಹೇಳಿದರೆ, ಸದರೀ ಲಕ್ಷ್ಮಣರೆಡ್ಡಿ ತನಗೆ ಗೊತ್ತಿರುವುದಿಲ್ಲ ಎಂದು ಮತ್ತೊಂದು ಬಾರಿ ಹೇಳುತ್ತಾರೆ. ಈ ಅಂಶವನ್ನು ನೋಡಿದಾಗ, ವಾದಿಯು ತನ್ನ ಹೇಳಿಕೆಯ ಮೇಲೆ ತಾನು ನಿಂತಿರುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಅಲ್ಲದೇ ಸದರೀ ಚಿನ್ನಪ್ಪ ಬಿನ್ ದೊಡ್ಡಹನುಮಂತಪ್ಪರಾಯಪ್ಪ ರವರು ತಮ್ಮ ಜೀವಿತ ಕಾಲದಲ್ಲಿ ಕೆಲವು ಸ್ವತ್ತುಗಳನ್ನು ಲಕ್ಷ್ಮಣರೆಡ್ಡಿಯವರಿಗೆ ನೀಡಿದ್ದರು ಎಂಬ ಅಂಶವನ್ನು

ಸ್ವತಃ ವಾದಿಯವರೇ ಒಪ್ಪಿಕೊಂಡಿರುತ್ತಾರೆ. ಹೀಗಿರುವಾಗ, ಸದರೀ ಸ್ವತ್ತಿನಲ್ಲಿ ವಾದಿಯಾದ ತನಗಾಗಲೀ ಮತ್ತು ತನ್ನ ತಂದೆಗಾಗಲೀ ಯಾವ ರೀತಿಯ ಹಕ್ಕು ಲಭಿಸುತ್ತದೆ ಎಂಬ ಪ್ರಶ್ನೆ ಉದ್ಭವಿಸುತ್ತದೆ.

119. ಮುಂದುವರಿದು ವಾದಿಯ ಪಾಟೀ ಸವಾಲನ್ನು ಸೂಕ್ಷ್ಮವಾಗಿ ಗಮನಿಸಿದಾಗ, ದಾವಾ ಸ್ವತ್ತಿನ ಕುರಿತು ಮತ್ತು ದಾವಾ ಸ್ವತ್ತಿನ ಅಕ್ಕಪಕ್ಕದ ಜಮೀನಿನ ಕುರಿತು ಮತ್ತು ಸ್ವತ್ತಿನ ಚಕ್ಕು ಬಂದಿಯ ಕುರಿತು ಪ್ರತಿವಾದಿಯ ಪರ ವಕೀಲರು ಹೊರಡಿಸಿದ ಯಾವುದೇ ಸೂಚನೆಗೆ ಸಾಕ್ಷಿಯು ಸ್ಪಷ್ಟವಾಗಿ ಉತ್ತರಿಸದೇ ಗೊತ್ತಿಲ್ಲ ಎಂದು ಪುನಃಪುನಃ ಉತ್ತರಿಸಿರುವುದು ವಾದಿಯ ವಾದದ ಮೇಲೆ ಸಂಶಯ ಉಂಟಾಗುತ್ತದೆ. ಕಾರಣ, ಒಂದು ವೇಳೆ ಸ ನಂ 61:4ರಲ್ಲಾಗಲೀ ಅಥವಾ ಇತರೆ ಯಾವುದೇ ಸ್ವತಿತನಾಗಲೀ ವಾದಿಯು ಸ್ವಾಧೀನಾನುಭವದಲ್ಲಿ ಇದ್ದದ್ದೇ ಆಗಿದ್ದರೆ, ಸದರೀ ಸ್ವತ್ತಿನ ಬಗ್ಗೆ ಮತ್ತು ಅಕ್ಕಪಕ್ಕದ ಸ್ವತ್ತುಗಳ ಬಗ್ಗೆ ಸರ್ವೆ ಸಾಮಾನ್ಯವಾಗಿ ಮಾಹಿತಿ ಇರುತ್ತಿತ್ತು, ಆದ್ದರಿಂದ ಸದರೀ ಸ ನಂ 61:4ರಲ್ಲಿ ವಾದಿಯು ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

120. ಮುಂದುವರಿದು ಸನಂ 61:4ರ ಪೂರ್ವ ಭಾಗದಲ್ಲಿರುವ ಸ ನಂ 61:3 ಮೂಲತಃ ಎಲೆನಂಜಯ್ಯನವರಿಗೆ ಸೇರಿತ್ತು ಎಂಬ ಸೂಚನೆಗೂ ಸಹಾ ಸಾಕ್ಷಿಯು ಗೊತ್ತಿಲ್ಲ ಎಂದು ಉತ್ತರಿಸಿರುವುದು ವಾದಿಯ ಸ್ವಾಧೀನಾನುಭವದ ಮೇಲೆ ಸಂಶಯ ಉಂಟಾಗುತ್ತದೆ. ಅಲ್ಲದೇ, ಸ ನಂ 61:4ರ ಅಕ್ಕಪಕ್ಕದ ಜಮೀನುಗಳ ವ್ಯವಹಾರದ ಬಗ್ಗೆಯೂ ಸಹಾ ತನಗೆ ಗೊತ್ತಿಲ್ಲ ಎಂದು ಪಾಟೀ ಸವಾಲಿನಲ್ಲಿ ತಿಳಿಸಿದ್ದು, ಮತ್ತಷ್ಟು ಸಂಶಯಕ್ಕೆ ಕಾರಣವಾಗಿರುತ್ತದೆ. ಅಲ್ಲದೇ, ಸಾಕ್ಷಿಯನ್ನು ಪಾಟೀ ಸವಾಲಿಗೆ ಗುರಿಪಡಿಸಿದಾಗ, ಪಿಡಬ್ಲ್ಯೂ 1ರವರಿಗೆ ದಾವಾ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ನೋಡಿ ಓದಲು ತಿಳಿಸಿದಾಗಲೂ ಸಹಾ, ಸದರೀ ದಾಖಲೆಗಳನ್ನು ಓದಲು ಮತ್ತು ನೋಡಲೂ ನಿರಾಕರಿಸಿರುವುದು ನ್ಯಾಯಾಲಯದ ಗಮನಕ್ಕೆ ಬಂದಿರುತ್ತದೆ. ಈ ಎಲ್ಲಾ ಅಂಶಗಳನ್ನು ನೋಡಿದಾಗ, ವಾದಿಯು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇರುವ ಬಗ್ಗೆ ಸಂಶಯ ಉಂಟಾಗುತ್ತದೆ.

121. ಮುಂದುವರಿದು, ಲಕ್ಷ್ಮಣರೆಡ್ಡಿ ಉರುಫ್ ಲಕ್ಷ್ಮಪ್ಪ ನನ್ನು ತಾನು ನೋಡಿರುವುದಿಲ್ಲ ಎಂದು ನುಡಿದಿದ್ದು, ಸದರೀ ಲಕ್ಷ್ಮಣರೆಡ್ಡಿ ಮತ್ತು ತಮ್ಮ ತಂದೆ ಕೆಲವು ಸ್ವತ್ತುಗಳನ್ನು ಚೀಗಟಗೆರೆ ಚಿನ್ನಪ್ಪನಿಗೆ ಮಾರಾಟ ಮಾಡಿದ್ದರು ಎಂಬ ಅಂಶವನ್ನು ಒಪ್ಪಿಕೊಂಡಿರುತ್ತಾರೆ. ಆದರೆ, ಸದರೀ ರಾಮಪ್ಪ ಮತ್ತು ಲಕ್ಷ್ಮಣರೆಡ್ಡಿಯವರು ನಿ ಪಿ 13ರ ಮೂಲಕ ಚಿನ್ನಪ್ಪನವರಿಗೆ ಮಾರಾಟ ಮಾಡಿದ ಕ್ರಯ ಪತ್ರವನ್ನು ಮಾತ್ರ ಅಲ್ಲಗಳೆದಿರುತ್ತಾರೆ. ಈ ಅಂಶವನ್ನು ನೋಡಿದಾಗ, ವಾದಿಯ ವಾದದ ಮೇಲೆ ಸಾಕಷ್ಟು ಅನುಮಾನ ಉಂಟಾಗುತ್ತದೆ.

122. ಮುಂದುವರಿದು, ತನ್ನ ಜಮೀನಿಗೆ ಪ್ರತಿವಾದಿಯ ಜಮೀನಿನ ಮೂಲಕವೇ ಹಾದು ಹೋಗಬೇಕಾಗಿರುತ್ತದೆ ಎಂಬ ಅಂಶವನ್ನು ಸಾಕ್ಷಿಯು ಸ್ವತಃ ಒಪ್ಪಿಕೊಂಡಿದ್ದು, ಈ ಅಂಶದ ಕುರಿತು ಪ್ರತಿವಾದಿಯ ಪರ ವಕೀಲರು ತಮ್ಮ ವಾದ ಮಂಡನೆಯಲ್ಲಿ ತಾವು ತಮ್ಮ ಜಮೀನಿಗೆ ಬೇಲಿಯನ್ನು ಹಾಕಿಕೊಂಡ ಕಾರಣ ವಾದಿಗೆ ತಮ್ಮ ಜಮೀನಿಗೆ ಹೋಗಲು ದಾರಿಯ ತೊಂದರೆ ಆಗಿದ್ದರಿಂದ ಈ ರೀತಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆ. ಸದರೀ ಮುಳ್ಳು ತಂತಿಯನ್ನು ಹಾಕುವ ಸಮಯದಲ್ಲಿ ವಾದಿಯು ತಮ್ಮ ಕಾರ್ಯಕ್ಕೆ ಅಡ್ಡಿಪಡಿಸಿದ್ದರು ಆ ಕುರಿತು ನಿ ಡಿ 26ರಂತೆ ಪಿರ್ಯಾದನ್ನು ನೀಡಲಾಗಿತ್ತು ಎಂದು ತಿಳಿಸಿದ್ದು, ಸದರೀ ತಂತಿಯನ್ನು ಹಾಕುವ ಸಮಯದಲ್ಲಿ ಅಡ್ಡಿಪಡಿಸಿದ ಬಗ್ಗೆ ಸ್ವತಃ ಪಿಡಬ್ಲ್ಯೂ 1ರವರೇ ತಮ್ಮ ಪಾಟೀ ಸವಾಲಿನಲ್ಲಿ ಒಪ್ಪಿಕೊಂಡಿರುತ್ತಾರೆ. ಅಲ್ಲದೇ, ಸಾಕ್ಷಿಯು ನಿ ಡಿ 1ರಲ್ಲಿ ತೋರಿಸಿರುವ ಜಮೀನಿಗೆ ಹಾಕಿದ ಮುಳ್ಳು ತಂತಿಯ ಬಗ್ಗೆ ಒಪ್ಪಿಗೆ ಸೂಚಿಸಿದ್ದು, ಪ್ರತಿವಾದಿಯು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿರುತ್ತಾರೆ ಎಂಬ ಬಗ್ಗೆ ಮತ್ತಷ್ಟು ಪುಷ್ಟೀ ಕೊಡುತ್ತದೆ.

123. ಮುಂದುವರಿದು, ಪಿಡಬ್ಲ್ಯೂ 1 ರವರು ತಮ್ಮ ಪಾಟೀ ಸವಾಲಿನ 12ನೇ ಪುಟದ ಮೊದಲನೇ ಖಂಡಿಕೆಯಲ್ಲಿ ತಮ್ಮ ತಾತ ಲಕ್ಷ್ಮಣರೆಡ್ಡಿಯರಿಗೆ ಕೆಲವು ಸ್ವತ್ತುಗಳನ್ನು ನೀಡಿದ್ದರು ಎಂಬುದು ತನಗೆ ಗೊತ್ತಿಲ್ಲ ಎಂದು ನುಡಿದಿದ್ದು, ಅದೇ ತನ್ನ ಪಾಟೀ ಸವಾಲಿನ 17ನೇ ಪುಟದ 2ನೇ ಖಂಡಿಕೆಯ ಮೊದಲನೇ ಭಾಗದಲ್ಲಿ ತಮ್ಮ ತಾತ ಲಕ್ಷ್ಮಣರೆಡ್ಡಿಯವರಿಗೆ

ಕೆಲವು ಸ್ವತ್ತುಗಳನ್ನು ಕೊಟ್ಟಿದ್ದರು ಎಂಬ ಅಂಶವನ್ನು ಸ್ವತಃ ಒಪ್ಪಿಕೊಂಡಿರುತ್ತಾರೆ. ಆದರೆ ಆ ಸಮಯದಲ್ಲಿ ಸ ನಂ 63:5ನ್ನು ಕೊಟ್ಟಿರುತ್ತಾರೋ ಇಲ್ಲವೋ ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಮುಂದುವರಿದು ತನ್ನ ಪಾಟೀ ಸವಾಲಿನ 17ನೇ ಪುಟದ ಕೆಳಗಿನಿಂದ 5ನೇ ಸಾಲನ್ನು ಗಮನಿಸಿದಾಗ, ಈ ಕೆಳಗಿನಂತೆ ಉತ್ತರಿಸಿರುವುದು ಕಂಡು ಬರುತ್ತದೆ.

¸ £A N!?V]£¥£ª&0 3SÁ¥Ã_ÄAz GA(gÄ+z .Azg 0Æw®9

124. ಈ ಅಂಶವನ್ನು ನೋಡಿದಾಗ ಸ ನಂ 61:4 ಚಿನ್ನಪ್ಪನವರಿಗೆ ಹೇಗೆ ಬಂತು ಎಂಬ ಬಗ್ಗೆಯೇ ತನಗೆ ಗೊತ್ತಿಲ್ಲ ಎಂದಾದಾಗ, ಸದರೀ ಸ್ವತ್ತಿನ ಬಗ್ಗೆ ವಾದಿಗೆ ಯಾವ ರೀತಿ ಮಾಹಿತಿ ಇರುತ್ತದೆ ಎಂಬ ಬಗ್ಗೆ ಅನುಮಾನ ಉಂಟಾಗುತ್ತದೆ. ಅಲ್ಲದೇ ದಾವಾ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಓದಲು ನಿರಾಕರಿಸಿರುವುದು ಮತ್ತಷ್ಟು ಅನುಮಾನ ಉಂಟು ಮಾಡುತ್ತದೆ. ಮುಂದುವರಿದು ಪುನಃ ತನ್ನ ಪಾಟೀ ಸವಾಲಿನ 18ನೇ ಪುಟದ ಮದ್ಯ ಭಾಗದಲ್ಲಿ ಲಕ್ಷ್ಮಣರೆಡ್ಡಿ ಯಾರು ಎಂದು ತನಗೆ ಗೊತ್ತಿಲ್ಲ ಎಂದು ಹೇಳಿದ ವಾದಿಯ ಹೇಳಿಕೆಯ ಮೇಲೆ ಮತ್ತಷ್ಟು ಅನುಮಾನ ಉಂಟಾಗುತ್ತದೆ.

125. ಮುಂದುವರಿದು ಇಲ್ಲಿ ಅತೀ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಲಕ್ಷ್ಮಣರೆಡ್ಡಿಯವರು 1949ನೇ ಇಸವಿಯಲ್ಲಿ ಸ್ವತ್ತನ್ನು ಅಡಮಾನ ಮಾಡಿದ್ದರು ಗೊತ್ತಿಲ್ಲ ಎಂಬ ಅಂಶ ಮತ್ತು ಸದರೀ ಸ್ವತ್ತನ್ನೇ 1964ರಲ್ಲಿ ಲಕ್ಷ್ಮಣರೆಡ್ಡಿ ಮತ್ತು ರಾಮಪ್ಪ ಸೇರಿ ಚಿನ್ನಪ್ಪನವರಿಗೆ ಮಾರಾಟ ಮಾಡಿರುತ್ತಾರೆ ಎಂಬ ಅಂಶ ತನಗೆ ಗೊತ್ತಿಲ್ಲ ಎಂದು ನುಡಿದಿರುವುದು, ವಾದಿಯಹು ವಾದದ ಮೇಲೆ ಅನುಮಾನ ಉಂಟಾಗುತ್ತದೆ. ಕಾರಣ, ದಾವಾ ಸ್ವತ್ತು ತನ್ನದು ಎಂದು

ಹೇಳುತ್ತಿರುವಾಗ, ಸದರೀ ಸ್ವತ್ತಿನ ಬಗ್ಗೆ ಅದ ವ್ಯವಹಾರದ ಬಗ್ಗೆ ತನಗೆ ಮಾಹಿತಿ ಇಲ್ಲಾ ಎಂದಾದಗ, ಸದರೀ ಸ್ವತ್ತಿನ ಕುರಿತು ಯಾವ ರೀತಿಯ ಹಕ್ಕು ವಾದಿಗೆ ಇರಲು ಸಾದ್ಯ ಎಂಬ ಸಂಶಯ ಉಂಟಾಗುತ್ತದೆ. ಅಲ್ಲದೇ ಸದರೀ ಪುಟದಲ್ಲಿಯೇ ಪ್ರತಿವಾದಿಯವರು ತಾವು ಕ್ರಯಕ್ಕೆ ಪಡೆದ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂಬ ಅಂಶವನ್ನು ಸ್ವತಃ ಒಪ್ಪಿಕೊಂಡಿದ್ದು, ಈ ಅಂಶವನ್ನು ನೋಡಿದಾಗ, ಪ್ರತಿವಾದಿಯವರು ನಿ ಡಿ 40ರಲ್ಲಿ ಸ್ವತ್ತಿಗೆ ತೋರಿಸಿದ ಚಕ್ಕು ಬಂದಿಯ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ. ದಾವಾ ಸ್ವತ್ತಿನ ಕುರಿತು ಕಂದಾಯ ದಾಖಲೆಗಳನ್ನು ಸೃಷ್ಟೀ ಮಾಡಿರುತ್ತಾರೆ ಎಂಬ ಸೂಚನೆಯನ್ನು ಸಾಕ್ಷಿಯು ಅಲ್ಲಗಳೆದಿರುತ್ತಾರೆ. ಅದೇ ರೀತಿ ತನ್ನ ತಾತ ಚಿನ್ನಪ್ಪ ಆ ನಂತರ ಅವರ ತಂದೆ ರಾಮಪ್ಪ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದರು ಎಂಬ ಬಗ್ಗೆ ಯಾವುದೇ ದಾಖಲೆಯನ್ನು ತಾನು ಹಾಜರುಪಡಿಸಿಲ್ಲ ಎಂಬ ಅಂಶವನ್ನು ಸಾಕ್ಷಿಯೇ ಪಾಟೀ ಸವಾಲಿನ 20ನೇ ಪುಟದಲ್ಲಿ ಒಪ್ಪಿಕೊಂಡಿರುತ್ತಾರೆ.

126. ಮುಂದುವರಿದು ಸ್ವತಃ ಪಿಡಬ್ಲ್ಯೂ 1 ರವರೇ ದಾವಾ ಸ್ವತ್ತಿನಲ್ಲಿ ತಾನು ಬೋರ್‌ವೆಲ್‌ನ್ನು ಹಾಕಿಸಿರುತ್ತೇನೆ ಎಂಬ ಸೂಚನೆಯನ್ನು ಅಲ್ಲಗಳೆದಿರುತ್ತಾರೆ. ಆದರೆ ತಮ್ಮ ಜಮೀನಿನಲ್ಲಿ ಪ್ರತಿವಾದಿಯವರು ನೀರನ್ನು ಹಾಯಿಸಲು ಪೈಪ್ ಲೈನ್ ಹಾಕಿರುತ್ತಾರೆ ಎಂಬ ಅಂಶವನ್ನು ಸ್ವತಃ ತಿಳಿಸಿರುತ್ತಾರೆ. ಈ ಅಂಶವನ್ನು ನೋಡಿದಾಗ, ಒಂದು ವೇಳೆ ವಾದಿ ಮತ್ತು ಪ್ರತಿವಾದಿಯ ನಡುವೆ ವೈಮನಸ್ಯ ಇದ್ದುದ್ದೇ ಆಗಿದ್ದಲ್ಲಿ, ಸದರೀ ವಾದಿಗೆ ಸೇರಿದ ಜಮೀನಿನಲ್ಲಿ ಪ್ರತಿವಾದಿಯು ಹೇಗೆ ಪೈಪ್‌ಲೈನ್ ಹಾಕಲು ಸಾದ್ಯ ಎಂಬ ಸಂಶಯ ಉಂಟಾಗುತ್ತದೆ. ಕಾರಣ, ವಾದಿಯು ತಾನೇ ಹೇಳುವಂತೆ ಪ್ರತಿವಾದಿಯು ತನ್ನ ಜಮೀನಿನಲ್ಲಿ ಪೈಪ್ ಲೈನ್ ಹಾಕಿರುತ್ತಾರೆ ಎಂದು ನುಡಿದಿರುತ್ತಾರೆ. ಆದರೆ ಅದಕ್ಕೆ ಪ್ರತಿಯಾಗಿ, ಪ್ರತಿವಾದಿಯು ತನ್ನ ಜಮೀನಿನಲ್ಲಿ ತಾನು ಪೈಪ್‌ಲೈನ್ ಹಾಕಿ ಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಅದೇ ರೀತಿ ಡಿ ಡಬ್ಲ್ಯೂ 2 ರಿಂದ 4 ರವರೊಂದಿಗೆ ಯಾವುದೇ ರೀತಿಯ ವೈಶಮ್ಯ ಇರುವುದಿಲ್ಲ ಎಂದು ಒಪ್ಪಿಕೊಂಡಿದ್ದು, ಆದರೆ ಸದರೀ ಡಿಡಬ್ಲ್ಯೂ 2 ರಿಂದ 4ರವರು

ಸ ನಂ 61:4ರಲ್ಲಿ ಪ್ರತಿವಾದಿಯವರೇ ಮಾಲೀಕರಾಗಿ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದು ಸ್ಪಷ್ಟವಾಗಿ ನುಡಿದಿರುವುದು ಕಂಡು ಬರುತ್ತದೆ.

127. ಮುಂದುವರಿದು ಪಿಡಬ್ಲ್ಯೂ 2 ಮತ್ತು 3 ರವರು ವಾದಿಯ ವಾದಕ್ಕೆ ಸಹಕಾರಿಯಾಗಿ ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರೀ ಪ್ರಮಾಣ ಪತ್ರಗಳನ್ನು ಸೂಕ್ಷ್ಮವಾಗಿ ಪರಿಗಣಿಸಿದಾಗ, ದಾವಾ ಸ್ವತ್ತಿಗೆ ಸಂಬಂಧಿಸಿದ ಕಂದಾಯ ದಾಖಲೆಗಳನ್ನು ನೋಡಿ ದಾವಾ ಸ್ವತ್ತಿಗೆ ವಾದಿಯೇ ಮಾಲೀಕರಾಗಿರುತ್ತಾರೆ ಎಂದು ನುಡಿಯುತ್ತಿದ್ದೇವೆ ಎಂದು ತಿಳಿಸಿರುತ್ತಾರೆ. ಈ ಅಂಶವನ್ನು ನೋಡಿದಾಗ ಪಿಡಬ್ಲ್ಯೂ 2 ಮತ್ತು 3 ರವರು ದಾವಾ ಸ್ವತ್ತನ್ನು ಪ್ರತ್ಯಕ್ಷವಾಗಿ ನೋಡಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಅದಕ್ಕೆ ಸಹಕಾರಿಯಾಗಿ ಸದರಿಯವರನ್ನು ಪಾಟೀ ಸವಾಲಿಗೆ ಗುರಿಪಡಿಸಿದಾಗಲೂ ಸಹಾ ದಾವಾ ಸ್ವತ್ತಿನ ವಿಚಾರವಾಗಿ ಸರಿಯಾಗಿ ಮಾಹಿತಿಯನ್ನು ನೀಡಲು ಸಾಕ್ಷಿದಾರರು ವಿಫಲರಾಗಿರುತ್ತಾರೆ. ಕೇವಲ ದಾಖಲೆಗಳ ಆಧಾರದ ಮೇರೆಗೆ ಸಾಕ್ಷ್ಯವನ್ನು ನುಡಿಯಲು ಬಂದವರು ದಾವಾ ಸ್ವತ್ತಿನ ವಾಸ್ತವಿಕತೆಯ ಬಗ್ಗೆ ಮಾಹಿತಿ ಇರಲು ಸಾಧ್ಯವಿಲ್ಲ ಎಂದು ಊಹೆ ಮಾಡಿಕೊಳ್ಳಬಹುದಾಗಿದೆ.

128. ಮುಂದುವರಿದು ಪಿಡಬ್ಲ್ಯೂ 2 ರವರು ತಮ್ಮ ಪಾಟೀ ಸವಾಲಿನಲ್ಲಿ ವಾದಿ ಮತ್ತು ತಮ್ಮ ಕುಟುಂಬದವರು ಪ್ರತಿವಾದಿಯು ತಮ್ಮ ಹಿತ್ತಲಿನಲ್ಲಿ ಗೋಡೆ ಹಾಕಲು ಪ್ರಯತ್ನಿಸಿದಾಗ, ತಾವು ಅಡ್ಡಿಪಡಿಸಿರುತ್ತೇವೆ ಎಂಬ ಅಂಶವನ್ನು ಅಲ್ಲಗಳೆದಿರುತ್ತಾರೆ. ಆದರೆ, ಆ ಕುರಿತು ಪೋಲೀಸರು ತಮ್ಮನ್ನು ಠಾಣೆಗೆ ಕರೆಸಿ ಗಲಾಟೆ ಮಾಡಬಾರದು ಎಂದು ತಿಳಿಸಿದ್ದರು ಎಂಬ ಅಂಶವನ್ನು ಮಾತ್ರ ಸ್ವತಃ ಸಾಕ್ಷಿಯೇ ಒಪ್ಪಿಕೊಂಡಿರುತ್ತಾರೆ. ಈ ಅಂಶವನ್ನು ನೋಡಿದಾಗ, ಪಿಡಬ್ಲ್ಯೂ 2 ರವರಿಗೂ ಮತ್ತು ಪ್ರತಿವಾದಿಯವರಿಗೂ ವೈಶಮ್ಯ ಇರುತ್ತದೆ ಎಂದು ಗೊತ್ತಾಗುತ್ತದೆ. ಆದ್ದರಿಂದ ಸದರಿಯವರ ಸಾಕ್ಷ್ಯವನ್ನು ಎಷ್ಟರಮಟ್ಟಿಗೆ ನಂಬಬಹುದು ಎಂಬ ಸಂಶಯ ಉಂಟಾಗುತ್ತದೆ.

129. ಮುಂದುವರಿದು, ದಾವಾ ಸ್ವತ್ತಿನ ಬಗ್ಗೆ ಚಕ್ಕು ಬಂದಿ ಮತ್ತು ವಿಸ್ತೀರ್ಣದ ಬಗ್ಗೆ ಕೇಳಲಾಗಿ ಪಿಡಬ್ಲ್ಯೂ 2 ಮತ್ತು 3 ರವರು ಸಂಪೂರ್ಣವಾಗಿ ವಿಫಲರಾಗಿರುವುದು ಕಂಡು ಬರುತ್ತದೆ. ಅದೇ ರೀತಿ ಪಿಡಬ್ಲ್ಯೂ 3 ರವರಂತಲೂ ಸ್ವತ್ತಿನ ಬಗ್ಗೆ ಯಾವುದೇ ವಿವರಣೆಯನ್ನು ಕೇಳಿದರೂ ಸಹಾ ತನಗೆ ಗೊತ್ತಿಲ್ಲ ಎಂದು ನುಡಿದಿದ್ದು, ಸದರೀ ಪಿಡಬ್ಲ್ಯೂ 2 ಮತ್ತು 3 ರವರ ಸಾಕ್ಷ್ಯವು ಎಷ್ಟರಮಟ್ಟಿಗೆ ಸತ್ಯದಿಂದ ಕೂಡಿರುತ್ತದೆ ಎಂಬ ಬಗ್ಗೆ ಅನುಮಾನ ಉಂಟಾಗುತ್ತದೆ.

130. ಮುಂದುವರಿದು ಡಿಡಬ್ಲ್ಯೂ 1 ರವರು ತಮ್ಮ ಮುಖ್ಯ ವಿಚಾರಣೆಯನ್ನು ತಮ್ಮ ಪ್ರತಿವಾದ ಪತ್ರಕ್ಕೆ ಅನುಗುಣವಾಗಿ ಸಲ್ಲಿಸಿದ್ದು, ತಮ್ಮ ಪಾಟೀ ಸವಾಲಿನಲ್ಲಿ ಸ ನಂ 61ಃ4 ವಾದಿಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ ಮತ್ತು ಅವರೇ ಮಾಲೀಕರಾಗಿ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂಬ ಅಂಶವನ್ನು ಸಾರಾಸಗಟವಾಗಿ ಅಲ್ಲಗಳೆದಿರುತ್ತಾರೆ. ಅದೇ ರೀತಿ ನಿ ಪಿ 13ರಲ್ಲಿ ನಮ್ಮ ಜಮೀನು ಎಂದು ನಮೂದು ಮಾಡಲಾಗಿರುತ್ತದೆ ಎಂಬ ಅಂಶವನ್ನು ಒಪ್ಪಿಕೊಂಡಿದ್ದು, ಸದರೀ ಕ್ರಯ ಪತ್ರವನ್ನು ವಾದಿಯ ತಂದೆ ಮತ್ತು ಚಿಕ್ಕಪ್ಪ ಬರೆದುಕೊಟ್ಟಿರುತ್ತಾರೆ ಎಂಬ ಸೂಚನೆಯನ್ನು ಒಪ್ಪಿಕೊಂಡಿರುತ್ತಾರೆ.

131. ಮುಂದುವರಿದು ನಿ ಡಿ 40ರಲ್ಲಿ ಸ ನಂ 61ಃ4ರ ಬಗ್ಗೆ ನಮೂದು ಮಾಡಿಲ್ಲ ಎಂಬ ಅಂಶವನ್ನು ಸಾಕ್ಷಿಯು ಒಪ್ಪಿಕೊಂಡಿರುತ್ತಾರೆ. ಆದರೆ ತಮ್ಮ ವಾದ ಮಂಡನೆಯ ಸಮಯದಲ್ಲಿ ಸ ನಂ 63ಃ5ರಲ್ಲಿ ಸ ನಂ 61ಃ4ನ್ನು ಸೇರಿಸಿ ಎರಡೂ ಚಕ್ಕುಬಂದಿಯ ಸ್ವತ್ತನ್ನು ನಿ ಡಿ 40ರ ಮುಖಾಂತರ ಮಾರಾಟ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ನಿ ಡಿ 40ಕ್ಕೆ ವಾದಿಯಾಗಲೀ ಅಥವಾ ಅವರ ಕುಟುಂಬದವರಾಗಲೀ ಸಹಿ ಮಾಡಿರುವುದಿಲ್ಲ ಎಂಬ ಅಂಶವನ್ನು ಒಪ್ಪಿಕೊಂಡಿರುತ್ತಾರೆ. ಆದರೆ ನಿ ಡಿ 40ರ ಮೂಲಕ ಮಾರಾಟ ಮಾಡಿದ ಸ್ವತ್ತನ್ನು ಮೂಲತಃ ವಾದಿಯ ತಂದೆ ಮತ್ತು ಚಿಕ್ಕಪ್ಪ ಚಿನ್ನಪ್ಪ ಬಿನ್ ಗಂಗಪ್ಪನವರಿಗೆ ಮಾರಾಟ ಮಾಡಿದ್ದು, ಸದರೀ ಚಿನ್ನಪ್ಪ ಬಿನ್ ಗಂಗಪ್ಪ ಪ್ರತಿವಾದಿಯವರಗೆ ಮಾರಾಟ ಮಾಡಿರುತ್ತಾರೆ.

132. ಹೀಗಿರುವಾಗ, ನಿ ಡಿ 40ಕ್ಕೆ ವಾದಿ ಅಥವಾ ಅವರ ಕುಟುಂಬದವರ ಸಹಿ ಅವಶ್ಯಕ ವಿರುವುದಿಲ್ಲ. ಮುಂದುವರಿದು ತಾನು ಹಾಜರುಪಡಿಸಿದ ಕಚ್ಚಾ ನಕಾಶೆಗಳನ್ನು ತನ್ನ ಅನುಕೂಲಕ್ಕೆ ತಕ್ಕಂತೆ ರಚಿಸಲಾಗಿರುತ್ತದೆ ಎಂಬ ಸೂಚನೆಗೆ ಸಾಕ್ಷಿಯು ನೊಂದಾಯಿತ ಕ್ರಯ ಪತ್ರಗಳ ಆಧಾರದ ಮೇಲೆ ರಚಿಸಲಾಗಿರುತ್ತದೆ ಎಂದು ನುಡಿದಿರುತ್ತಾರೆ. ಒಟ್ಟಿಗೆ ಸದರೀ ಪಾಟೀ ಸವಾಲಿನಲ್ಲಿ ಡಿಡಬ್ಲ್ಯೂ 1 ರವರು ದಾವಾ ಸ್ವತ್ತಿನಲ್ಲಿ ತಾನು ಸಾವಧೀನದಲ್ಲಿರುವುದಿಲ್ಲ ಮತ್ತು ಮಾಲೀಕನಾಗಿರುವುದಿಲ್ಲ ಎಂಬ ಸೂಚನೆಯನ್ನು ಸಾರಾಸಗಟವಾಗಿ ಅಲ್ಲಗಳೆದಿರುತ್ತಾರೆ.

133. ಮುಂದುವರಿದು ಡಿಡಬ್ಲ್ಯೂ 2 ರಿಂದ 4 ರವರು ಪ್ರತಿವಾದಿಯ ಪ್ರತಿವಾದ ಪತ್ರಕ್ಕೆ ಅನುಗುಣವಾಗಿ ತಮ್ಮ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರಿಯವರನ್ನು ಪಾಟೀ ಸವಾಲಿಗೆ ಗುರಿಪಡಿಸಿದಾಗ, ತಾವು ದಾವಾ ಸ್ವತ್ತಿನ ಆಜುಬಾಜು ದಾರರಾಗಿರುತ್ತೇವೆ ಎಂತಲೂ ಮತ್ತು ದಾವಾ ಸ್ವತ್ತಿನಲ್ಲಿ ಪ್ರತಿವಾದಿಯವರೇ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂತಲೂ, ವಾದಿಗೆ ದಾವಾ ಸ್ವತ್ತಿನ ಕುರಿತು ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದು ನುಡಿದಿರುತ್ತಾರೆ. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ವಾದಿಗೂ ಮತ್ತು ಸದರೀ ಸಾಕ್ಷಿದಾರರಿಗೂ ಯಾವುದೇ ದ್ವೇಷ ಇರುವುದಿಲ್ಲ ಎಂಬ ಅಂಶವನ್ನು ಸ್ವತಃ ವಾದಿಯವರೇ ತಮ್ಮ ಪಾಟೀ ಸವಾಲಿನಲ್ಲಿ ಒಪ್ಪಿಕೊಂಡಿರುತ್ತಾರೆ. ಅದ ಕಾರಣ ಸದರೀ ಸಾಕ್ಷ್ಯವು ನಂಬಲರ್ಹವಾದ ಸಾಕ್ಷ್ಯವಾಗಿರುತ್ತದೆ ಎಂಬುದು ಕಂಡು ಬರುತ್ತದೆ.

134. ಮುಂದುವರಿದು ಸದರಿಯವರ ಪಾಟೀ ಸವಾಲನ್ನು ಸೂಕ್ಷ್ಮವಾಗಿ ಗಮನಿಸಿದಾಗ, ದಾವಾ ಸ್ವತ್ತಿನ ಕುರಿತು ಪ್ರತಿವಾದಿಯ ಸ್ವಾಧೀನಾನುಭವ ಮತ್ತು ಹಕ್ಕನ್ನು ಅಲ್ಲಗಳೆಯಲು ಪ್ರಯತ್ನಿಸಿರುತ್ತಾರೆ ಹೊರತು, ವಾದಿಯ ಸ್ವಾಧೀನಾನುಭವ ಮತ್ತು ಹಕ್ಕಿನ ಬಗ್ಗೆ ಯಾವುದೇ ಒಂದು ಸೂಚನೆಯನ್ನೂ ಸಹಾ ಹೊರಡಿಸಿರುವುದಿಲ್ಲ. ಈ ಅಂಶವನ್ನು ನೋಡಿದಾಗ, ವಾದಿಯು ಪ್ರತಿವಾದಿಯ ಪ್ರತಿವಾದವನ್ನು ಅಲ್ಲಗಳೆಯಲು ಪ್ರಯತ್ನಿಸಿರುತ್ತಾರೆ ಹೊರತು, ತಮ್ಮ ವಾದವನ್ನು ರುಜುವಾತು ಪಡಿಸಲು ಪ್ರಯತ್ನಿಸಿರುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಅಲ್ಲದೇ ಎಲ್ಲಾ ಸಾಕ್ಷಿದಾರರು ದಾವಾ ಸ್ವತ್ತಿನಲ್ಲಿ ಪ್ರತಿವಾದಿಯವರೇ ಮಾವಿನ ಮರಗಳನ್ನು ಬೆಳೆಸಿ, ಸ್ವಾಧೀನಾನುಭವದಲ್ಲಿರುತ್ತಾರೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಿರುತ್ತಾರೆ.

135. ಮುಂದುವರಿದು, ಪ್ರಸ್ತುತ ದಾವೆಯನ್ನು ಉಭಯ ಪಕ್ಷಗಾರರ ವಿಚಾರಣೆಯ ನಂತರ ವಾದ ಮಂಡನೆಗಾಗಿ ಇಟ್ಟಾಗ, ವಾದಿಯ ಪರ ವಕೀಲರು ದಿವಾಣಿ ಪ್ರಕ್ರಿಯ ಸಂಹಿತೆ ಆದೇಶ 41 ನಿಯಮ 27 ರಡಿಯಲ್ಲಿ ಒಂದು ಅರ್ಜಿಯನ್ನು ಸಲ್ಲಿಸಿ, ತನ್ನ ತಾತ ಚಿನ್ನಪ್ಪ 1927ರಲ್ಲಿ ದಾವೆ ಸ್ವತ್ತಿನ ಸರ್ವೆ ನಂ ಹಾಗೂ ಸ ನಂ 63ನ್ನು ಸಿದ್ದಮ್ಮನಿಂದ ಖರೀದಿ ಮಾಡಿದ ಬಗ್ಗೆ ಕ್ರಯಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿ, ಸದರೀ ಕ್ರಯ ಪತ್ರವು ಪ್ರಸ್ತುತ ದಾವಾ ಸ್ವತ್ತು ವಾದಿಯ ತಾತನ ಆಸ್ತಿಯಾಗಿದ್ದು, ಹಾಗಾಗಿ ಅದು ವಾದಿಯ ಪಿತ್ರಾರ್ಜಿತ ಸ್ವತ್ತಾಗಿರುತ್ತದೆ ಎಂದು ರುಜುವಾತು ಪಡಿಸಲು ಸಹಾಯಕವಾಗಿರುತ್ತದೆ, ಆದ್ದರಿಂದ ನ್ಯಾಯಾಲಯವು ತೀರ್ಪು ನೀಡುವ ಸಮಯದಲ್ಲಿ ತಮ್ಮದೇ ಆದ ಅಧಿಕಾರವನ್ನು ಚಲಾಯಿಸಿ ಸದರೀ ಕ್ರಯಪತ್ರವನ್ನು ಗುರುತಿಸದೇ ಇದ್ದರೂ ಪರಿಗಣಿಸಬೇಕು ಎಂದು ಕೋರಿಕೊಂಡಿರುತ್ತಾರೆ. ಸದರೀ ಕ್ರಯಪತ್ರವನ್ನು ಹಾಜರುಪಡಿಸುವ ವಿಚಾರದಲ್ಲಿ ಪ್ರತಿವಾದಿಯವರು ತಮ್ಮ ತಕರಾರನ್ನು ಸಹಾ ತಿಳಿಸಿರುತ್ತಾರೆ.

136. ಮುಂದುವರಿದು ವಾದಿಯು ತನ್ನ ಮುಖ್ಯ ವಿಚಾರಣೆಯ ಸಮಯದಲ್ಲಾಗಲೀ ಅಥವಾ ನಂತರದಲ್ಲಾಗಲೀ ಸದರೀ 1927ರ ಕ್ರಯಪತ್ರವನ್ನು ನಿಶಾನೀಕರಿಸಿರುವುದಿಲ್ಲ. ಆದರೂ ಸಹಾ, ಸದರೀ ಕ್ರಯಪತ್ರವನ್ನು ಪರಿಶೀಲಿಸಲಾಗಿ, ದಿ:4.4.1927ರಂದು ಚಿನ್ನಣ್ಣನವರು ಸಿದ್ದಮ್ಮನವರಿಂದ ಸ ನಂ 63, ಸ ನಂ 61 ಮತ್ತು ಇತರೆ ಸ್ವತ್ತುಗಳನ್ನು ಖರೀದಿ ಮಾಡಿರುವುದು ಕಂಡು ಬರುತ್ತದೆ. ಆದರೆ ಇಲ್ಲಿ ನಾವು ಗಮನಿಸಬೇಕಾದ ಅತೀ ಪ್ರಮುಖ ಅಂಶವೆಂದರೆ, ಈಗಾಗಲೇ ಈ ಮೇಲೆ ವಿವರಿಸಿದಂತೆ ಸ ನಂ 61 ಮೂಲತಃ ಚಿನ್ನಪ್ಪ ಬಿನ್ ದೊಡ್ಡ ಹನುಮಂತರಾಯಪ್ಪನವರಿಗೆ ಸೇರಿತ್ತು ಎಂಬ ಬಗ್ಗೆ ಯಾವುದೇ ರೀತಿ ತಕರಾರು ಇರುವುದಿಲ್ಲ. ಆದ್ದರಿಂದ ಸದರೀ ದಾಖಲೆಯ ಬಗ್ಗೆ ಹೆಚ್ಚಿನ ವಿವರಣೆ ಅಗತ್ಯ ಇರುವುದಿಲ್ಲ. ನಿ ಪಿ 5 ರಿಂದ 8ರ ದಾಖಲೆಗಳ ಪ್ರಕಾರ ಸ ನಂ 61:4 ಚಿನ್ನಣ್ಣನವರ ಹೆಸರಿನಲ್ಲಿತ್ತು ಎಂಬುದು

ಕಂಡು ಬರುತ್ತದೆ. ಕೇವಲ ಪಹಣಿ ಪತ್ರಿಕೆಗಳಲ್ಲಿ ಚಿನ್ನಣ್ಣನವರಿಂದ ವಾದಿಯ ಹೆಸರಿಗೆ ಪವತಿ ವಾರಸಿನ ಮೂಲಕ ಖಾತೆ ಬದಲಾವಣೆ ಆಗಿದೆ ಎಂದ ಮಾತ್ರಕ್ಕೆ ಸದರೀ ಸ್ವತ್ತಿನ ಹಕ್ಕನ್ನು ವಾದಿಯು ಪಡೆದುಕೊಂಡಿರುತ್ತಾರೆ ಎಂದು ಹೇಳಲಾಗುವುದಿಲ್ಲ, ಕಾರಣ, ವಾದಿಯ ವಾದದ ಪ್ರಕಾರ ಚಿನ್ನಪ್ಪನವರ ಮರಣಾನಂತರ ತಮ್ಮ ತಂದೆ ರಾಮಪ್ಪ ದಾವಾ ಸ್ವತ್ತಿನಲ್ಲಿ 40 ವರ್ಷಗಳ ಕಾಲ ಸ್ವಾಧೀನಾನುಭವದಲ್ಲಿದ್ದರು ಎಂದು ತಿಳಿಸಿರುತ್ತಾರೆ. ಒಂದು ವೇಳೆ ಚಿನ್ನಣ್ಣನ ಮರಣಾನಂತರ ದಾವಾ ಸ್ವತ್ತು ವಾದಿಯ ತಂದೆ ರಾಮಪ್ಪನವರ ಸ್ವಾಧೀನಾನುಭವಕ್ಕೆ ಬಂದಿದ್ದೇ ಆಗಿದ್ದಲ್ಲಿ, ಅವರ ಹೆಸರಿಗೆ ಖಾತೆ ಮತ್ತು ಪಹಣಿ ಏಕೆ ಬರಲಿಲ್ಲ ಎಂಬ ಸಂಶಯ ಉಂಟಾಗುತ್ತದೆ.

137. ಈ ಮೇಲಿನ ಎಲ್ಲಾ ಅಂಶಗಳನ್ನು ದಾಖಲೆಗಳನ್ನು ಮತ್ತು ಪಕ್ಷಗಾರರ ಸಾಕ್ಷ್ಯವನ್ನು ಅತೀ ಸೂಕ್ಷ್ಮವಾಗಿ ಗಮನಿಸಿದಾಗ, ಎಲ್ಲಾ ಸಾಕ್ಷ್ಯಾಧಾರವು ಪ್ರತಿವಾದಿಯ ಪ್ರತಿವಾದಕ್ಕೆ ಅನುಕೂಲವಾಗಿ ಇರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಅಂದರೆ, ದಾವಾ ಸ್ವತ್ತಿಗೆ ಪ್ರತಿವಾದಿಯವರೇ ಮಾಲೀಕರಾಗಿ 1966ನೇ ಇಸವಿಯಿಂದ ಸ್ವಾಧೀನಾನುಭವದಲ್ಲಿರುತ್ತಾರೆ ಎಂಬುದು ಸ್ಪಷ್ಟವಾಗಿದ್ದು ವಾದಿಗೆ ದಾವಾ ಸ್ವತ್ತಿನ ಕುರಿತು ಯಾವುದೇ ರೀತಿಯ ಹಕ್ಕು ಅಧಿಕಾರ ಹಿತಾಸಕ್ತಿ ಇರುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

138. ವಾದಿಯು ತನ್ನ ವಾದಕ್ಕೆ ಸಹಕಾರಿಯಾಗಿ ಈ ಕೆಳಗಿನ ತೀರ್ಪುಗಳನ್ನು ಹಾಜರುಪಡಿಸಿರುತ್ತಾರೆ.

> ILR 2014 KAR 4726 in the case between **Janatha Dal Partyt, Bangalore VS The Indian National Congress & others.**
>
> ¸z& ¥ÀPgÀUzÀF ªÀiÁ£À 3 $£ÁAiÀiÁ®AiÀÄzÀF AiÀiÁªÀzÃ aAzÀ zÁªÀiÀ£À ¸F¹zÁ0 ¥PÀPÁggÀ +ªÀ ¥&#Ágz PÀ&+À ¸EÀªÁd +ªÀ ªÁz ªÀ+À ¥ÀwªÁz ¥+À0@F ¸EÀªÁd £ªÀÆzÀ ªÀiÁSJÃPÁdgÀ+zAzÀ wH¹gÀ+Ág9

139. ಸದರಿ ಅಂಶದ ಕುರಿತು ಈ ದಾವೆಯ ಪ್ರತಿವಾದಿಯವರು ತಮ್ಮ ವಾದ ಮಂಡನೆಯ ಸಮಯದಲ್ಲಿ ಪ್ರಸ್ತುತ ದಾವೆಯನ್ನು ವಾದಿಯು ಮೂಲತಃ ಕೇವಲ ಶಾಶ್ವತ ನಿರ್ಬಂಧಕಾಜ್ಞೆಯನ್ನು ಕೋರಿ ಸಲ್ಲಿಸಿದ್ದು, ನಂತರ ನ್ಯಾಯಾಲಯದ ಆದೇಶದ ಮೇರೆಗೆ ಸದರಿ ದಾವೆಯನ್ನು ಘೋಷಣಾತ್ಮಕ ದಾವೆಯಾಗಿ ಪರಿವರ್ತಿಸಿಕೊಂಡಿರುತ್ತಾರೆ. ಆದರೆ ಸದರಿ ವಾದಪತ್ರವನ್ನು ಗಮನಿಸಿದಾಗ ಪರಿಹಾರದ ಕಾಲಂನಲ್ಲಿ ಮಾತ್ರ ಹಕ್ಕಿನ ಘೋಷಣೆಗಾಗಿ ಪರಿಹಾರವನ್ನು ಕೋರಿದ್ದು, ಆದರೆ ವಾದಪತ್ರದ 4ನೇ ಖಂಡಿಕೆಯಲ್ಲಿ ಕೇವಲ ಶಾಶ್ವತ ನಿರ್ಬಂಧಕಾಜ್ಞೆಗಾಗಿ ಮಾತ್ರ ಕೋರಿರುತ್ತಾರೆ. ಆದ್ದರಿಂದ ಸದರಿ ವಾದಪತ್ರವು ಹಲವಾರು ನ್ಯೂನತೆಗಳಿಂದ ಕೂಡಿರುತ್ತದೆ ಎಂದು ವಾದಿಸಿರುತ್ತಾರೆ.

> ILR 2012 KAR 4958, in the case between **Hullappa VS The State of Karnataka, through Deputy Commissioner, Bidar and others**
>
> **AIR 1989 Supreme Court 1269** in the case between **Smt. Chandrakantaben J. Modi and Narendra Jayantila Modi VS Vadilal Bapalal Modi and others.**
>
> ILR 2006 KAR 3018 in the case between **Avvamma VS The State of Karnataka, by its Secretary and others.**

140. ಸದರಿ ಮೇಲಿನ ಪ್ರಕರಣದಲ್ಲಿ ಮಾನ್ಯ ಉಚ್ಚನ್ಯಾಯಾಲಯವು ಯಾವುದೇ ಒಂದು ಘೋಷಣಾತ್ಮಕ ದಾವೆಯಲ್ಲಿ ಪಕ್ಷಕಾರರು ಸ್ವತ್ತಿನ ಕುರಿತು ಹಕ್ಕು ರುಜುವಾತುಪಡಿಸುವಂತಹ ದಾಖಲೆಗಳನ್ನು ಹಾಜರುಪಡಿಸದ ಹೊರತು ಯಾವುದೇ ವ್ಯಕ್ತಿಯ ಹಕ್ಕನ್ನು ಘೋಷಿಸುವುದು ಸಮಂಜಸವಾಗಿರುವುದಿಲ್ಲ, ಕೇವಲ ಕಂದಾಯ ದಾಖಲೆಗಳ ಆಧಾರದ ಮೇರೆಗೆ ಮತ್ತು ಕಂದಾಯ ಅಧಿಕಾರಿಗಳು ನೀಡಿದ ವರದಿಯ ಮೇರೆಗೆ ಯಾವುದೇ ವ್ಯಕ್ತಿಯ ಹಕ್ಕನ್ನು ನಿರ್ಧರಿಸಲು ಆಗುವುದಿಲ್ಲ, ಆದ್ದರಿಂದ ಪಕ್ಷಕಾರರು ತಮ್ಮ ಹಕ್ಕನ್ನು ಅತಿ ಅವಶ್ಯಕವಾಗಿ ಹಕ್ಕನ್ನು ನಿರ್ಧರಿಸುವಂತಹ ನೋಂದಾಯಿತ ದಾಖಲೆಗಳ ಮುಖಾಂತರವೇ ರುಜುವಾತುಪಡಿಸಬೇಕಾಗುತ್ತದೆ ಎಂದು ತಿಳಿಸಿರುತ್ತಾರೆ.

141. ಸದರಿ ಅಂಶದ ಕುರಿತು ಪ್ರತಿವಾದಿಯವರು ತಮ್ಮ ವಾದ ಮಂಡನೆಯ ಸಮಯದಲ್ಲಿ ವಾದಿಯು ದಾವಾ ಸ್ವತ್ತಿನ ಕುರಿತು ಯಾವುದೇ ರೀತಿಯ ಹಕ್ಕನ್ನು ನಿರ್ಧರಿಸುವಂತಹ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ, ಕೇವಲ ಕಂದಾಯ ದಾಖಲೆಗಳ ಆಧಾದರದ ಮೇರೆಗೆ ವಾದಿಯ ಹಕ್ಕನ್ನು ನಿರ್ಧರಿಸಲು ಸಾಧ್ಯವಿಲ್ಲ,ಅದಕ್ಕೆ ಪ್ರತಿಯಾಗಿ ಪ್ರತಿವಾದಿಯಾದ ತಾನು ದಾವಾ ಸ್ವತ್ತಿನ ಕುರಿತು ತನ್ನ ಹಕ್ಕನ್ನು ರುಜುವಾತುಪಡಿಸಲು ನಿಡಿ 3, ನಿಡಿ 40, ನಿಡಿ 11, ನಿಡಿ 25 ಮತ್ತು ಇತರೆ ಹಲವಾರು ತನ್ನ ಪ್ರತಿವಾದಕ್ಕೆ ಸಹಕಾರಿಯಾಗಿ ನೋಂದಾಯಿತ ಕ್ರಯಪತ್ರಗಳನ್ನು ಹಾಜರುಪಡಿಸಿರುತ್ತೇನೆ, ಆದ್ದರಿಂದ ತನ್ನ ಕೋರಿಕೆಯಂತೆ ತನ್ನನ್ನು ಸ್ವತ್ತಿನ ನಿರುಪಾದಿಕ ಮಾಲೀಕನೆಂದು ಘೋಷಿಸಬೇಕೆಂದು ಕೋರಿಕೊಂಡಿರುತ್ತಾರೆ.

AIR 1963 Supreme Court 1879 (V 50 C 267) (From Patna: AIR 1956 Pat 349) in the case between **Sheodhyan Singh and others, VS Mst.Sanichara Kuer and others**

ILR 1988 KAR 554 **the case between Narasimha Shastri Vs Mangesha Devaru.**

AIR 1963 Madras 147 **Dharmakanya Nadar Siviseshamuthu and others Vs Mahalingam Nadar Gopalakrishna Nadar and others.**
ILR 1995 KAR 1114 in the case between **Nagaraj VS Kulluramma.**

!V=9 ಈ ಮೇಲಿನ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ಯಾವುದೇ ಒಂದು ಸ್ವತ್ತನ್ನು ಗುರುತಿಸುವಲ್ಲಿ ಸ್ವತ್ತಿನ ಸಂಖ್ಯೆ ಅಥವಾ ಅದರ ವಿರ್ಸೀರ್ಣಕ್ಕಿಂತೂ ಸದರಿ ಸ್ವತ್ತಿನ ಕುರಿತು ದಾಖಲೆಗಳಲ್ಲಿ ತೋರಿಸಿದ ಚಕ್ಕುಬಂದಿಯು ಹೆಚ್ಚಿನ ಮಹತ್ವವನ್ನು ಪಡೆದುಕೊಳ್ಳುತ್ತದೆ ಎಂದು ತಿಳಿಸಿರುತ್ತಾರೆ. ಸದರಿ ಅಂಶದ ಕುರಿತು ಪ್ರತಿವಾದಿಯು ತಮ್ಮ ವಾದ ಮಂಡನೆಯ ಸಮಯದಲ್ಲಿ ನಿಡಿ 40 ರ ಕ್ರಯಪತ್ರವನ್ನು ಸರ್ವೆ ನಂ.65ಃ3ಕ್ಕೆ ಸಂಬಂಧಿಸಿ ಬರೆದಿರುತ್ತಾರೆಂದು

ತಿಳಿಸಿದ್ದರೂ ಸಹಾ ಸದರಿ ದಾಖಲೆಯಲ್ಲಿ ಸ.ನಂ.63:5ರಲ್ಲಿ ಸ.ನಂ.61:4ನ್ನು ಸೇರಿಸಿ ಚಕ್ಕುಬಂದಿಯನ್ನು ತೋರಿಸಲಾಗಿರುತ್ತದೆ, ಆದ್ದರಿಂದ ಸದರಿ ಚಕ್ಕುಬಂದಿಯಲ್ಲಿ ತೋರಿಸಿದ ಸ್ವತ್ತಿಗೆ ಪ್ರತಿವಾದಿಯಾದ ತಾನೆ ನಿರುಪಾದಿಕ ಮಾಲೀಕತ್ವವನ್ನು ಹೊಂದಿರುತ್ತೇನೆ, ಸದರಿ ಸ.ನಂ. 61:4ರ ಕುರಿತು ನಮೂದು ಮಾಡಿಲ್ಲ ಎಂದ ಮಾತ್ರಕ್ಕೆ ಸದರಿ ಸ್ವತ್ತು ತನಗೆ ಸೇರಿರುವುದಿಲ್ಲ ಎಂದು ಹೇಳಲು ಆಗುವುದಿಲ್ಲ ಕಾರಣ ಸದರಿ ಚಕ್ಕುಬಂದಿಯ ಸ್ವತ್ತು ತನಗೆ ಸೇರಿದ್ದು ಎಂಬ ಬಗ್ಗೆ ಹಲವಾರು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆಂದು ವಾದ ಮಂಡಿಸಿರುತ್ತಾರೆ.

1993(1) Kar.L.J.82 (DB), In the High Court of Karnataka at Bangalore in the case between **S.Halappa VS Assistant Commissioner, Shimoga Sub-Division, Shimoga and others.**

143. ಸದರಿ ಮೇಲಿನ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ಕಂದಾಯ ಅಧಿಕಾರಿಗಳಿಗೆ ಸ್ವತ್ತಿನ ಕುರಿತು ಒಬ್ಬ ವ್ಯಕ್ತಿಯ ಹಕ್ಕನ್ನು ನಿರ್ಧರಿಸುವ ಅಧಿಕಾರ ಇರುವುದಿಲ್ಲ ಎಂದು ಅಭಿಪ್ರಾಯಪಟ್ಟಿರುತ್ತಾರೆ. ಸದರಿ ಅಂಶದ ಕುರಿತು ಪ್ರತಿವಾದಿಯು ತಮ್ಮ ವಾದ ಮಂಡನೆಯ ಸಮಯದಲ್ಲಿ ವಾದಿಯರ ತಂದೆ ಮತ್ತು ಚಿಕ್ಕಪ್ಪನವರು 1964ನೇ ಇಸವಿಯಲ್ಲಿಯೇ ದಾವಾ ಸ್ವತ್ತನ್ನು ಮಾರಾಟ ಮಾಡಿದ್ದು, ಆ ನಂತರ 1966ರಲ್ಲಿ ಸದರಿ ಸ್ವತ್ತನ್ನು ತಾನು ಖರೀದಿ ಮಾಡಿರುತ್ತೇನೆ, ಹೀಗಿದ್ದರೂ ಯಾವುದೇ ಅಧಿಕಾರ ಇಲ್ಲದಿದ್ದರೂ ಸದರಿ ಸ್ವತ್ತಿನ ಕುರಿತು ಖಾತೆಯನ್ನು ವಾದಿಯ ಹೆಸರಿಗೆ ಕಂದಾಯ ಅಧಿಕಾರಿಗಳು ಬದಲಾಯಿಸಿರುತ್ತಾರೆ, ಅದ್ದರಿಂದ ಸದರಿ ಕಂದಾಯ ಅಧಿಕಾರಿಗಳು ಮಾಡಿದ ಆದೇಶವು ಸ್ವತ್ತಿನ ಕುರಿತು ಹಕ್ಕಿಗೆ ಯಾವುದೇ ಬಾಧಿತವಾಗಿರುವುದಿಲ್ಲ ಎಂದು ವಾದಿಸಿರುತ್ತಾರೆ.

2006 ILR KAR 4637 in the case between **O.Leelavathi & others VS M. Neelakanta Naidu and Others.**

144. ಈ ಮೇಲಿನ ಪ್ರಕರಣದಲ್ಲಿ ಮಾನ್ಯ ಉಚ್ಚನ್ಯಾಯಾಲಯವು ಯಾವುದೇ ಒಂದು ನೋಂದಾಯಿತ ಪತ್ರವನ್ನು ಕಾಲಪರಿಮಿತಿಯಲ್ಲಿ ಪ್ರಶ್ನೆ ಮಾಡದೇ ಹೋಗಿದ್ದರೆ ಸದರಿ

ನೋಂದಾಯಿತ ಪತ್ರವನ್ನು ತದನಂತರದಲ್ಲಿ ರದ್ದುಪಡಿಸುವಂತೆ ಕೇಳಲಾಗುವುದಿಲ್ಲ ಎಂಬ ಅಭಿಪ್ರಾಯಕ್ಕೆ ಬಂದಿದ್ದು, ಸದರಿ ಅಂಶದ ಕುರಿತು ಪ್ರಸ್ತುತ ಪ್ರತಿವಾದಿಯವರು ತನ್ನ ನಿಡಿ 40ರ ಕ್ರಯಪತ್ರವು 1966ನೇ ಇಸವಿಯ ಕ್ರಯಪತ್ರವಾಗಿದ್ದು, ಸದರಿ ಕ್ರಯಪತ್ರವನ್ನು ಇಲ್ಲಿಯವರೆಗೂ ವಾದಿಯು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ, ಆದ್ದರಿಂದ ಸದರಿ ವಾದಿಯ ವಾದವು ಸಮಂಜಸವಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ.

145. ಅಲ್ಲದೆ ಪ್ರತಿವಾದಿಯು ತನ್ನ ಪ್ರತಿವಾದಕ್ಕೆ ಸಹಕಾರಿಯಾಗಿ ಇನ್ನೂ ಹಲವಾರು ತೀರ್ಪುಗಳನ್ನು ಈ ಕೆಳಗಿನಂತೆ ಹಾಜರುಪಡಿಸಿರುತ್ತಾರೆ.

2001 (6) KAR L.J. 213 (D.B) in the case between **Union of India VS C-dinakar.**

2014(2) S.C.C. 269 – Union of Co-operative Housing Society Ltd.

AIR 1987 KERALA 42, AIR 1964 S.C. 1254, O.6, R.2 C.P.C.

ILR 1995 KAR 1332 in the case between **Mahadevaiah VS Scheduled Caste (Harijan) House Building Co-operative Society Ltd.**

ILR 1996 KAR 1340 in the case between **Alla Baksh vS Mohd.Hussain**

ILR 1998 KAR 1840 in the case between **Alla Baksh VS Mohd. Hussain**

ILR 1996 KAR VS 1934 in the case between **Smt. Chandrakantaben J. Modi and Narendra Jayantila Modi**

ILR 2000 KAR 435 in the case between **P.Prabhavathi and another VS Divisional Controller and others.**

HCR 2014 Kant.833, Karntaka High Court in the case between **R.Satish Kumar Singh VS Ramsingh and others.**

AIR 2006 KARNATAKA 199 in the case between **Seethamma & Anr. VS Bathenna & Anr.**

AIR 1996 BOMBAY 98 in the case between **Smt.Sarladevi VS Shailesh**

ILR 2007 KAR 3216 in the case between **Mrs.Mallika and others VS Mr.Chandrappa and others.**

AIR 1995 KARNATAKA 35 in the case between **The Vijaya College Trust, VS The Kumta Co-Operative Arecanut Sales Society Limited and another**

ILR 2012 KAR 4958 in the case between **Hullappa VS The State of Karnataka, through Deputy Commissioner, Bidar and others.**

146. ಆದರೆ ಸದರಿ ಮೇಲಿನ ಎಲ್ಲಾ ತೀರ್ಪುಗಳು ಈ ಒಂದು ಪ್ರಕರಣದ ವಾಸ್ತವಾಂಶಗಳಿಗೆ ಅಷ್ಟಾಗಿ ಹೊಂದಾಣಿಕೆ ಕಂಡುಬಂದಿರುವುದಿಲ್ಲ. ಆದ್ದರಿಂದ ಸದರಿ ತೀರ್ಪುಗಳನ್ನು ಈ ಒಂದು ಪ್ರಕರಣದ ವಾಸ್ತವಾಂಶಗಳಿಗೆ ಹೋಲಿಸುವುದು ಸಮಂಜಸವಾಗಿರುವುದಿಲ್ಲ.

147. ಅದೇ ರೀತಿ ವಾದಿಯು ತನ್ನ ಪರವಾಗಿ ಕೆಳಕಂಡ ತೀರ್ಪುಗಳನ್ನು ಹಾಜರುಪಡಿಸಿರುತ್ತಾರೆ.

1. **2006(1) ICC – 469- In the case between Amteshwar Anand VS Virendar Mohan Singh and others.**

> **Registration Act, 1908, Sections 17(1)(b) and 17(2) – Civil Procedure Code, 1908, Order 23 Rule 3- Family arrangement-Transaction between members of same family for the mutual benefit-Composition deed not registered- All composition deeds are exempted from requirement to be registered under Registration Act- Courts lean in favour of**

> **upholding a family arrangement instead of disturbing the same on technical grounds.**

2. 1991(2) Kar.L.J.488- In the case between Basappa Gurupadappa Mageri VS Tippanna Satappa Mageri.

> **Specific Relief Act, 1963, Section 24- Suit for declaration of title and possession- House property- Production of Khata extract from village property register and receipt for payment of house tax as evidence of ownership- Declaration of title- Khata extract not instrument of title- Other evidence indicating title- Relevant and supporting- Cumulative effect of evidence- Ownership- No ground for interference.**

148. ಈ ಮೇಲಿನ ತೀರ್ಪುಗಳನ್ನು ಪರಿಶೀಲಿಸಿದಾಗ, ಯಾವುದೇ ಒಂದು ಘೋಷಣಾತ್ಮಕ ದಾವೆಯಲ್ಲಿ ಸ್ವತ್ತಿನ ಹಕ್ಕನ್ನು ನಿರ್ಧರಿಸುವ ಸಮಯದಲ್ಲಿ ಕಂದಾಯ ದಾಖಲೆಗಳ ಜೊತೆಗೆ ಇತರೆ ದಾಖಲೆಗಳು ಪಕ್ಷಗಾರರ ಹಕ್ಕನ್ನು ರುಜುವಾತು ಪಡಿಸುವಲ್ಲಿ ಸಹಕಾರಿಯಾಗಿದ್ದರೆ, ಆಗ ಸದರೀ ವ್ಯಕ್ತಿಯ ಹಕ್ಕನ್ನು ನಿರ್ಧರಿಸಬಹುದು ಎಂಬ ಅಂಶವನ್ನು ತಿಳಿಸಿದ್ದು ಮತ್ತು ಸದರೀ ತೀರ್ಪಿನಲ್ಲಿ ಯಾವುದೇ ಸ್ವತ್ತಿನ ಬಗ್ಗೆ ನಿಖರವಾದ ಗುರ್ತು ಇದ್ದಾಗ ಹಕ್ಕಿನ ಬಗ್ಗೆ ಆದೇಶವನ್ನು ನೀಡಬಹುದು ಎಂದು ತಿಳಿಸಿರುತ್ತಾರೆ.

149. ಸದರೀ ತೀರ್ಪಿನ ಅಂಶಗಳನ್ನು ಈ ಒಂದು ದಾವೆಯಲ್ಲಿ ಅಳವಡಿಸಿಕೊಂಡಾಗ, ವಾದಿಯು ತನ್ನ ಪರವಾಗಿ ಕಂದಾಯ ದಾಖಲೆಗಳನ್ನು ಹೊರತುಪಡಿಸಿ ನಿಖರವಾಗಿ ಸ ನಂ 61:4 ತನಗೆ ಸೇರಿದ್ದು ಎಂದು ತೋರಿಸುವಂತಹ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ, ಅದಕ್ಕೆ ಪ್ರತಿಯಾಗಿ ಪ್ರತಿವಾದಿಯು ಸದರೀ ಸ ನಂ 61:4 ಸ ನಂ 63:5ರಲ್ಲಿ ಮಿಲೀನವಾಗಿದ್ದು, ಸದರೀ ಸ್ವತ್ತನ್ನು ತಾನು ನಿ ಡಿ 40ರ ಮೂಲಕ ಖರೀದಿ ಮಾಡಿ ಆ ದಿನದಿಂದ ತಾನೇ ಸ್ವಾಧೀನಾನುಭವದಲ್ಲಿ ಇದ್ದೇನೆ ಎಂದು ತೋರಿಸಲು ಹಲವಾರು ನೊಂದಾಯಿತ ದಾಖಲೆಗಳನ್ನು ಸಾಕ್ಷ್ಯಾಧಾರಗಳ ಮುಖಾಂತರ ಹಾಜರುಪಡಿಸಿರುತ್ತಾರೆ. ಈ

ಅಂಶವನ್ನು ನೋಡಿದಾಗ, ವಾದಿಯ ವಾದವನ್ನು ಅಲ್ಲಗಳೆಯುವಂತಹ ಸಾಕ್ಷ್ಯಾಧಾರವನ್ನು ಪ್ರತಿವಾದಿಯು ಹಾಜರುಪಡಿಸಿರುತ್ತಾರೆ. ಹೀಗಿರುವಾಗ, ಯಾವುದೇ ಹಕ್ಕನ್ನು ನಿರ್ಧರಿಸುವಂತಹ ದಾಖಲೆಗಳಿಲ್ಲದ ವಾದಿಯ ವಾದವನ್ನು ನಂಬದೇ ತನ್ನ ಪ್ರತಿವಾದಕ್ಕೆ ಸಹಕಾರಿಯಾಗಿ ಹಲವಾರು ಸಾಕ್ಷ್ಯಾಧಾರವನ್ನು ನೀಡಿದ ಪ್ರತಿವಾದಿಯ ವಾದವನ್ನು ಸಮಂಜಸವಾಗಿರುತ್ತದೆ. ಆದ್ದರಿಂದ ಮೇಲಿನ ತೀರ್ಪಿನ ವಾಸ್ತವಾಂಶಗಳು ಈ ಪ್ರಕರಣದ ವಾಸ್ತಂವಾಂಶಗಳಿಗೆ ಅನ್ವಯಿಸುವುದಿಲ್ಲ.

150. ಮುಂದುವರಿದು, ಐಎಲ್‌ಆರ್ 2007 ಕೆಎಆರ್ 339- ಎಂಬ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಂತೆ ಯಾವುದೇ ಒಬ್ಬ ವ್ಯಕ್ತಿಯು ಸ್ವತ್ತಿನ ಸ್ವಾಧೀನಾನುಭವದಲ್ಲಿ ಇಲ್ಲದೇ ಕೇವಲ ಹಕ್ಕಿನ ಘೋಷಣೆಗಾಗಿ ದಾವೆಯನ್ನು ಸಲ್ಲಿಸಿದರೆ ಅದು ಊರ್ಜಿತವಾಗುವುದಿಲ್ಲ, ಕಾರಣ ಅದರಲ್ಲಿ ಹೊರಡಿಸಿದ ತೀರ್ಪು ಕೇವಲ ಕಾಗದದ ಡಿಕ್ರಿ ಆಗಿರುತ್ತದೆ. ಸದರೀ ವ್ಯಕ್ತಿಯು ಹಕ್ಕಿನ ಘೋಷಣೆಯ ಜೊತೆಯಲ್ಲಿ ಸ್ವಾಧೀನವನ್ನು ಸಹಾ ಕೋರುವುದು ಅವಶ್ಯಕವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಸದರೀ ಅಂಶಗಳನ್ನು ಈ ಒಂದು ಪ್ರಕರಣಕ್ಕೆ ಹೋಲಿಕೆ ಮಾಡಿ ನೋಡಿದಾಗ, ಸ್ವತಃ ವಾದಿಯೇ ಒಪ್ಪಿಕೊಂಡಂತೆ ಪ್ರತಿವಾದಿಯು ದಾವಾ ಸ್ವತ್ತಿಗೆ ಅನ್ವಯಿಸಿ ಮುಳ್ಳು ತಂತಿಯನ್ನು ಹಾಕಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಅಂಶವನ್ನು ನೋಡಿದಾಗ, ಈಗಾಗಲೇ ಮೇಲೆ ವಿವರಿಸಿದಂತೆ ಪ್ರತಿವಾದಿಯೇ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂಬುದು ಕಂಡು ಬಂದಿರುತ್ತದೆ. ಹೀಗಿರುವಾಗ, ಸದರೀ ಸ್ವತ್ತಿನ ಸ್ವಾಧೀನವನ್ನು ಬಿಡಿಸಿಕೊಡುವಂತೆ ಕೋರದೆ, ಕೇವಲ ಹಕ್ಕಿನ ಘೋಷಣೆಗಾಗಿ ಸಲ್ಲಿಸಿದ ವಾದಿಯ ದಾವೆಯು ಊರ್ಜಿತವಾಗಿರುವುದಿಲ್ಲ.

151. ಅದೇ ರೀತಿ ಈ ಮೇಲಿನ ಎಲ್ಲಾ ಅಂಶಗಳ ವಿವರಣೆಗಳ ಮೂಲಕ ಕಂಡುಬರುವ ಪ್ರಮುಖ ಅಂಶವೆಂದರೆ ಯಾವುದೇ ಒಂದು ಘೋಷಣಾತ್ಮಕ ದಾವೆಯಲ್ಲಿ ಕಂದಾಯ ದಾಖಲೆಗಳಿಗಿಂತಲೂ ಹಕ್ಕನ್ನು ನಿರ್ಧರಿಸುವಂತಹ ನೋಂದಾಯಿತ ಪತ್ರಗಳು ಬಹಳ ಮಹತ್ವವನ್ನು ಪಡೆದುಕೊಳ್ಳುತ್ತವೆ. ಅದೇ ರೀತಿ ಯಾವುದೇ ಒಂದು ಸ್ವತ್ತನ್ನು

ನಿರ್ಧರಿಸುವ ವಿಚಾರದಲ್ಲಿ ಸ್ವತ್ತಿನ ಸಂಖ್ಯೆ ಅಥವಾ ವಿಸ್ತೀರ್ಣಕ್ಕಿಂತಲೂ ಅದಕ್ಕೆ ತೋರಿಸಿದ ಚಕ್ಕುಬಂದಿಯು ಮಹತ್ವವನ್ನು ಪಡೆದುಕೊಳ್ಳುತ್ತದೆ ಎಂಬುದು ಕಂಡುಬಂದಿದ್ದು, ಈ ಒಂದು ದಾವೆಯಲ್ಲಿ ವಾದಿಯು ಕೇವಲ ತನ್ನ ವಾದಕ್ಕೆ ಸಹಕಾರಿಯಾಗಿ ಕಂದಾಯ ದಾಖಲೆಗಳನ್ನು ಮಾತ್ರ ಹಾಜರುಪಡಿಸಿರುತ್ತಾರೆ. ಆದರೆ ಪ್ರತಿವಾದಿಯುವರು ತನ್ನ ಪ್ರತಿವಾದಕ್ಕೆ ಅನುಗುಣವಾಗಿ ಹಲವಾರು ನೋಂದಾಯಿತ ಪತ್ರಗಳನ್ನು ಹಾಜರುಪಡಿಸಿರುತ್ತಾರೆ. ಅಲ್ಲದೆ ನಿಡಿ 40ರಲ್ಲಿ ತೋರಿಸಿದ ಚಕ್ಕುಬಂದಿ ತನ್ನ ನಿರುಪಾಧಿಕ ಮಾಲೀಕತ್ವಕ್ಕೆ ಒಳಪಟ್ಟು ತಾನು ಸ್ವಾಧೀನಾನುಭವದಲ್ಲಿ ಇರುತ್ತೇನೆ ಎಂಬ ಅಂಶವನ್ನು ಹಲವಾರು ಸಾಕ್ಷ್ಯಾಧಾರಗಳ ಮುಖಾಂತರ ರುಜುವಾತುಪಡಿಸಲು ಪ್ರಯತ್ನಿಸಿರುತ್ತಾರೆ. ಹೀಗಿರುವಾಗ ಪ್ರತಿವಾದಿಯ ವಾದವನ್ನು ನಂಬದೇ ಯಾವುದೇ ಸರಿಯಾದ ಸಾಕ್ಷ್ಯಾಧಾರಗಳು ಇಲ್ಲದ ವಾದಿಯ ವಾದವನ್ನು ನಂಬಲು ಸಮಂಜಸವಾಗಿರುವುದಿಲ್ಲ.

152. ಆದ್ದರಿಂದ ಈ ಮೇಲೆ ವಿವರಿಸಿದ ಎಲ್ಲಾ ಅಂಶಗಳ ಆಧಾರದ ಮೇರೆಗೆ ಅ ದಾ ಸಂ 78ಃ2003ರಲ್ಲಿನ ವಿವಾದಾಂಶ 1ನ್ನು ನಕಾರಾತ್ಮಕವಾಗಿ ಮತ್ತು ವಿವಾದಾಂಶ 3ನ್ನು ಸಕಾರಾತ್ಮಕವಾಗಿ ಮತ್ತು ಅ ದಾ ಸಂ 59ಃ2009ರಲ್ಲಿನ ವಿವಾದಾಂಶ 1ನ್ನು ಸಕಾರಾತ್ಮಕವಾಗಿ ಮತ್ತು ವಿವಾದಾಂಶ 3ನ್ನು ನಕಾರಾತ್ಮಕವಾಗಿ ಉತ್ತರಿಸುವುದು ಸೂಕ್ತವಾಗಿರುತ್ತದೆ.

153. C zÁ ¸A :;?="">g «ªÁzÁA* =8 C zÁ ¸A 0 ?="" g «ªÁzÁA* = « ಈ ಎರಡೂ ವಿವಾದಾಂಶಗಳು ಒಂದಕ್ಕೊಂದು ಪೂರಕವಾಗಿದ್ದು ಸಾಕ್ಷ್ಯಾಧಾರಗಳನ್ನು ಮತ್ತು ಕಾನೂನಿನ ಅಂಶಗಳನ್ನು ಪರಿಣಾಮಕಾರಿಯಾಗಿ ಚರ್ಚಿಸಲು ಮತ್ತು ಮರು ವಿವರಣೆಯನ್ನು ತಪ್ಪಿಸಲು ಈ ವಿವಾದಾಂಶಗಳನ್ನು ಏಕಕಾಲಕ್ಕೆ ಚರ್ಚಿಸಿ ನಿರ್ಣಯಕ್ಕೆ ತೆಗೆದುಕೊಳ್ಳಲಾಗಿದೆ.

154. ಈ ಎರಡೂ ವಿವಾದಾಂಶಗಳ ಪ್ರಕಾರ ವಾದಿಯು ತನ್ನ ಸ್ವಾಧೀನಾನುಭವದಲ್ಲಿರುವ ಸ್ವತ್ತಿನಲ್ಲಿ ಪ್ರತಿವಾದಿಯು ಕಾನೂನು ಬಾಹಿರವಾಗಿ ಅತಿಕ್ರಮಿಸಿ ತನ್ನ ಸ್ವಾಧೀನಕ್ಕೆ ಅಡ್ಡಿಪಡಿಸುತ್ತಿರುತ್ತಾನೆ ಎಂಬ ಅಂಶವನ್ನು ರುಜುವಾತು ಪಡಿಸಬೇಕಾಗಿದ್ದು, ಅದೇ

ರೀತಿ ದಿ:15.2.2009ರಂದು ವಾದಿಯು ತನ್ನ ಸ್ವಾಧೀನಾನುಭವಕ್ಕೆ ಧಕ್ಕೆ ಪಡಿಸಿರುತ್ತಾರೆ ಎಂಬ ಅಂಶವನ್ನು ಪ್ರತಿವಾದಿಯು ರುಜುವಾತು ಪಡಿಸಬೇಕಾಗಿರುತ್ತದೆ.

155. ಈಗಾಗಲೇ ಮೇಲೆ ವಿವರಿಸಿದ ಅಂಶಗಳ ಆಧಾರದ ಮೇರೆಗೆ ದಾವಾ ಸ್ವತ್ತಿನಲ್ಲಿ ಈ ದಾವೆಯ ಪ್ರತಿವಾದಿಯವರೇ ಮಾಲೀಕರಾಗಿ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂಬುದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ಹೀಗಿರುವಾಗ, ವಾದಿಯ ಸ್ವಾಧೀನಕ್ಕೆ ಪ್ರತಿವಾದಿಯು ಧಕ್ಕೆ ಪಡಿಸಲು ಸಾಧ್ಯ ವಿರುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇನ್ನು ವಾದಿಯು ಪ್ರತಿವಾದಿಯ ಸಾವಧೀನಕ್ಕೆ ಧಕ್ಕೆ ಪಡಿಸಿರುತ್ತಾನೆ ಎಂಬ ಬಗ್ಗೆ ವಿವರಣೆಗೆ ಬಂದಾಗ, ಪ್ರತಿವಾದಿಯು ಹೇಳುವಂತೆ ತನಗೆ ಸೇರಿದ ಸ್ವತ್ತಿನ ಸುತ್ತಲೂ ಮುಳ್ಳು ತಂತಿಯನ್ನು ಹಾಕುವ ಸಮಯದಲ್ಲಿ ವಾದಿಯು ತನ್ನ ಮತ್ತು ತನ್ನ ಕೆಲಸಗಾರರ ನಡುವೆ ವಿನಾಕಾರಣ ಜಗಳ ತೆಗೆದು ಸದರೀ ಮುಳ್ಳು ತಂತಿಯನ್ನು ಹಾಕಲು ಅಡ್ಡಿಪಡಿಸಿ ತನ್ನ ಸ್ವಾಧೀನಕ್ಕೆ ಧಕ್ಕೆ ಪಡಿಸಿದ ಕಾರಣ, ತಾನು ನಿ ಡಿ 26ರಂತೆ ವಾದಿಯ ಮೇಲೆ ಪಿರ್ಯಾದನ್ನು ನೀಡಿರುತ್ತೇನೆ, ಆ ಕುರಿತು ಪೋಲೀಸರೂ ಸಹಾ ವಾದಿ ಮತ್ತು ಆತನ ಸಹಚರರನ್ನು ಕರೆಸಿ, ಬುದ್ಧಿವಾದ ಹೇಳಿರುತ್ತಾರೆ, ತಾನು ನೀಡಿದ ಪಿರ್ಯಾದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ತಿಳಿಸಿರುತ್ತಾರೆ.

156. ಸದರೀ ಅಂಶದ ಕುರಿತು ಪಿಡಬ್ಲ್ಯೂ 1 ರವರನ್ನು ಪಾಟೀ ಸವಾಲಿಗೆ ಗುರಿಪಡಿಸಿದಾಗ, ಸ್ವತಃ ಪಿಡಬ್ಲ್ಯೂ 1 ರವರೇ ತಮ್ಮ ಪಾಟೀ ಸವಾಲಿನ 14ನೇ ಪುಟದಲ್ಲಿ ಪ್ರತಿವಾದಿಯು ಬೇಲಿಯನ್ನು ಹಾಕಬೇಕಾದರೆ ತಾನು ಕೂಲಿಯವರನ್ನು ಬೆದರಿಸಿರುತ್ತೇನೆ ಎಂಬ ಅಂಶವನ್ನು ಸ್ವತಃ ಒಪ್ಪಿಕೊಂಡಿದ್ದು, ಅಲ್ಲದೇ ನಿ ಡಿ 26ರಂತೆ ಕೊಟ್ಟ ದೂರನ್ನು ಸಹಾ ಒಪ್ಪಿಕೊಂಡಿರುತ್ತಾರೆ. ಈ ಅಂಶವನ್ನು ನೋಡಿದಾಗ, ವಾದಿಯು ಪ್ರತಿವಾದಿಯ ಸ್ವಾಧೀನಾನುಭವಕ್ಕೆ ಧಕ್ಕೆ ಪಡಿಸಿದ್ದರು ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ. ಅಲ್ಲದೇ ಇಲ್ಲಿ ನಾವು ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ಪ್ರತಿವಾದಿಯು ವಾದಿಯ ಸ್ವಾಧೀನಾನುಭವಕ್ಕೆ ಧಕ್ಕೆ ಪಡಿಸಿದ್ದಾರೆ ಎಂಬ ವಾದಿಯ ವಾದಕ್ಕೆ ಸಹಕಾರಿಯಾಗಿ ಯಾವುದೇ ಒಂದು ಸಣ್ಣ ದಾಖಲೆಯೂ ಸಹಾ ನ್ಯಾಯಾಲಯದ ಕಡತದಲ್ಲಿ ಕಂಡು ಬರುವುದಿಲ್ಲ, ಒಂದು

ವೇಳೆ ಪ್ರತಿವಾದಿಯು ವಾದಿಯ ಸ್ವಾಧೀನಕ್ಕೆ ಧಕ್ಕೆ ಪಡಿಸಿದ್ದರೆ, ಕನಿಷ್ಟ ಪಕ್ಷ ವಾದಿಯು ಆ ಕುರಿತು ಪೋಲೀಸರಿಗೆ ದೂರನ್ನಾದರೂ ನೀಡಬಹುದಿತ್ತು, ಆದರೆ ಆ ರೀತ ದೂರನ್ನು ನೀಡಿದ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಈ ಎಲ್ಲಾ ಅಂಶಗಳನ್ನು ನೋಡಿದಾಗ, ಸ್ವತಃ ವಾದಿಯ ಸ್ವ ಒಪ್ಪಿಗೆಯಂತೆಯೇ ತಾನು ಪ್ರತಿವಾದಿಯವರು ಸ್ವತ್ತಿನಲ್ಲಿ ಮುಳ್ಳು ತಂತಿಯನ್ನು ಹಾಕುವಾಗ, ತಾನು ಕೂಲಿಯವರನ್ನು ಬೆದರಿಸಿರುತ್ತೇನೆ ಎಂದು ಒಪ್ಪಿಕೊಂಡಾಗ, ಪ್ರತಿವಾದಿಯವರ ಸ್ವಾಧೀನಕ್ಕೆ ವಾದಿಯು ಧಕ್ಕೆ ಪಡಿಸಿರುತ್ತಾನೆ ಎಂಬ ಬಗ್ಗೆ ಹೆಚ್ಚಿನ ವಿವರಣೆ ಅಗತ್ಯ ಇರುವುದಿಲ್ಲ. ಆದ್ದರಿಂದ ಪ್ರತಿವಾದಿಯು ತನ್ನ ಸ್ವತ್ತಿನ ಸ್ವಾಧೀನಾನುಭವಕ್ಕೆ ವಾದಿಯು ಧಕ್ಕೆ ಪಡಿಸಿರುತ್ತಾನೆ ಎಂಬ ಅಂಶವನ್ನು ರುಜುವಾತು ಪಡಿಸುವಲ್ಲಿ ಸಫಲರಾಗಿರುತ್ತಾರೆ. ಆದರೆ, ಪ್ರತಿವಾದಿಯವರು ಸ್ವತ್ತಿನ ತನ್ನ ಸ್ವಾಧೀನಕ್ಕೆ ಧಕ್ಕೆ ಪಡಿಸಿದ್ದರು ಎಂಬ ಅಂಶವನ್ನು ರುಜುವಾತು ಪಡಿಸುವಲ್ಲಿ ವಾದಿಯು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಆದ್ದರಿಂದ, ಅ ದಾ ಸಂ 78ಃ2003ರ ವಿವಾದಾಂಶ 2ನ್ನು ನಕಾರಾತ್ಮಕವಾಗಿ ಮತ್ತು ಅ ದಾ ಸಂ 59ಃ2009ರ ವಿವಾದಾಂಶ 2ನ್ನು ಸಕಾರಾತ್ಮಕವಾಗಿ ಉತ್ತರಿಸುವುದು ಸೂಕ್ತವಾಗಿರುತ್ತದೆ.

<u>**!0:9** C zÁ ¸A **:;?="">g** **#$**Äª**&** «ªÁzÁA***** **!??**</u> ಸದರೀ ವಿವಾದಾಂಶದನ್ವಯ ಪ್ರತಿವಾದಿಯು ದಾವಾ ಸ್ವತ್ತಿನ ಕುರಿತು ತಾನು ಪ್ರತಿಕೂಲ ಸ್ವಾಧೀನಾನುಭವದಲ್ಲಿ ಇರುತ್ತೇನೆ ಎಂಬ ಅಂಶವನ್ನು ರುಜುವಾತು ಪಡಿಸಬೇಕಾಗಿರುತ್ತದೆ.

158. ಸದರೀ ವಿವಾದಾಂಶವನ್ನು ವಿವರಣೆಗೆ ತೆಗೆದುಕೊಳ್ಳುವ ಮೊದಲು ಪ್ರತಿಕೂಲ ಸ್ವಾಧೀನಾನುಭವ ಯಾವ ರೀತಿ ಪ್ರಾಪ್ತವಾಗುತ್ತದೆ ಎಂಬುದನ್ನು ವಿವರಿಸುವುದು ಅಗತ್ಯವಾಗಿರುತ್ತದೆ. ಒಬ್ಬ ವ್ಯಕ್ತಿ ಒಂದು ಸ್ವತ್ತಿನ ಕುರಿತು ಪ್ರತಿಕೂಲ ಸ್ವಾಧೀನದ ಹಕ್ಕನ್ನು ಪಡೆಯಬೇಕಾದರೆ, ಮೊದಲಿಗೆ ಸದರೀ ಸ್ವತ್ತು ಬೇರೆಯವರ ಮಾಲೀಕತ್ವಕ್ಕೆ ಒಳಪಟ್ಟ ಸ್ವತ್ತಾಗಿರಬೇಕು ಮತ್ತು ಆ ಸ್ವತ್ತಿನಲ್ಲಿ ಮಾಲೀಕತ್ವ ಇಲ್ಲದ ವ್ಯಕ್ತಿಯು ಪ್ರತಿಕೂಲವಾಗಿ 12 ವರ್ಷಗಳ ಕಾಲ ಸ್ವಾಧೀನಾನುಭವದಲ್ಲಿ ಇರಬೇಕು. ಸದರೀ ಸ್ವಾಧೀನಾನುಭವ ಸ್ವತ್ತಿನ

ಮಾಲೀಕನ ಗಮನದಲ್ಲಿ ಇರುವ ಹಾಗೆ ಇರಬೇಕು. ಹಾಗಿದ್ದಲ್ಲಿ ಮಾತ್ರ 12 ವರ್ಷಗಳ ನಂತರ ಪ್ರತಿಕೂಲ ಸ್ವಾಧೀನಾನುಭದಲ್ಲಿದ್ದ ವ್ಯಕ್ತಿಯು ಸ್ವತ್ತಿನ ಕುರಿತು ತನ್ನ ಪ್ರತಿಕೂಲ ಸ್ವಾಧೀನಾನುಭವದ ಹಕ್ಕನ್ನು ಕೇಳಲು ಅರ್ಹನಾಗಿರುತ್ತಾನೆ.

159. ಆದರೆ ಈ ಒಂದು ದಾವೆಯಲ್ಲಿ ಪ್ರತಿವಾದಿಯು ಸ್ವತಃ ತಾನೇ ಹೇಳುವಂತೆ ನಿ ಡಿ 40ರ ಪ್ರಕಾರ ಸದರೀ ಸ್ವತ್ತನ್ನು ಕ್ರಯಕ್ಕೆ ಪಡೆದಿರುತ್ತೇನೆ ಎಂದು ಹೇಳಿದಾಗ, ಸದರೀ ಸ್ವತ್ತು ಪ್ರತಿವಾದಿಯ ಪ್ರತಿಕೂಲ ಸ್ವಾಧೀನಾನುಭವಕ್ಕೆ ಬರಲು ಹೇಗೆ ಸಾಧ್ಯ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅಲ್ಲದೇ, ಸದರೀ ಹೇಳಿಕೆಯು ಪ್ರತಿವಾದಿಯ ತನ್ನ ಸ್ವಹೇಳಿಕೆಗೆ ವಿರುದ್ಧವಾಗಿರುತ್ತದೆ. ಅಲ್ಲದೇ, ಸದರೀ ವಿವಾದಾಂಶದ ಕುರಿತು ಪ್ರತಿವಾದಿಯು ಯಾವುದೇ ಒಂದು ಸಣ್ಣ ಸಾಕ್ಷ್ಯಾಧಾರವನ್ನು ಸಹಾ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಹೀಗಿರುವಾಗ, ಯಾವುದೇ ರೀತಿಯ ಸಾಕ್ಯೈಧಾರವಿಲ್ಲದೆ, ಕೇವಲ ಪ್ರತಿವಾದ ಪತ್ರದ ಅಂಶಗಳ ಆಧಾರದ ಮೇರೆಯೇ ಪ್ರತಿವಾದಿ ಪ್ರಸ್ತುತ ವಿವಾದಾಂಶವನ್ನು ರುಜುವಾತು ಪಡಿಸಿರುತ್ತಾನೆ ಎಂದು ಹೇಳಲಾಗುವುದಿಲ್ಲ. ಆದ್ದರಿಂದ ಸದರೀ ವಿವಾದಾಂಶವನ್ನು ನಕಾರಾತ್ಮಕವಾಗಿ ಉತ್ತರಿಸುವುದು ಸೂಕ್ತವಾಗಿರುತ್ತದೆ.

!N"9 C zÁ ¸A :;?="">g «ªÁzÁA* V8 C zÁ ¸A 0 ?="" g «ªÁzÁA* V ªÄ+Ä 0 « ಈ ಎಲ್ಲಾ ವಿವಾದಾಂಶಗಳು ಒಂದಕ್ಕೊಂದು ಪೂರಕವಾಗಿದ್ದು ಸಾಕ್ಷ್ಯಾಧಾರಗಳನ್ನು ಮತ್ತು ಕಾನೂನಿನ ಅಂಶಗಳನ್ನು ಪರಿಣಾಮಕಾರಿಯಾಗಿ ಚರ್ಚಿಸಲು ಮತ್ತು ಮರು ವಿವರಣೆಯನ್ನು ತಪ್ಪಿಸಲು ಈ ಎಲ್ಲಾ ವಿವಾದಾಂಶಗಳನ್ನು ಏಕಕಾಲಕ್ಕೆ ಚರ್ಚಿಸಿ ನಿರ್ಣಯಕ್ಕೆ ತೆಗೆದುಕೊಳ್ಳಲಾಗಿದೆ.

161. ಈ ವಿವಾದಾಂಶಗಳ ಪ್ರಕಾರ ಎರಡೂ ಪ್ರಕರಣದ ಪಕ್ಷಗಾರರು ತಾವು ಕೋರಿದಂತೆ ಆದೇಶವನ್ನು ಪಡೆಯಲು ಅರ್ಹರಾಗಿರುತ್ತಾರೆ ಎಂಬ ಅಂಶವನ್ನು ರುಜುವಾತುಪಡಿಸಬೇಕಾಗಿರುತ್ತದೆ.

162. ಈಗಾಗಲೇ ಅ ದಾ ಸಂ 78ಃ2003ರಲ್ಲಿ ವಿವಾದಾಂಶ 3ರ ಪ್ರಕಾರ ಮತ್ತು ಅ ದಾ ಸಂ 59ಃ2009ರಲ್ಲಿ ವಿವಾದಾಂಶ 1ರ ಪ್ರಕಾರ ಪ್ರತಿವಾದಿಯು ತಾನೇ ದಾವಾ ಸ್ವತ್ತಿನ ನಿರೂಪಾದಿಕ ಮಾಲೀಕನಾಗಿದ್ದು, ಸ್ವಾಧೀನಾನುಭವವನ್ನು ಹೊಂದಿರುತ್ತೇನೆ ಎಂದು ಮತ್ತು ವಾದಿಗೂ ಮತ್ತು ದಾವಾ ಸ್ವತ್ತಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂಬ ಅಂಶವನ್ನು ಸಾಕ್ಷ್ಯಾಧಾರಗಳ ಮುಖಾಂತರ ರುಜುವಾತು ಪಡಿಸಿರುತ್ತಾರೆ. ಅಲ್ಲದೇ, ವಾದಿಯು ತನ್ನ ಸ್ವಾಧೀನಾನುಭವಕ್ಕೆ ಧಕ್ಕೆ ಪಡಿಸಿರುತ್ತಾನೆ ಎಂಬ ಅಂಶವನ್ನೂ ಸಹಾ ಅ ದಾ ಸಂ 59ಃ2009ರ ವಿವಾದಾಂಶ 2ರ ಪ್ರಕಾರ ಸ್ಪಷ್ಟವಾಗಿ ರುಜುವಾತು ಪಡಿಸಿರುತ್ತಾರೆ. ಅಲ್ಲದೇ, ಪ್ರತಿವಾದಿಯು ದಾವಾ ಸ್ವತ್ತಿನ ಕುರಿತು ತನ್ನ ಹಕ್ಕು, ಅಧಿಕಾರ, ಮಾಲೀಕತ್ವ ಮತ್ತು ಸ್ವಾಧೀನನಾುಭವವನ್ನು ಅನೇಕ ನೊಂದಾಯಿತ ಪತ್ರಗಳ ಮೂಲಕ ರುಜುವಾತು ಪಡಿಸಲು ಸಫಲರಾಗಿದ್ದು, ಅದೇ ರೀತಿ ಸದರೀ ಸ್ವತ್ತಿನ ಕುರಿತು ವಾದಿಗೆ ಯಾವುದೇ ಹಕ್ಕು, ಅಧಿಕಾರ ಸ್ವಾಧೀನ ಇಲ್ಲ ಎಂಬ ಅಂಶವನ್ನೂ ಸಹಾ ಸ್ಪಷ್ಟವಾಗಿ ರುಜುವಾತು ಪಡಿಸಿರುತ್ತಾರೆ. ಅದಕ್ಕೆ ಪ್ರತಿಯಾಗಿ ವಾದಿಯು ದಾವಾ ಸ್ವತಿತನಲ್ಲಿ ತನಗೆ ಹಕ್ಕು, ಅಧಿಕಾರ ಸ್ವಾಧೀನ, ಹಿತಾಸಕ್ತಿ ಮತ್ತು ಮಾಲೀಕತ್ವ ಇದೆ ಎಂಬ ಅಂಶವನ್ನು ರುಜುವಾತು ಪಡಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಅಲ್ಲದೇ ವಾದಿಯು ತನ್ನ ವಾದಕ್ಕೆ ಸಹಕಾರಿಯಾಗಿ ಕೇವಲ ಕಂದಾಯ ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆ ಹೊರತು, ಹಕ್ಕನ್ನು ರುಜುವಾತು ಪಡಿಸುವಂತಹ ಯಾವುದೇ ಸಾಕ್ಷ್ಯಾಧಾರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಈ ದಾವೆಯ ಪ್ರತಿವಾದಿಯು ತಾನು ಕೋರಿದಂತೆ ಪರಿಹಾರವನ್ನು ಪಡೆಯಲು ಅರ್ಹರಾಗಿರುತ್ತಾರೆ. ಪ್ರತಿಯಾಗಿ, ವಾದಿಯು ತನ್ನ ವಾದದಂತೆ ಪ್ರಕರಣವನ್ನು ರುಜುವಾತು ಪಡಿಸಲು ವಿಫಲರಾಗಿದ್ದ ಕಾರಣ ತಾನು ಕೋರಿದ ಪರಿಹಾರವನ್ನು ಪಡೆಯಲು ಅರ್ಹರಾಗಿರುವುದಿಲ್ಲ. ಈ ಮೇಲಿನ ಎಲ್ಲಾ ಕಾರಣಗಳಿಂದ ಅ ದಾ ಸಂ 78ಃ2003ರ ವಿವಾದಾಂಶ 4ನ್ನು ನಕಾರಾತ್ಮಕವಾಗಿ ಮತ್ತು ಅ ದಾ ಸಂ 59ಃ2009ರ ವಿವಾದಾಂಶ 4 ಮತ್ತು 5ನ್ನು ಸಕಾರಾತ್ಮಕವಾಗಿ ಉತ್ತರಿಸುವುದು ಸೂಕ್ತವಾಗಿರುತ್ತದೆ.

163.C zÁ ¸A **:;?=""**>g «ªÁzÁA* 0 C zÁ ¸A 0 ?="" g «ªÁzÁA* N « ಈ ಕೆಳಕಂಡಂತೆ ಆದೇಶ ಮಾಡಿರುತ್ತೇನೆ.

D zÃ *

C zÁ ¸A **:;?=""**>g zÁªAiÄ£Ä ª-Á ªiÁ**S**¯Á**d**z9

C zÁ ¸A 0 ?="" g zÁªAiÄ£Ä **AL** ªiÁ**S**¯Á**d**z9

¸z&Ã **AL**C£AiÄ ¸ £A N>?0 ªÄ+Ä ¸ £A N!?VPl ¥lwªÁ(AiÄªgÃ \gÆ¥Á(P ªiÁ**F**ÃPgÁ**d** ¸Á(Ã£Á£Ä**J**ªz**F** **f**gÄ+ÁgAzÄ **g** ªÄÆ®P DzÃ**5**¸¯Á**d**z9

CzÃ &Ãw ªÁ(AiiÁ**0F**Ã C**h**ªÁ CªgÀ ¥g AiiÁªÀzÃ ª**L0@**Á**0F**Ã ¸ £A N>?0 ªÄ+Ä ¸ £A N!?VPl ¸A**G**A(¹ ¥lwªÁ(AiÄ *ÁAwAiÄÄ+ ¸Á(Ã£Pl zPl ¥**S**¸zA+ *Á*l+ **G**ðAzPÁ**i** DzÃ*ª£Ä \Ã**S**¯Á**d**z9

wÃ¦ð£ C¸**F**Ã ¥lwAiÄ£Ä C zÁ ¸A **:;?=""**>g**F** **f****S**¯Á**d**z9 Czg £P**F**Ã ¥lwAiÄ£Ä C zÁ ¸A 0 ?="" g**F** **f****S**®Ä CzÃ**5**¹z9

R**]**ð£ **G0** AiiÁªÀzÃ DzÃ*«gÄªÀ(®9 **AL**AiÄ£Ä +AiiÁ&¸®Ä DzÃ**5**¹z9

ಮೇಲ್ಕಂಡ ತೀರ್ಪನ್ನು ಶೀಘ್ರಲಿಪಿಗಾರ್ತಿಗೆ ಉಕ್ತಲೇಖನ ನೀಡಿದ್ದು ನಂತರ ಒದಿ ತಿದ್ದಿ ತೆರದ ನ್ಯಾಯಾಲಯದಲ್ಲಿ ಇದೇ ದಿನ ಅಂದರೆ ದಿ:30.07.2016ರಂದು ವಿದ್ಯುಕ್ತವಾಗಿ ಘೋಷಿಸಲಾಯಿತು.

(¸A(Ã¥ï ¥Á**7**Ã¯ï)
#$Äª**&** ¹«¯ï £Á'AiiÁ(Ã*gÄ
01&2z£ÆgÀ9

CÉÄ**G**Az

C zÁ ¸A **:;?="">**

ªÁ(AiÄ ¥g «$ÁgI ªiÁAz ¸ÁLIzÁggÄ??

ಪಿಡಬ್ಲ್ಯೂ 1	ಆರ್ ಹನುಮಂತರೆಡ್ಡಿ
ಪಿಡಬ್ಲ್ಯೂ 2	ಶ್ರೀರಾಮರೆಡ್ಡಿ
ಪಿಡಬ್ಲ್ಯೂ 3	ಗಂಗರೆಡ್ಡಿ

ªÁ(AiÄ ¥g #ÁZgÄ¥A¹z zÁR¯Áw0@Ä??

ನಿ ಪಿ 1, 2	ಪಹಣಿ ಪತ್ರಿಕೆಗಳು
ನಿ ಪಿ 3	ರಶೀದಿ ಪಟ್ಟಿ
ನಿ ಪಿ 4	ಕಂದಾಯ ಪಾವತಿ ಮಾಡಿದ ರಶೀದಿ ದಿಃ25.11.2011
ನಿ ಪಿ 5 ರಿಂದ 9	ಪಹಣಿ ಪತ್ರಿಕೆಗಳು
ನಿ ಪಿ 10	ಕಂದಾಯ ಪಾವತಿ ಮಾಡಿದ ರಶೀದಿ
ನಿ ಪಿ 11	ದಿಃ10.5.2002ನೇ ಇಸವಿಯ ಶುದ್ದ ಕ್ರಯದ ದಾಸ್ತಾವೇಜು ದೃಢೀಕೃತ ದಾಖಲೆ
ನಿ ಪಿ 12	ಋಣಭಾರ ರಾಹಿತ್ಯ ಪ್ರಮಾಣ ಪತ್ರ
ನಿ ಪಿ 13	ದಿಃ 9.4.1964ರ ಮೂಲ ಕ್ರಯ ಪತ್ರ

¥ÀwªÁ(AiÄ ¥g «$ÁgI ªiÁAz ¸ÁLIzÁggÄ??

ಡಿಡಬ್ಲ್ಯೂ 1	ಕೆ.ಹೆಚ್.ಸೋಮಶೇಖರರೆಡ್ಡಿ
ಡಿಡಬ್ಲ್ಯೂ 2	ಅಪ್ಪಿರೆಡ್ಡಿ
ಡಿಡಬ್ಲ್ಯೂ 3	ಅಂಜಿನಪ್ಪ
ಡಿಡಬ್ಲ್ಯೂ 4	ಗಂಗರೆಡ್ಡಿ

¥ÀwªÁ(¥g #ÁZgÄ ¥A¹z zÁR¯Áw0@Ä??

ನಿ ಡಿ 1	ಕಚ್ಚಾ ನಕಾಶೆ
ನಿ ಡಿ 2	ರೆಕಾರ್ಡ್ ಆಫ್ ರೈಟ್ಸ್
ನಿ ಡಿ 3	ಅಡಮಾನ ಪತ್ರ
ನಿ ಡಿ 4	ಋಣಭಾರ ಪತ್ರ
ನಿ ಡಿ 5	ಮ್ಯುಟೇಶನ್ ವಹಿ
ನಿ ಡಿ 6	ದಾವಾ ಸ್ವತ್ತಿಗೆ ಸಂಬಂಧಿಸಿದ ಹಿಸ್ಸಾ ಟಿಪ್ಪಣಿ
ನಿ ಡಿ 7 ರಿಂದ 10	ಮೋಜಣಿ ನಕಾಶೆಗಳು
ನಿ ಡಿ 11	ದಿಃ5.7.85ರ ಕ್ರಯ ಪತ್ರದ ದೃಢೀಕೃತ ನಕಲು
ನಿ ಡಿ 12	ದಿಃ15.12.65ರ ಕ್ರಯ ಪತ್ರದ ದೃಢೀಕೃತ ನಕಲು
ನಿ ಡಿ 13	ದಿಃ15.10.53ರ ಕ್ರಯ ಪತ್ರದ ಮೂಲ ದಾಖಲೆ
ನಿ ಡಿ 14, 15	ಹಿಸ್ಸಾ ಟಿಪ್ಪಣಿಗಳು

ನಿ ಡಿ 16, 17	1988-89 ರಿಂದ 1990-91ರ ವರೆಗಿನ ಪಹಣಿಗಳು
ನಿ ಡಿ 18	ದಿ:9.4.1964ರ ಕ್ರಯ ಪತ್ರದ ದೃಡೀಕೃತ ನಕಲು
ನಿ ಡಿ 19, 20	ಐ ಎಲ್ ಮತ್ತು ಆರ್ ಆರ್ ಪ್ರತಿಗಳು
ನಿ ಡಿ 21	ಸರ್ವೆ ನಂ.63/5ರ ಪಹಣಿ
ನಿ ಡಿ 22	ಸರ್ವೆ ನಂ.61/2ರ ಪಹಣಿ
ನಿ ಡಿ 23	ಸರ್ವೆ ನಂ.61/3ರ ಪಹಣಿ
ನಿ ಡಿ 24	ದಿ:10.10.1949ರ ಬೋಗ್ಯ ಪತ್ರದ ದೃಡೀಕೃತ ನಕಲು
ನಿ ಡಿ 25	ದಿ:16.12.86ರ ಕ್ರಯ ಪತ್ರದ ದೃಡೀಕೃತ ನಕಲು
ನಿ ಡಿ 26	ದಿ:17.2.09ರ ಆ.ಉ.ನಿ. ನೀಡಿದ ದೂರಿನ ಪ್ರತಿ
ನಿ ಡಿ 27	ದಿ:10.5.02ರ ಕ್ರಯ ಪತ್ರದ ದೃಡೀಕೃತ ನಕಲು
ನಿ ಡಿ 28	ದಿ:13.07.06ರ ಐಸಿಐಸಿಐ ಬ್ಯಾಂಕಿಗೆ ನೀಡಿದ ಬೋಗ್ಯ ಪತ್ರದ ದೃಡೀಕೃತ ನಕಲು
ನಿ ಡಿ 29	ಕೆ ಎನ್ ಅಪ್ಪಿರೆಡಿರವರ ಪ್ರಮಾಣ ಪತ್ರ
ನಿ ಡಿ 30	ಗಂಗರೆಡ್ಡಿರವರ ಪ್ರಮಾಣ ಪತ್ರ
ನಿ ಡಿ 31	ಅಂಜಿನಪ್ಪರವರ ಪ್ರಮಾಣ ಪತ್ರ
ನಿ ಡಿ 32	ಖಾನ್‌ಸಾಬಿರವರ ಪ್ರಮಾಣ ಪತ್ರ
ನಿ ಡಿ 33	ಅಜೀಜ್‌ರವರ ಪ್ರಮಾಣ ಪತ್ರ
ನಿ ಡಿ 34	ಅ ದಾ ಸಂಖ್ಯೆ 78/03ರ ಅರ್ಜಿಯ ಆದೇಶದ ದೃಡೀಕೃತ ನಕಲು
ನಿ ಡಿ 35	ದಿ:25.8.66ರ ಕ್ರಯಪತ್ರದ ದೃಡೀಕೃತ ನಕಲು
ನಿ ಡಿ 36, 37	ಕಚ್ಚಾ ನಕಾಶೆ
ನಿ ಡಿ 38	ಮ್ಯುಟೇಶನ್ ಪ್ರತಿ
ನಿ ಡಿ 39	ಸರ್ವೆ ನಂ.63/5ರ ಮ್ಯುಟೇಶನ್
ನಿ ಡಿ 40	ದಿ:25.8.66ರ ಕ್ರಯ ಪತ್ರ
ನಿ ಡಿ 41 ರಿಂದ 43	ಐ ಎಲ್ ಮತ್ತು ಆರ್ ಆರ್ ಪ್ರತಿಗಳು
ನಿ ಡಿ 44 ರಿಂದ 51	8 ಕಚ್ಚಾ ನಕಾಶೆಗಳು
ನಿ ಡಿ 52	ಅಂತರ್ಜಾಲದ ಛಾಯ ಚಿತ್ರ

(¸A(Ã¥ï ¥Á7Ã¯ï)
#$Äª& ¹«¯ï £ÁAiiÁ(Ã*gÄ
01&2 z£ÆgÄ9

D zÃ *

C zÁ ¸A :;?="">g zÁªAiÄ£Ä ª-Á ªiÁS¯Ádz9

C zÁ ¸A 0 ?="" g zÁªAiÄ£Ä ALÉ ªiÁS¯Ádz9

¸z&Ã ALÉC£ÉAiÄ ¸ £A N>?0 ªÄ+Ä ¸ £A N!?VP ¥Éwª Á(AiÄªgÃ \gÆ¥Á(P ªiÁFÃPgÁd ¸ÁÉ(Ã£Á£ÄJªzF fgÄ+ÁgAzÄ g ªÄÆ®P DzÃ5¸¯Ádz9

CzÃ &Ãw ªÁ(AiiÁ0FÃ ChªÁ Cªg ¥g AiiÁªÅzÃ ªL0@Á0FÃ ¸ £A N>?0 ªÄ+Ä ¸ £A N!?VP ¸AGA(¹ ¥Éwª Á(AiÄ *ÁAwAiÄÄ+ ¸ÁÉ(Ã£P

zPï ¥S¸zA+ *Á*¦+ \GðAzPÁi DzÃ*ª£Ä
\ÃS¯Ádz9

wÃ¦ð£ C¸FÃ ¥ÌwAiÄ£Ä C zÁ ¸A
:;?="">gF fS¯Ádz9 Czg £PFÃ ¥ÌwAiÄ£Ä C
zÁ ¸A 0 ?="" gF fS®Ä CzÃ5¹z9

R]ð£ G0 AiiÁªÀzÃ DzÃ*«gÄªÀ(®9

ALÌAiÄ£Ä +AiiÁ&¸®Ä DzÃ5¹z9

ತೀರ್ಪು ಬೇರೆ ಹಾಳೆಗಳಲ್ಲಿ

(¸A(Ã¥ï ¥Á7Ã¯ï)
#$Äª& ¹«¯ï £ÁAiiÁ(Ã*gÄ
01&2z£ÆgÄ9

ur Hon'ble High Court of Karnataka reported in **2014 (4) AKR 25, between A.N.Nagarajaiah V/s B.Arvinda and Others, has clearly held that, recitals in the sale deed regarding handing over possession of suit property stands on higher footing than entries in the revenue records**. Thus, the

2013(2) Karnataka Law Journal 121, between Hulappa v/s State of Karnataka wherein our Hon'ble High Court has clearly held that in a suit for declaration of title, unless the plaintiff produces the document of title, the Civil Court cannot grant declaration on the basis of the record of rights, tax paid receipts or some communication or letters.

D zÃ *

C zÁ ¸A !0N?="">g zÁªAiÄ£Ä AL ªiÁS¯Ádz9

C zÁ ¸A =>=?="">g zÁªAiÄ£Ä ª-Á ªiÁS¯Ádz9

¸z&Ã ALC£AiÄ zÁªÁ ¸w£ PÄ&+Ä (?:909="">gAzÄ !£Ã ¥wªÁ(AiÄÄ =£Ã ¥wªÁ(0 GgzÄPÆ l £ÆAzÁ_Ä+ PAiÄ ¥+ª£Ä gzÄ0ÆH¸¯Ádz9

¥wªÁ(AiÄgÁ0FÃ ChªÁ Cªg ¥g AiiÁªÅzÃ ªL0@Á0FÃ zÁªÁ ¸w£ PÄ&+Ä ªÁ(AiÄg *ÁAwAiÄÄ+ ¸Á(Ã£P zP ¥S¸zA+ *Á*+ \GðAzPÁi DzÃ*ª£Ä \ÃS¯Ádz9

wÃ¦ðÉ C¸**F**Ã ¥ÌwAiÀÄ£ÀÄ C zÁ ¸A

!0N?="">gF **fS**¯Á**d**z9 Czg £P**F**Ã ¥ÌwAiÀÄ£ÀÄ C

zÁ ¸A **=>=?="">g**F **fS**®Ä CzÃ**5**¹z9

R**]**ðÉ **G0** AiiÁªÅzÃ DzÃ*****«gÄªÅ**(**®9

ALÌAiÀÄ£ÀÄ **+**AiiÁ**&**¸®Ä DzÃ**5**¹z9

ತೀರ್ಪು ಬೇರೆ ಹಾಳೆಗಳಲ್ಲಿ

(¸A**(**Ã¥ï ¥Á**7**Ã¯ï)
#$Äª¯**&** ¹«¯ï £Á'Aii iÁ**(**Ã*****gÄ
01&2z£ÆgÄ9

1) ILR 2014 KAR 4726 in the case between **Janatha Dal Partyt, Bangalore VS The Indian National Congress & others.**

2) 2001 (6) KAR L.J. 213 (D.B) in the case between **Union of India VS C-dinakar.**

3) 2014(2) S.C.C. 269 – Union of Co-operative Housing Society Ltd.

4) AIR 1987 KERALA 42, AIR 1964 S.C. 1254, O.6, R.2 C.P.C.

5) ILR 2012 KAR 4958, in the case between **Hullappa VS The State of Karnataka, through Deputy Commissioner, Bidar and others**

6) AIR 1963 Supreme Court 1879 (V 50 C 267) (From Patna: AIR 1956 Pat 349) in the case between **Sheodhyan Singh and others, VS Mst.Sanichara Kuer and others**

7) 1993(1) Kar.L.J.82 (DB), In the High Court of Karnataka at Bangalore in the case between **S.Halappa VS Assistant Commissioner, Shimoga Sub-Division, Shimoga and others.**

8) ILR 1995 KAR 1332 in the case between **Mahadevaiah VS Scheduled Caste (Harijan) House Building Co-operative Society Ltd.**

9) ILR 1996 KAR 1340 in the case between **Alla Baksh vS Mohd.Hussain**

10) **AIR 1989 Supreme Court 1269** in the case between **Smt. Chandrakantaben J. Modi and Narendra Jayantila Modi VS Vadilal Bapalal Modi and others.**

11) ILR 1995 KAR 1114 in the case between **Nagaraj VS Kulluramma**

12) ILR 2006 KAR 3018 in the case between **Avvamma VS The State of Karnataka, by its Secretary and others.**

13) ILR 1998 KAR 1840 in the case between **Alla Baksh VS Mohd. Hussain**

14) ILR 1996 KAR VS 1934 in the case between **Smt. Chandrakantaben J. Modi and Narendra Jayantila Modi**

15) ILR 2000 KAR 435 in the case between **P.Prabhavathi and another VS Divisional Controller and others.**

16) HCR 2014 Kant.833, Karntaka High Court in the case between **R.Satish Kumar Singh VS Ramsingh and others.**

17) AIR 2006 KARNATAKA 199 in the case between **Seethamma & Anr. VS Bathenna & Anr.**

18) 2006 ILR KAR 4637 in the case between **O.Leelavathi & others VS M. Neelakanta Naidu and Others.**

19) AIR 1996 BOMBAY 98 in the case between **Smt.Sarladevi VS Shailesh**

20) ILR 2007 KAR 3216 in the case between **Mrs.Mallika and others VS Mr.Chandrappa and others.**

21) AIR 1995 KARNATAKA 35 in the case between **The Vijaya College Trust, VS The Kumta Co-Operative Arecanut Sales Society Limited and another**

22) ILR 2012 KAR 4958 in the case between **Hullappa VS The State of Karnataka, through Deputy Commissioner, Bidar and others.**